Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 46 | ನವೆಂಬರ್ 7–13, 2022 | ಪುಟ 16 | ರೂ.10/-

Volume: 16 Issue: 46 November 7-13, 2022 Pages: 16 Price: 10/-

https://janashakthi.wordpress.com e-mail : js_weekly@yahoo.com



ಕುಲಾಂತರ ತಳಿ: ವಾಣಿಜ್ಯ ಬಳಕೆಗೆ ಆತುರ ಬೇಡ








‘ನಾವು ಭೂಮಿ ಕೊಡೋಲ್ಲ’

ಭೂಮಿ ಕಸಿಯಲು ಬಿಡದ ದೇವನಹಳ್ಳಿ ಸ್ವಾಭಿಮಾನಿ ರೈತರು




ಜಾಗತಿಕ ಬಂಡವಾಳ ಹೂಡಿಕೆ

ಎನ್ನುವ ಲೂಟಿಯ ಆಟ



ಕೇರಳದಲ್ಲಿ ‘ಇಷ್ಟದಾಟ’ ರಾಜ್ಯಪಾಲರದೋ ಅಥವಾ...?

ಬ್ರೆಜಿಲ್ ಚುನಾವಣೆಯಲ್ಲಿ ಲೂಲಾ ವಿಜಯದ ಮಹತ್ವ



ಭಾಗ – 2

‘ವೀರ’ ಸಾವರ್ಕರ್– ಏಳು ಮಿಥ್ಯೆಗಳು

74 ವರ್ಷಗಳ ಹಿಂದೆ ಸ್ವತಂತ್ರ ಭಾರತದ ಮೊದಲ ಗೃಹಮಂತ್ರಿ ಸರ್ದಾರ್ ವಲ್ಲಭಬಾಯಿ ಪಟೇಲ್ ಮಹಾತ್ಮ ಗಾಂಧಿಯವರ ಹತ್ಯೆಗೆ ಕಾರಣರಾದವರೆಂದು ಹೇಳಿದ್ದ ವಿ.ಡಿ.ಸಾವರ್ಕರ್ ರವರನ್ನು ಇಂದು ದೇಶವನ್ನು ಆಳುತ್ತಿರುವ ಮಂದಿ ಸ್ವಾತಂತ್ರ್ಯ ಸಮರದ ‘ವೀರ’ ಎನ್ನುತ್ತಿದ್ದಾರೆ. ಈ ಕುರಿತ ಮಿಥ್ಯೆಗಳನ್ನು ಹೆಣೆಯುವ, ಪಸರಿಸುವ ಪ್ರಯತ್ನಗಳು ನಡೆಯುತ್ತಿವೆ, ಸಹಜವಾಗಿ ಈ ಮಿಥ್ಯೆಗಳನ್ನು ಬಯಲಿಗೆಳೆಯುವ ಪ್ರಯತ್ನಗಳೂ ನಡೆದಿವೆ. ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್ಡ್’ ಅಂತಹ ಒಂದು ಪ್ರಮುಖ ಕೃತಿ. ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಈ ಕೃತಿ ಹಿಂದೂ ಮಹಾಸಭಾ, ಆರೆಸೆಸ್ ಮತ್ತು ಭಾರತ ಸರಕಾರದ ಪತ್ರಾಗಾರಗಳಲ್ಲಿ ಇರುವ ಮೂಲ ದಸ್ತಾವೇಜುಗಳು ಮತ್ತು ಅಂಡಮಾನ್ ಜೈಲಿನಲ್ಲಿ ಸಾವರ್ಕರ್ ಜತೆಗಿದ್ದ ಕ್ರಾಂತಿಕಾರಿಗಳ ಸ್ಮರಣೆಗಳನ್ನು ಆಧರಿಸಿದೆ. ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಈ ಕೃತಿಯ ಪ್ರಸ್ತಾವನೆಯ ಮೊದಲ ಭಾಗದಲ್ಲಿ ಸಾವರ್ಕರ್ ಅವರನ್ನು ರಾಷ್ಟ್ರೀಯ ನೇತಾರನನ್ನಾಗಿ ಬಿಂಬಿಸುವ ಯಾವುದೇ ಯೋಜನೆ 1998 ಕ್ಕೂ ಮುಂಚೆ ಹಿಂದುತ್ವ ಬ್ರಿಗೇಡಿಗೆ ಇರಲಿಲ್ಲ, ನಂತರ ಅದು ಮುನ್ನೆಲೆಗೆ ಬರುವಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರವೂ ಇದೆ ಎಂಬುದನ್ನು ಪರಿಶೀಲಿಸುತ್ತ ಸಾವರ್ಕರ್ ಅವರ ಹೊಗಳುಭಟರ ತಂಡದಲ್ಲಿ ಕಾಂಗ್ರೆಸ್ ಕೂಡ ಸೇರಿಕೊಂಡದ್ದು ವಿಷಾದದ ಸಂಗತಿ ಎಂದು ಲೇಖಕರು ಹೇಳಿರುವುದನ್ನು ಓದಿದ್ದೀರಿ...ಮುಂದೆ ಓದಿ..

ಡಾ.ಶಮ್ಸುಲ್ ಇಸ್ಲಾಂ ಅನು: ಟಿ.ಸುರೇಂದ್ರ ರಾವ್

ನಿಜಾಂಶಗಳು ಮತ್ತು ಸುಳ್ಳುಪುರಾಣಗಳ ನಡುವಿನ ವ್ಯತ್ಯಾಸಗಳನ್ನು ಅರಿತುಕೊಳ್ಳಲು.. ..

ಭಾರತದ ಸ್ವಾತಂತ್ರ್ಯ ಚಳುವಳಿಯ ಇತಿಹಾಸವು ತೆರೆದುಕೊಂಡಂತೆ ಲಭ್ಯವಾದ ಕೆಲವು ಚಾರಿತ್ರಿಕ ವಾಸ್ತವಾಂಶಗಳನ್ನು ಮಂಡಿಸುವ ಸಲುವಾಗಿ ನಡೆಸಿದ ಪ್ರಾಮಾಣಿಕ ಹಂಬಲದ ಫಲವೇ ಈ ಪುಸ್ತಕ. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ನೈಜ ಸಾವರ್ಕರ್ ಅವರನ್ನು ತಿಳಿಯುವ ಸಲುವಾಗಿ ಈ ಲೇಖಕರು ಹಿಂದೂ ಮಹಾಸಭಾ, ಆರ್.ಎಸ್.ಎಸ್. ಮತ್ತು ಭಾರತ ಸರ್ಕಾರದ ಸಾರ್ವಜನಿಕ ಪತ್ರಾಗಾರದ ಮೂಲ ದಾಖಲೆಗಳನ್ನು ಪ್ರಧಾನವಾಗಿ ಅವಲಂಬಿಸಿದ್ದಾರೆ. ಸಾವರ್ಕರ್ ಅವರ ಜತೆಯಲ್ಲಿ ಅಂಡಮಾನಿನ ಗೂಡು ಜೈಲಿನಲ್ಲಿದ್ದ ಕ್ರಾಂತಿಕಾರಿಗಳ ಆತ್ಮಕಥೆ ಅಥವಾ ಜೀವನ ವೃತ್ತಾಂತಗಳಲ್ಲಿನ ಮಾಹಿತಿಗಳನ್ನು ಕೂಡ ಅಮೂಲ್ಯ ಆಕರಗಳನ್ನಾಗಿ ಬಳಸಲಾಗಿದೆ. ಬಹುವಾಗಿ ಹಿಂದೂಮಹಾಸಭಾ ಪ್ರಕಟಿಸಿದ ಪುಸ್ತಕಗಳಲ್ಲಿ – **ಸಮಗ್ರ ಸಾವರ್ಕರ್ ವಾಙ್ಮಯ–ಹಿಂದೂ ರಾಷ್ಟ್ರ ದರ್ಶನ (ಸಾವರ್ಕರ್ ಅವರ ಕಲೆಕ್ಟೆಡ್ ವರ್ಕ್ಸ್ – 1963) ಮತ್ತು ವಿನಾಯಕ್ ದಾಮೋದರ್ ಸಾವರ್ಕರ್ ವರ್ಲ್‌ವಿಂಡ್ ಪ್ರೊಪಗಾಂಡಾ: ಎಕ್ಸ್ಟ್ರಾಕ್ಟ್ಸ್ ಫ್ರಂ ದಿ ಪ್ರಸಿಡೆಂಟ್ಸ್ ಡೈರಿ ಆಫ್ ಹಿಸ್ ಪ್ರೊಪಗಾಂಡಿಸ್ಟ್ ಟೂರ್ಸ್ ಇಂಟರ್‌ವ್ಯೂಸ್ ಫ್ರಂ ಡಿಸೆಂಬರ್ 1937 ಟು ಅಕ್ಟೋಬರ್ 1941,** ಈ ಪುಸ್ತಕಗಳಲ್ಲಿ ಸಾವರ್ಕರ್ ಅವರ ದೇಶ ವಿರೋಧಿ ಪರಂಪರೆಯನ್ನು ಕಾಣಬಹುದು. ನಿಜವಾದ ಸಾವರ್ಕರ್ ಅವರನ್ನು ತಿಳಿದುಕೊಳ್ಳಲು ಈ ಎರಡನೇ ಪುಸ್ತಕವು ಬಹಳ ನಿರ್ಣಾಯಕವಾದುದು. ಅದನ್ನು 1941 ರಲ್ಲಿ ಪ್ರಕಟಿಸಲಾಗಿದೆ ಮತ್ತು ಅದನ್ನು ಅವರ ಆಪ್ತಮಿತ್ರ ಎ.ಎಸ್.ಭಿಡೆಯವರು ಸಂಪಾದಿಸಿದ್ದರು. ಆ ಪುಸ್ತಕದ ಮುನ್ನುಡಿಯ ಪ್ರಕಾರ:

‘ಅದು ಪ್ರಥಮತಃ ಬಹು ಮುಖ್ಯವಾಗಿ ಹಿಂದೂ ಮಹಾಸಭಾ ಚಳುವಳಿಯ ಪ್ರಚಾರಕರು, ಕಾರ್ಯಕರ್ತರು ಹಾಗೂ ಮುಖಂಡರುಗಳಿಗೆ ಮತ್ತು ಬಹುವಾಗಿ ಹಿಂದೂ ಜನಸಾಮಾನ್ಯರಿಗೆ ಒಂದು ಅಧಿಕಾರಯುತ ಪಠ್ಯ ಮತ್ತು ವಿಶ್ವಾಸಾರ್ಹವಾದ ಮಾರ್ಗದರ್ಶಿಯಾಗಿ ನೆರವಾಗುತ್ತದೆ; ಹಿಂದೂಗಳು ಇವತ್ತು ಎದುರಿಸುತ್ತಿರುವ ಹಲವಾರು ವಿಸ್ತೃತ ಪ್ರಶ್ನೆಗಳು ಹಾಗೂ ಸಮಸ್ಯೆಗಳಿಗೆ ಹಿಂದೂ ಸಂಘಟನಾ ಚಳುವಳಿಯ ಮೂಲಭೂತ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ಅಳವಡಿಸುವ ವಿಧಾನಗಳ ಅರಿವು ಮೂಡಿಸುತ್ತದೆ.’

ಆ ಪುಸ್ತಕವನ್ನು ಹಿಂದೂ ಮಹಾಸಭಾದ ಪ್ರತಿಯೊಂದು ಘಟಕವೂ ಒಂದು ಕೈಪಿಡಿಯಾಗಿ ಇಟ್ಟುಕೊಳ್ಳುವುದು ಕಡ್ಡಾಯವಾಗಿತ್ತು ಮತ್ತು ಅದನ್ನು ಕಾರ್ಯಕರ್ತರ ರಾಜಕೀಯ ಶಿಕ್ಷಣಕ್ಕಾಗಿ ಮಾತ್ರವಲ್ಲದೇ ಹಲವಾರು ಪ್ರಶ್ನೆಗಳ ಮೇಲೆ ನಿಲುವುಗಳನ್ನು ಸ್ಪಷ್ಟಪಡಿಸಲು ಕೂಡ ಬಳಸಲಾಗುತ್ತಿತ್ತು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಾವರ್ಕರ್ ಅವರ ಪ್ರಾಮುಖ್ಯತೆ ಹಾಗೂ ಸಾಕ್ಷ್ಯಾಧಾರಗಳ ಬಗ್ಗೆ ದೃಢವಾದ ನಂಬಿಕೆಯಿದ್ದರೆ ಅವರ ಈ ಕೃತಿಗಳನ್ನು ಬಹಿರಂಗಪಡಿಸಲಿ, ಸಂಬಂಧಪಟ್ಟವರಿಂದಲೇ ಅದು ಈ ದೇಶದ ಜನರಿಗೆ ತಿಳಿಯಲಿ; ಆಗ ಹಿಂದುತ್ವದ ಇತ್ತೀಚಿನ ಪೂಜನೀಯರ ಬಗ್ಗೆ ಜನರೇ ವಸ್ತುನಿಷ್ಠವಾಗಿ ನಿರ್ಧರಿಸಲು ಸಾಧ್ಯವಾಗುತ್ತದೆ.

ಸಾವರ್ಕರ್ ಅವರು ಮುಸ್ಲಿಂ ಲೀಗಿನ ರೀತಿಯಲ್ಲೇ ದ್ವಿರಾಷ್ಟ್ರ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿದ್ದರು ಮತ್ತು ಆಚರಿಸುತ್ತಿದ್ದರು ಎಂಬುದನ್ನು ಹಿಂದೂಮಹಾಸಭಾದ ಪತ್ರಾಗಾರದಲ್ಲಿ ದೊರೆತ ಆಘಾತಕಾರಿ ದಾಖಲೆಗಳು ಸ್ಪಷ್ಟಪಡಿಸುತ್ತವೆ. 1937 ರಲ್ಲಿ ಹಿಂದೂಮಹಾಸಭಾದ 19ನೇ ಅಧಿವೇಶನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಸಾವರ್ಕರ್ ಅವರು ಹೀಗೆ ಹೇಳಿದರು:

“ಪರಸ್ಪರ ವಿರುದ್ಧವಾಗಿ ಕೆಲಸ ಮಾಡುವ ಎರಡು ದೇಶಗಳು ಭಾರತದಲ್ಲಿ ಈಗಾಗಲೇ ಇವೆ, ಭಾರತವು ಈಗಾಗಲೇ ಸಮರಸದಿಂದ ಬೆಸೆತುಕೊಂಡಿರುವ ದೇಶ ಅಥವಾ ಹಾಗೆಂದು ಬಯಸಿದ ಮಾತ್ರಕ್ಕೆ ಬೆಸೆತುಕೊಳ್ಳುತ್ತದೆ ಎಂದು ಭಾವಿಸುವ ಗಂಭೀರ ಪ್ರಮಾದವನ್ನು ಕೆಲವು ಬುದ್ಧಿಯಿಲ್ಲದ ರಾಜಕಾರಣಿಗಳು ಮಾಡುತ್ತಿದ್ದಾರೆ, ಇವೆಲ್ಲವೂ ಸದುದ್ದೇಶ ಉಳ್ಳದ್ದು ಆದರೆ ದೂರಾಲೋಚನೆಯಿಲ್ಲದ ಮಿತ್ರರು ಆ ಕನಸುಗಳನ್ನು ವಾಸ್ತವ ಎಂದು ತಿಳಿದುಕೊಂಡಿದ್ದಾರೆ. ಆದಕಾರಣ ಅವರು ಕೋಮುವಾದಿ ಗೋಜಲುಗಳ ಬಗ್ಗೆ ತಾಳ್ಮೆಗೆಟ್ಟಿದ್ದಾರೆ ಮತ್ತು ಅವುಗಳನ್ನು ಕೋಮುವಾದಿ ಸಂಘಟನೆಗಳೆಂದು ಆರೋಪಿಸುತ್ತಾರೆ. ಆದರೆ ನೆಚ್ಚಬಹುದಾದ ಸತ್ಯಾಂಶವೇನೆಂದರೆ ಕೋಮು ಪ್ರಶ್ನೆಗಳು ಎಂದು ಕರೆಯಬಹುದಾದವುಗಳು ಹಿಂದೂ ಮತ್ತು ಮುಸ್ಲಿಮರ ನಡುವೆ ಶತ ಶತಮಾನಗಳ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಜನಾಂಗೀಯ ವೈಷಮ್ಯಗಳ ಮೂಲಕ ಪಾರಂಪರಿಕವಾಗಿ ಹಸ್ತಾಂತರಿಸಲ್ಪಟ್ಟಿವೆ. . . ಅಹಿತಕರ ಸತ್ಯಾಂಶಗಳನ್ನು ಅವು ಇರುವಂತೆಯೇ ಹಾಗೆಯೇ ನಾವು ಧೈರ್ಯವಾಗಿ ಎದುರಿಸೋಣ. ಭಾರತವನ್ನು ಇವತ್ತು ಒಂದು ಏಕದೇವತಾರಾಧನೆಯ ಮತ್ತು ಸಮಾನಜಾತೀಯ ದೇಶವನ್ನಾಗಿ ಸ್ವೀಕರಿಸಲು ಸಾಧ್ಯವಿಲ್ಲ, ಆದರೆ ಅದಕ್ಕೆ ಪ್ರತಿಯಾಗಿ ಭಾರತದಲ್ಲಿ ಹಿಂದೂ ಹಾಗೂ ಮುಸ್ಲಿಮರು ಎಂಬ ಎರಡು ದೇಶಗಳಿವೆ.”

ಅವರ ಏಕಮೇವ ನಾಯಕತ್ವದಲ್ಲಿ ಹಿಂದೂ ಮಹಾಸಭಾವು 1940 ರಲ್ಲಿ ಮುಸ್ಲಿಂ ಲೀಗಿನೊಂದಿಗೆ ಮೈತ್ರಿ ಸರ್ಕಾರಗಳನ್ನು ನಡೆಸಿತ್ತು. ಮುಸ್ಲಿಂ ಲೀಗಿನೊಂದಿಗಿನ ಮೈತ್ರಿ ಸರ್ಕಾರವನ್ನು ಬಹಿರಂಗವಾಗಿ ಸಮರ್ಥಿಸಿದ ಸಾವರ್ಕರ್ 1942 ರಲ್ಲಿ ಕಾನ್ಪುರದಲ್ಲಿ ನಡೆದ ಹಿಂದೂ ಮಹಾಸಭಾದ 24 ನೇ ಅಧಿವೇಶನದ ಅಧ್ಯಕ್ಷೀಯ ಭಾಷಣ ಮಾಡುತ್ತಾ:

“ಪ್ರಾಯೋಗಿಕ ರಾಜಕೀಯದಲ್ಲಿ ಕೂಡ ನಾವು ವಿವೇಕಯುಕ್ತ ಸಂಧಾನಗಳ ಮೂಲಕ ಮುಂದೆ ಸಾಗಬೇಕು. ತೀರ ಇತ್ತೀಚೆಗಷ್ಟೆ ಸಿಂಧ್‌ನಲ್ಲಿನ ಸಂಗತಿಯನ್ನೇ ನೋಡಿ. ಅಲ್ಲಿ ಸಿಂಧ್–ಹಿಂದು–ಸಭಾವು ಮೈತ್ರಿ ಸರ್ಕಾರ ನಡೆಸುವ ಸಲುವಾಗಿ ಆಹ್ವಾನದ ಮೇರೆಗೆ ಮುಸ್ಲಿಂ ಲೀಗಿನೊಂದಿಗೆ ಕೈಜೋಡಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಯಿತು. ಬಂಗಾಳದ ನಿದರ್ಶನ ಎಲ್ಲರಿಗೂ ಗೊತ್ತೇ ಇದೆ. ತಮ್ಮೆಲ್ಲಾ ಶರಣಾಗತಿ ಪ್ರವೃತ್ತಿಯ ಕಾಂಗ್ರೆಸ್ಸಿನವರೊಂದಿಗೆ ಕೂಡ ಒಡಂಬಡಿಕೆಗೆ ಒಪ್ಪದ ಅಸಂಸ್ಕೃತ/ಅನಾಗರಿಕ ಲೀಗಿನವರು ಹಿಂದೂ ಮಹಾಸಭಾದೊಂದಿಗೆ ಸಂಪರ್ಕಕ್ಕೆ ಬಂದಕೂಡಲೇ ವಿವೇಕಯುತ ಸಂಧಾನಕ್ಕೆ ಹಾಗೂ ಸ್ನೇಹಪರರಾಗಿ ವರ್ತಿಸಲು ಮುಂದಾದರು ಮತ್ತು ಮಿಸ್ಟರ್ ಫಜ್ಲುಲ್ ಹಕ್ ಅವರ ಪ್ರಧಾನಿ ಹುದ್ದೆಯಡಿ ಹಾಗೂ ನಮ್ಮ ಗೌರವಾನ್ವಿತ ಮಹಾಸಭಾದ ನಾಯಕರಾದ ಡಾ.ಶ್ಯಾಮ ಪ್ರಸಾದ್ ಮುಖರ್ಜಿಯವರ ದಕ್ಷ ಮುಖಂಡತ್ವದಲ್ಲಿ ಮೈತ್ರಿ ಸರ್ಕಾರವು ಎರಡೂ ಸಮುದಾಯದವರ ಅನುಕೂಲಕ್ಕಾಗಿ ಒಂದು ವರ್ಷ ಕಾಲ ಯಶಸ್ವಿಯಾಗಿ ನಡೆಯಿತು."

ಸಾವರ್ಕರ್ ಅವರು ಸ್ವಾತಂತ್ರ್ಯ ಚಳುವಳಿಯಿಂದ ದೂರ ಉಳಿದಿದ್ದು ಮಾತ್ರವಲ್ಲ ಬ್ರಿಟಿಷರ ಹಿತಾಸಕ್ತಿಗಳ ವಿರುದ್ಧ ಹೋರಾಡಿದವರನ್ನು ದಮನ ಮಾಡುವಲ್ಲಿ ಬ್ರಿಟಿಷ್ ದೊರೆಗಳಿಗೆ ಸಹಾಯ ಮಾಡಿದರು ಕೂಡ. 1942 ರ ಭಾರತ ಬಿಟ್ಟು ತೊಲಗಿ ಚಳುವಳಿಯ ಸಮಯದಲ್ಲಿ ಇಡೀ ದೇಶ ವಸಾಹತುಶಾಹಿ ದೊರೆಗಳ ನಿರ್ದಯ ದಬ್ಬಾಳಿಕೆಯನ್ನು ಎದುರಿಸುತ್ತಿದ್ದಾಗ, ಸಾವರ್ಕರ್ ಹೇಳುತ್ತಾರೆ:

“ಎಲ್ಲಾ ಪ್ರಾಯೋಗಿಕ ರಾಜಕೀಯದಲ್ಲಿ ಹಿಂದೂ ಮಹಾಸಭಾವು (ಬ್ರಿಟಿಷ್ ಸರ್ಕಾರದೊಂದಿಗೆ) ಸ್ಪಂದನಾತ್ಮಕ ಸಹಕಾರದ ನೀತಿಯ ಮಾರ್ಗದರ್ಶಕ ಸೂತ್ರಕ್ಕೆ ಅಂಟಿಕೊಂಡಿರುತ್ತದೆ. ಅದರ ಆಧಾರದ ಮೇಲೆ, ಕೌನ್ಸಿಲರುಗಳಾಗಿ, ಸಚಿವರಾಗಿ, ಶಾಸಕರಾಗಿ ಮತ್ತು ಯಾವುದೇ ಮುನಿಸಿಪಲ್ ಅಥವಾ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಹಿಂದೂ ಸಂಘಟನೆಯ ಎಲ್ಲರೂ ಹಿಂದೂಗಳ ನ್ಯಾಯಯುತ ಹಿತಾಸಕ್ತಿಗಳನ್ನು ಸಂರಕ್ಷಿಸಲು ಮತ್ತು ಬೆಂಬಲಿಸಲು ಕೂಡ ಆ ಸರ್ಕಾರಿ ಅಧಿಕಾರ ಕೇಂದ್ರಗಳನ್ನು ಬಳಸಿಕೊಳ್ಳುವ ಗುರಿ ಹೊಂದಿರಬೇಕು; ಅದೇ ಸಮಯದಲ್ಲಿ ಇತರರ ನ್ಯಾಯಯುತ ಹಿತಾಸಕ್ತಿಗಳಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು; ಈ ರೀತಿಯಲ್ಲಿ ಹಿಂದೂ ಮಹಾಸಭಾವು ನಮ್ಮ ದೇಶಕ್ಕೆ ಗೌರವಯುತ ದೇಶಭಕ್ತಿಯನ್ನು ಸಲ್ಲಿಸುತ್ತಿದೆ. ತಮ್ಮ ಕೆಲಸದ ಇತಿಮಿತಿಯನ್ನು ಅರಿತುಕೊಂಡು ಈ ಪರಿಸ್ಥಿತಿಯಲ್ಲಿ ಅವರು ಏನಾದರೂ ಒಳ್ಳೆಯ ಕೆಲಸ ಮಾಡಬೇಕೆಂದು ಮಹಾಸಭಾ ನಿರೀಕ್ಷಿಸುತ್ತದೆ ಮತ್ತು ಅಷ್ಟನ್ನಾದರೂ ಮಾಡುವಲ್ಲಿ ಅವರು ಸೋಲದಿದ್ದರೆ ಅವರು ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಿದ್ದಾರೆಂದು ಮಹಾಸಭಾ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತದೆ. ಇತಿಮಿತಿಗಳು ಸಂಪೂರ್ಣವಾಗಿ ವಿಸರ್ಜನೆಯಾಗುವ ತನಕ ಹಂತ ಹಂತವಾಗಿ ತಾವಾಗಿಯೇ ಸೀಮಿತಗೊಳ್ಳುತ್ತಾ ಹೋಗಲೇಬೇಕು. **ಸ್ಪಂದನಾತ್ಮಕ ಸಹಕಾರದ ನೀತಿಯು ಬೇಷರತ್ತಾದ ಸಹಕಾರದಿಂದ ಕ್ರಿಯಾಶೀಲ ಹಾಗೂ ಸಶಸ್ತ್ರ ಪ್ರತಿರೋಧದವರೆಗೂ ದೇಶಪ್ರೇಮೀ ಚಟುವಟಿಕೆಗಳ ಸಕಲ ಹರವನ್ನು ವ್ಯಾಪಿಸಿರುತ್ತದೆ; ಕಾಲದ ಅಗತ್ಯ, ನಮ್ಮ ವಶದಲ್ಲಿರುವ ಸಂಪನ್ಮೂಲಗಳು ಮತ್ತು ನಮ್ಮ ರಾಷ್ಟ್ರೀಯ ಹಿತಾಸಕ್ತಿಯ ವಿಧಿಗೆ ತಕ್ಕಂತೆ ಅದು ತನ್ನನ್ನು ಹೊಂದಿಸಿಕೊಳ್ಳುತ್ತದೆ ಕೂಡ.** (ಈ ಪದಗಳು ಮೂಲದಲ್ಲಿರುವಂತೆ ಇವೆ)

ಸುಭಾಷ್ ಚಂದ್ರ ಬೋಸ್ ಅವರು ಸೇನಾ ಕಾರ್ಯಾಚರಣೆ ಮೂಲಕ ಭಾರತವನ್ನು ವಿಮೋಚನೆಗೊಳಿಸಲು ಪ್ರಯತ್ನಿಸುತ್ತಿದ್ದಾಗ ಸಾವರ್ಕರ್ ಎರಡನೇ ವಿಶ್ವ ಯುದ್ಧದ ಸಮಯದಲ್ಲಿ ಬ್ರಿಟಿಷರ ಯುದ್ಧ ಸನ್ನಾಹಗಳಿಗೆ ನೇರವಾಗಿ ಸಹಾಯ ಮಾಡುವ ಮಟ್ಟಕ್ಕೂ ಹೋಗುತ್ತಾರೆ. ಅವರು ಹೇಗೆ ಬ್ರಿಟಿಷರ ಗೆದ್ದೆತ್ತಿನ ಬಾಲ ಹಿಡಿದು ಅವರ ಯುದ್ಧ ತಂತ್ರಗಳಿಗೆ ಸಹಾಯ ಮಾಡಿದರು ಎಂಬುದು ಈ ಕೆಳಗಿನ ಅವರ ಮಾತುಗಳಿಂದ ಸ್ಪಷ್ಟವಾಗುತ್ತದೆ:

ಭಾರತದ ರಕ್ಷಣಾ ವಿಷಯದ ಮಟ್ಟಿಗೆ, ಸಹಾನುಭೂತಿ ಸಹಕಾರದ ಹುಮ್ಮಸ್ಸಿನಲ್ಲಿ ಭಾರತ ಸರ್ಕಾರದ ಯುದ್ಧ ಸನ್ನಾಹದೊಂದಿಗೆ, ಹಿಂದೂ ಹಿತಾಸಕ್ತಿಗಳೊಂದಿಗೆ ನಿಷ್ಠರಾಗಿರುವ ತನಕ ಹಿಂದೂರಾಜ್ಯವು ಹಿಂಜರಿಯದೇ ಜತೆಗೂಡಬೇಕು; ಭೂಸೇನೆ, ನೌಕಾದಳ ಹಾಗೂ ವಾಯುದಳಕ್ಕೆ

ಪುಟ 14 ಕ್ಕೆ

ಸಂಪಾದಕೀಯ

ಭ್ರಮೆಗಳ ಸೃಷ್ಟಿ ಮತ್ತು ಲೂಟಿಯ ಅವಕಾಶ

'ಇನ್ವೆಸ್ಟ್ ಕರ್ನಾಟಕ–ಕರ್ನಾಟಕದಲ್ಲಿ ಹೂಡಿಕೆ ಮಾಡಿ' ಎಂಬ ಘೋಷಣೆಯ ವಿದೇಶಿ ಬಂಡವಾಳ ಹೂಡಿಕೆಯ ಸಮಾವೇಶ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದಿರುವುದು ಜನರಲ್ಲಿ ಭ್ರಮೆ ಸೃಷ್ಟಿಸುವ ಬಹುದೊಡ್ಡ ನಾಟಕ ವಾಗಿದೆ. ವಿಧಾನಸಭಾ ಚುನಾವಣೆಗಳು ಹತ್ತಿರ ಇರುವಾಗ ಅಧಿಕಾರದಲ್ಲಿರುವ ಪಕ್ಷಗಳು ಇಂತಹ ಪ್ರಹಸನಗಳನ್ನು ವ್ಯವಸ್ಥೆಗೊಳಿಸುತ್ತಾ ಬಂದಿರುವುದು ಕಳೆದ ದಶಕಗಳ ಅನುಭವ. ಈಗಲೂ ಕರ್ನಾಟಕ ಸರ್ಕಾರ ಸುಮಾರು 10 ಲಕ್ಷ ಕೋಟಿಗಳ ಬಂಡವಾಳ ಹರಿದು ಬರಲಿದೆ, 6 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೇಳುತ್ತಿರುವುದಕ್ಕೆ ಯಾವುದೇ ಗಟ್ಟಿ ಆಧಾರಗಳು ಇಲ್ಲ. ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಈ ಹಿಂದಿನ ಹೂಡಿಕೆದಾರರ ಸಮಾವೇಶಗಳ ನಂತರದಲ್ಲಿ ಜಾರಿಯಾದ ಯೋಜನೆಗಳ ಪ್ರಮಾಣ ಶೇ. 25ರಷ್ಟೂ ಇಲ್ಲ. ಅವು ಅತ್ಯಲ್ಪ ಎನ್ನುವ ಸಂಗತಿಯನ್ನು ಒಪ್ಪಿಕೊಂಡಿದ್ದಾರೆ. ಆದರೆ ತಾವು ಹಿಂದಿನಂತಲ್ಲ, ಶೇ. 80 ರಷ್ಟು ಜಾರಿ ಆಗುತ್ತವೆ ಎಂದು ರಾಜ್ಯದ ಜನತೆಯನ್ನು ನಂಬಿಸಲು ಪ್ರಯತ್ನಿಸುತ್ತಿದ್ದಾರೆ.

ಹಿಂದಿನ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶಗಳಲ್ಲಿ ಭರವಸೆ ದೊರೆತ ಯೋಜನೆಗಳಂತೆ ಬಂಡವಾಳ ಹೂಡಿಕೆ ಆಗಿದೆಯೇ ಎಂದು ಪರಿಶೀಲಿಸಬೇಕಿದೆ.

2010ರಲ್ಲಿ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿರುವಾಗ 3.94 ಲಕ್ಷ ಕೋಟಿ ರೂ.ಗಳ ಒಪ್ಪಂದಗಳಾಗಿದ್ದವು. ಆದರೆ ಕಾರ್ಯಗತವಾದದ್ದು ಶೇ.14ಕ್ಕಿಂತ ಕಡಿಮೆ. 2012ರಲ್ಲಿ ನಡೆದ ಹೂಡಿಕೆದಾರರ ಸಮಾವೇಶದಲ್ಲಿ 6.77 ಲಕ್ಷ ಕೋಟಿ ಒಪ್ಪಂದಗಳಾಗಿದ್ದರೆ ವಾಸ್ತವಕ್ಕೆ ಬಂದಿದ್ದು ಶೇ. 8ಕ್ಕಿಂತ ಕಡಿಮೆ. 2016ರಲ್ಲಿ 3.5 ಲಕ್ಷ ಕೋಟಿ ರೂ.ಗಳ ಒಪ್ಪಂದವಾಗಿದ್ದರೆ ಜಾರಿಗೆ ಬಂದದ್ದು ಶೇ.15ಕ್ಕಿಂತ ಕಡಿಮೆ. ಈ ಬಾರಿ ಹೂಡಿಕೆದಾರರ ಸಮಾವೇಶದಲ್ಲಿ ಸರ್ಕಾರ 9,24,784 ಕೋಟಿ ರೂ.ಗಳ ಹೂಡಿಕೆ ಒಪ್ಪಂದಗಳಾಗಿವೆ ಎಂದು ಹೇಳಿದೆ. ಇದರಿಂದ 6 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೇಳುತ್ತಿದೆ. ಆದರೆ ಕೈಗಾರಿಕಾ ಸಚಿವ ನಿರಾಣಿಯವರು ಹೇಳಿದಂತೆ ಇದರಲ್ಲಿ ಮುಂಚಿನ ಒಪ್ಪಂದಗಳ ಮೊತ್ತವೇ 8,24,784 ಕೋಟಿ ರೂ.ಗಳು. ಅಂದರೆ ಈ ಸಮಾವೇಶದಲ್ಲಿ ದೊರೆತ ಭರವಸೆ 1,57,000 ಕೋಟಿ ರೂ.ಗಳು ಮಾತ್ರ. ಇವೆಲ್ಲವನ್ನೂ ಪರಿಶೀಲಿಸಿದರೆ ಶೇ.10 ರಷ್ಟು ಜಾರಿಯಾಗುವುದು ಸಹ ದುರ್ಲಭ ಎಂಬ ಅಂಶವೇ ವಾಸ್ತವವನ್ನು ತೆರೆದಿಡುತ್ತದೆ. ಇಂತಹ ನಿರಾಶದಾಯಕ ವಾತಾವರಣದ ಬಗ್ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರವರು ಅಭಿಪ್ರಾಯ ವ್ಯಕ್ತಪಡಿಸಿದ್ದು ಗಮನಾರ್ಹ.

ಇಂದು ಜಾಗತಿಕವಾಗಿ ಬಹುತೇಕ ದೇಶಗಳು ಆರ್ಥಿಕ ಬಿಕ್ಕಟ್ಟು ಮತ್ತು ಹಿಂಜರಿತದಿಂದ ಭಾದಿತವಾಗಿವೆ. ಬಹುತೇಕ ದೇಶಗಳಲ್ಲಿ ಬೇಡಿಕೆ ಕುಸಿತವಾಗಿರುವುದರಿಂದ ಉತ್ಪಾದನೆಯೂ ಕೂಡ ಕುಂಠಿತವಾಗಿದೆ. ಮತ್ತು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಅಧ್ಯಯನದಂತೆ ಮುಂದಿನ ಕೆಲವು ವರ್ಷಗಳು ಈ ಬಿಕ್ಕಟ್ಟು ಬಾಧಿಸಲಿದೆ. ಜಾಗತಿಕ ಬಂಡವಾಳ ಹೂಡಿಕೆದಾರರು ಬಂಡವಾಳ ಹೂಡಲು ಅಷ್ಟಾಗಿ ಉತ್ಸುಕವಾಗಿಲ್ಲ ಎನ್ನುವುದು ಕೂಡ ಗಮನಿಸಬೇಕಾದ ಸಂಗತಿ. ಎಲ್ಲ ಸಂಗತಿಗಳನ್ನು ಒಟ್ಟಾಗಿ ಪರಿಶೀಲಿಸಿದರೆ ಹೂಡಿಕೆ, ಉತ್ಪಾದನೆ ಮತ್ತು ಉದ್ಯೋಗಗಳ ಸೃಷ್ಟಿ ಸರ್ಕಾರ ಹೇಳುವ ಅಂಕೆ ಅಂಶಗಳಿಗಿಂತ ಅತ್ಯಂತ ಬಹು ದೂರದಲ್ಲಿದೆ ಎನ್ನುವುದು ಗೊತ್ತಾಗುತ್ತದೆ. ಇಂತಹ ಸಮಾವೇಶಗಳು, ಪ್ರಕಟನೆಗಳು ಅಷ್ಟಾಗಿ ಫಲ ನೀಡದ ಕುರಿತಾದಂತೆ ಬಹುದೊಡ್ಡ ಉದ್ಯಮಿಗಳು ನಿರಾಶೆಯನ್ನು ವ್ಯಕ್ತಪಡಿಸಿರುವುದು ಇದೆ. ಈ ಕಾರಣದಿಂದಲೇ ಈ ಸಮಾವೇಶದಲ್ಲಿ ಜಾಗತಿಕ ಹೂಡಿಕೆದಾರರು ಮತ್ತು ದೇಶದ ಪ್ರಮುಖ ಉದ್ಯಮಿಗಳು ಅಷ್ಟಾಗಿ ಭಾಗವಹಿಸದೆ ಇರುವುದು ಕೂಡ ಗಮನಿಸಬೇಕಾದ ಅಂಶ.

ಇಂತಹ ಜಾಗತಿಕ ಹೂಡಿಕೆಯ ಸಮಾವೇಶಗಳು ಅಂತಿಮವಾಗಿ ನಮ್ಮ ನಾಡಿನ ರೈತರು ಮತ್ತು ಕಾರ್ಮಿಕರ ಬದುಕು ಮತ್ತು ಭವಿಷ್ಯಕ್ಕೆ ಗಂಡಾಂತರಕಾರಿಯಾಗಿ ಮಾರ್ಪಾಡಾಗಿವೆ. ಬಂಡವಾಳ ಆಕರ್ಷಿಸುತ್ತೇವೆ ಎನ್ನುವ ಹೆಸರಿನಲ್ಲಿ ರೈತರ ಸಾವಿರಾರು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುತ್ತದೆ ಮತ್ತು ಕೆಲವು ಬಂಡವಾಳಗಾರರಿಗೆ ನೀಡಲಾಗುತ್ತಿದೆ. ಹೀಗೆ ನೀಡಿದ ಭೂಮಿಯಲ್ಲಿ ಉದ್ಯಮ ಹೂಡಿಕೆ ಮಾಡಬೇಕಾದ ಉದ್ಯಮಿಗಳು ಬಂಡವಾಳವನ್ನು ಹೂಡದೇ ಸೂಕ್ತ ಪರಿಹಾರವನ್ನೂ ನೀಡದೆ, ಯಾವ ಉದ್ಯೋಗಗಳು ಸೃಷ್ಟಿಯಾಗದೇ ಅತ್ಯಂತ ಸಂಕಷ್ಟದ ಸ್ಥಿತಿಯನ್ನು ಸೃಷ್ಟಿಸಿರುವ ಅನೇಕ ಉದಾಹರಣೆಗಳು ಕರ್ನಾಟಕದಾದ್ಯಂತ ಇವೆ. ಅದೇ ರೀತಿ 'ಸರಳ ವ್ಯವಹಾರ' ದ ಭರವಸೆಯಲ್ಲಿ ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಮತ್ತು ಸವಲತ್ತುಗಳನ್ನು ಕಿತ್ತುಕೊಂಡು ಕಾನೂನುಗಳಿಗೆ ತಿದ್ದುಪಡಿಗಳನ್ನು ತಂದು ಮನಬಂದಂತೆ ಶೋಷಣೆ ಮಾಡುವ ಅವಕಾಶಗಳನ್ನು ತೆರೆದಿಡಲಾಗುತ್ತಿದೆ. ಇಂತಹ ಹೂಡಿಕೆಯ ಸಮಾವೇಶಗಳು ನಾಡಿನ ಶ್ರಮಿಕರ ಪಾಲಿಗೆ ಕರಾಳ ಭವಿಷ್ಯವನ್ನೇ ತರುತ್ತಿವೆ. ಇಂತಹ ಯಾವುದೇ ಕ್ರಮಗಳನ್ನು ಖಂಡಿತಕ್ಕೂ ಒಪ್ಪಲು ಸಾಧ್ಯವಿಲ್ಲ. ಬಂಡವಾಳ ಸ್ನೇಹಿ ಎನ್ನುವ ಸರ್ಕಾರಗಳು ಅಂತಿಮವಾಗಿ ಜನದ್ರೋಹಿಯಾಗಿ ವರ್ತಿಸುತ್ತಿವೆ.

ನೂರಾರು ಕೋಟಿ ರೂಪಾಯಿಗಳ ದುಂದು ವೆಚ್ಚದಲ್ಲಿ ನಡೆಸಿದ ಈ ಸಮಾವೇಶದ ಉದ್ದೇಶ ಸ್ಪಷ್ಟ. ಈಗಾಗಲೇ ಅಧಿಕಾರದಲ್ಲಿರುವ ಬಿಜೆಪಿ ಉದ್ಯೋಗ ಸೃಷ್ಟಿಸುವುದಿರಲಿ ನಿರುದ್ಯೋಗವನ್ನು ಹೆಚ್ಚಿಸಿದೆ. ಸಾಮಾಜಿಕ ಅಶಾಂತಿ, ಹಿಂಸೆ, ಕೋಮು ದ್ವೇಷ ಸೃಷ್ಟಿಸಿದೆ. ಹಲವು ರೀತಿಯ ತೆರಿಗೆಗಳ ಭಾರದಿಂದ ಜನತೆಯನ್ನು ಸುಲಿಯುತ್ತಿದೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ಜನಪೀಡಕ ಆಡಳಿತ ಅಧಿಕಾರ ನಡೆಸುತ್ತಿದೆ. ಜನ ರೋಸಿ ಹೋಗಿದ್ದಾರೆ. ಎಲ್ಲಾ ರಂಗಗಳಲ್ಲೂ ವಿಫಲವಾಗಿರುವ ಈ ಸರ್ಕಾರ ತನ್ನ ಮುಖವನ್ನು ಮುಚ್ಚಿಕೊಳ್ಳಲು ಹೂಡಿಕೆ ಸಮಾವೇಶದಂತಹ ಸಾರ್ವಜನಿಕ ಪ್ರದರ್ಶನವನ್ನು ಏರ್ಪಡಿಸಿರುವುದರಲ್ಲಿ ಅನುಮಾನವಿಲ್ಲ. ಇಂತಹ ಕಳಪೆ ವರಸೆಗಳನ್ನು ಬಿಟ್ಟು ನಿಜವಾದ ರೀತಿಯಲ್ಲಿ ನಾಡಿನ ಅಭಿವೃದ್ಧಿ ಜನತೆಯ ಹಿತಾಸಕ್ತಿ ಕಾಪಾಡಲು ಸರ್ಕಾರ ಯೋಚಿಸಬೇಕು.

ದಲಿತ ಸಂಘಟನೆಗಳ ಒಗ್ಗೂಡುವಿಕೆ: ಆಶಾದಾಯಕ ಹೆಜ್ಜೆಗಳು

ಈ ವಾರ

ಎಸ್.ವೈ. ಗುರುಶಾಂತ್

ಕರ್ನಾಟಕದಲ್ಲಿನ ಬಹುತೇಕ ಎಲ್ಲಾ ಪ್ರಗತಿಪರ ದಲಿತ ಚಳುವಳಿಯ ಸಂಘಟನೆಗಳು ಒಂದುಗೂಡುವ ನಿರ್ಧಾರ ಕೈಗೊಂಡಿರುವುದು ಅತ್ಯಂತ ಸ್ವಾಗತಾರ್ಹ. ಅದಕ್ಕಾಗಿ ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ಅವರ 'ಪರಿನಿರ್ವಾಣ'ದ ದಿನವಾದ ಇದೇ 2022 ರ ಡಿಸೆಂಬರ್ 6 ರಂದು 'ಐಕ್ಯತಾ ರ್‍ಯಾಲಿ' ಯನ್ನು ಸಂಘಟಿಸಲಾಗುತ್ತಿದೆ. ಕಾಲದ ಸವಾಲುಗಳ ಎದುರಿನಲ್ಲಿ ಇಂತಹ ನಿರ್ಧಾರವನ್ನು ಕೈಗೊಂಡಿರುವುದು ಅತ್ಯಂತ ವಿವೇಕಯುತವಾದ ಹೆಜ್ಜೆ. ಇದಕ್ಕೆ ಮುತುವರ್ಜಿ ವಹಿಸಿದ ಮತ್ತು ನಿರ್ಧಾರ ಕೈಗೊಂಡ ಎಲ್ಲಾ ಸಂಘಟನೆಗಳ ನಾಯಕರು ಅಭಿನಂದನಾರ್ಹರು. ಹಲವಾರು ವರುಷಗಳಿಂದ ನಡೆಯುತ್ತಿದ್ದ ಈ ಪ್ರಕ್ರಿಯೆ ಯಶಸ್ವಿಯಾಗಲಿ ಮತ್ತು ರಾಜ್ಯದಲ್ಲಿ ಒಟ್ಟು ಪ್ರಜಾಸತ್ತಾತ್ಮಕ ಜನ ಚಳುವಳಿಯನ್ನು ಬಲಗೊಳಿಸುವ ದಿಕ್ಕಿನಲ್ಲಿ ಸಾಗಲಿ ಎಂದು ಶುಭ ಹಾರೈಸೋಣ.

ನಮ್ಮ ರಾಜ್ಯದಲ್ಲಿನ ದಲಿತ ಚಳುವಳಿ ತುರ್ತು ಪರಿಸ್ಥಿತಿಯ ಸಂದರ್ಭ ಮತ್ತು ನಂತರದ ಅವಧಿಯಲ್ಲಿ ಬೆಳೆದ ಜನತೆಯ ಪ್ರಜಾಸತ್ತಾತ್ಮಕ ಚಳುವಳಿಗಳ ಒಂದು ಅತಿ ಮುಖ್ಯ ಅನನ್ಯವಾದ ಭಾಗ. ಕರ್ನಾಟಕದ ರಾಜಕೀಯ ಚಿತ್ರಣವನ್ನು ಬದಲಾಯಿಸಿದ ಕಾರ್ಮಿಕ, ರೈತ ಚಳುವಳಿಗಳಂತೆ ದಲಿತ ಚಳುವಳಿಯೂ ಅತ್ಯಂತ ಐತಿಹಾಸಿಕ ಪಾತ್ರವನ್ನು ವಹಿಸಿದೆ. ಕಾಲಾನುಕ್ರಮದಲ್ಲಿ ಬದಲಾದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳ ಸಂದರ್ಭದಲ್ಲಿ ಎಲ್ಲ ಚಳುವಳಿಗಳಂತೆ ದಲಿತ ಚಳುವಳಿಯೂ ಹಲವು ಸಂಧಿಗ್ಧವಾದ ಸನ್ನಿವೇಶಗಳನ್ನು ಎದುರಿಸಿದೆ. ಚಳುವಳಿ ಹಲವು ತಿರುವುಗಳನ್ನು ಮತ್ತು ವಿಘಟನೆಯನ್ನು ಕಂಡಿದೆ, ದುರ್ಬಲವೂ ಆಗಿದೆ. ಈ ವಿಘಟನೆ, ದುರ್ಬಲತೆಯನ್ನು ಕೇವಲ ದಲಿತ ಚಳುವಳಿ ಮಾತ್ರವಲ್ಲ, ಇತರೆ ವಿಭಾಗಗಳ ಚಳುವಳಿಗಳೂ ಅನುಭವಿಸಿವೆ. ಆದಾಗಿಯೂ ಮೊದಲಿನ ಚಳುವಳಿಯ ಕಾವು ಇಲ್ಲವಾದರೂ ಎಚ್ಚರ ಮತ್ತು ಒಂದು ಮಟ್ಟದ ಜೀವಂತಿಕೆಯನ್ನು ದಲಿತ ಚಳುವಳಿ ಕಾಪಾಡಿಕೊಂಡು ಬಂದಿದೆ. ಕರ್ನಾಟಕದ ದಲಿತ ಚಳುವಳಿಯಲ್ಲಿನ ವಿಘಟನೆ ಗಳಿಗೆ ಕಾರಣವಾದ ಸೈದ್ಧಾಂತಿಕ ರಾಜಕೀಯ ಮತ್ತು ಆರ್ಥಿಕ ಸಂಗತಿಗಳ ಕುರಿತಾದಂತೆ ವಿಶ್ಲೇಷಿಸುವುದು, ಮುಂದಿನ ಹಾದಿ ಏನಿರಬೇಕು ಎಂದು ಚಿಂತಿಸುವುದು ಪ್ರತ್ಯೇಕವಾದ ವಿಷಯ.

ಇಂದು ದೇಶದಲ್ಲಿ ಫ್ಯಾಸಿಸ್ಟ್ ಸ್ವರೂಪದ ಆಡಳಿತ, ಅದರ ನೀತಿಗಳು, ಸಮಾಜದ ಎಲ್ಲಾ ರಂಗಗಳ ಮೇಲೆ ಅದರ ಹಿಡಿತ ದಿನಕ್ಕೆ ವಿಸ್ತರಿಸುತ್ತಿದೆ. ಜಾತಿ ತಾರತಮ್ಯ, ದಮನ ಮತ್ತು ದಲಿತ, ಆದಿವಾಸಿಗಳಂತಹ ಅತ್ಯಂತ ತುಳಿತುಕ್ಕೊಳಗಾದ ವಿಭಾಗಗಳ ಮೇಲಿನ ದೌರ್ಜನ್ಯಗಳ ಪ್ರಮಾಣ ಮತ್ತು ಸ್ವರೂಪವು ಬದಲಾಗುತ್ತಿದೆ. ಈ ಸಮುದಾಯಗಳನ್ನೇ ಆಳುವವರು ಅಪಹರಿಸುತ್ತಿದ್ದಾರೆ ಮತ್ತು ತಮ್ಮ ಕಾರ್ಯಸೂಚಿಗೆ ಬಳಸುತ್ತಿದ್ದಾರೆ. ಇದನ್ನು ಅನುಸರಿಸಿ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳು ರೂಢೀಗತಗೊಳ್ಳುತ್ತಿವೆ. ಮಾತ್ರವಲ್ಲ, ಭಾರತವನ್ನು ನವ ವಸಾಹತು ಮಾಡಿಕೊಳ್ಳುವ ವಿದೇಶಿ ಏಕಸ್ವಾಮ್ಯ ಬಂಡವಾಳದ ಹಿತಾಸಕ್ತಿಗಳ ಹಸ್ತಕ್ಷೇಪ ಹೆಚ್ಚು ಹೆಚ್ಚು ಬಿಗಿಗೊಳ್ಳುತ್ತಿವೆ, ವಿಸ್ತರಿಸುತ್ತಿವೆ. ಇಂತಹ ನೀತಿಗಳಿಂದ ತೀವ್ರವಾಗಿ ಬಾಧಿತವಾದ ಮತ್ತು ದಮನಕ್ಕೊಳಗಾದ ವಿವಿಧ ವಿಭಾಗಗಳು ಪ್ರತಿಭಟಿಸುತ್ತಿವೆ ಯಾದರೂ ಅದಷ್ಟೇ ಸಾಲದು ಮತ್ತು ಎಲ್ಲರೂ ಒಗ್ಗೂಡಿ ನಡೆಸಬೇಕಾದ ಬಹುದೊಡ್ಡ ಸಂಗ್ರಾಮದ ಅವಶ್ಯಕತೆಯನ್ನು ಇಂದಿನ ಸಂದರ್ಭ ಮುನ್ನೆಲೆಗೆ ತರುತ್ತಿದೆ. ಎಲ್ಲಾ ಚಳುವಳಿಗಳು ತಮ್ಮಲ್ಲಿನ ತಾತ್ವಿಕ ಮತ್ತು ಸಂಘಟನಾತ್ಮಕ ಭಿನ್ನ ಅಭಿಪ್ರಾಯಗಳನ್ನು ಬದಿಗಿರಿಸಿ ಒಂದುಗೂಡಿ ದೇಶ ಉಳಿಸುವ ವಿಶಾಲ ಐಕ್ಯತೆಯ ಆಂದೋಲನವನ್ನು ಕಟ್ಟುವುದರತ್ತ ಗಮನಾರ್ಹವಾದ ಹೆಜ್ಜೆಗಳನ್ನು ಇರಿಸುತ್ತಿವೆ.

ಕರ್ನಾಟಕದಲ್ಲಿ ಈಗ ದಲಿತ ಸಂಘಟನೆಗಳು ವಹಿಸಿರುವ ಮುತುವರ್ಜಿಯೂ ಕೂಡ ಈ ನೆಲೆಯಲ್ಲಿ ಮಹತ್ವ ಪಡೆದುಕೊಳ್ಳುತ್ತದೆ. ರಾಜ್ಯದಲ್ಲಿ ನಡೆಯುವ ಬಹು ಮುಖ್ಯವಾದ ಕಾರ್ಮಿಕ, ರೈತ, ಕೂಲಿಕಾರರ ಮತ್ತು ಇತರ ಸಾಮಾಜಿಕ ವಿಭಾಗಗಳ ಪ್ರಜಾಸತ್ತಾತ್ಮಕ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ.

ಈಗ ಎಲ್ಲಾ ಬಣಗಳನ್ನು ಐಕ್ಯ ವೇದಿಕೆಗೆ ತರುವ ಪ್ರಯತ್ನ ಸೈದಾಂತಿಕ, ರಾಜಕೀಯ ವಾಗಿ ಮತ್ತು ಸಂಘಟನಾತ್ಮಕವಾಗಿ ಯಾವ ಸ್ವರೂಪವನ್ನು ಪಡೆದುಕೊಳ್ಳುತ್ತದೆ ಎನ್ನುವುದು ಕೂಡ ಮಹತ್ವದ್ದು. ನಮ್ಮ ರಾಜ್ಯದಲ್ಲಿನ ದಲಿತ ಚಳುವಳಿಯ ಏಳುಬೀಳುಗಳನ್ನು, ಕಂಡ ತಿರುವುಗಳನ್ನು ಮತ್ತು ವಿಘಟನೆಯ ಕಾರಣಗಳನ್ನು ಕೇವಲ ವ್ಯಕ್ತಿಗಳಲ್ಲಿ ಹುಡುಕ ಬೇಕೇ ಅಥವಾ ಅದರ ಮೂಲವನ್ನು ತಾತ್ವಿಕ, ರಾಜಕೀಯ ಹಾಗೂ ಸಂಘಟನಾ ತಳಹದಿಯಲ್ಲಿ ವಸ್ತುನಿಷ್ಠವಾಗಿ ವಿಮರ್ಶಿಸಿಕೊಳ್ಳಬೇಕೇ ಎನ್ನುವುದೂ ಕೂಡ ಅತಿ ಪ್ರಾಮುಖ್ಯವಾಗಿದೆ. ಯಾವುದೇ ಒಂದು ಚಳುವಳಿ ರೂಪುಗೊಳ್ಳಲು ಅಥವಾ ಮುಂದೆ ಸಾಗಲು ವರ್ತಮಾನದಲ್ಲಿ ಪರಿಸ್ಥಿತಿಯನ್ನು ಅರಿಯುವುದು ಮತ್ತು ಅದಕ್ಕೆ ತಕ್ಕಂತೆ ಸ್ಪಂದಿಸಿ ಮುಂದೆ ಸಾಗುವುದು ಅಗತ್ಯ. ಇದಕ್ಕೆ ಭಾರತೀಯ ಸಮಾಜದ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದೂ ಮುಖ್ಯವಿದೆ. ಆರಂಭದ ದಿನಗಳಲ್ಲಿ ದಲಿತ ರೆಂದರೆ ಎಲ್ಲಾ ಜಾತಿಗಳಲ್ಲಿನ ಬಡವರು ಎನ್ನುವ ವ್ಯಾಖ್ಯಾನ ಹೊಂದಿತ್ತು. ದಲಿತ ಚಳುವಳಿ ವರ್ಗ ಮತ್ತು ಜಾತಿ ವ್ಯವಸ್ಥೆಯ ವಿರುದ್ಧದ ಹೋರಾಡುವ ಗುರಿಯನ್ನು ಇರಿಸಿಕೊಂಡಿತ್ತು. ಕಾಲಾನುಕ್ರಮದಲ್ಲಿ ಆ ತಿಳುವಳಿಕೆ ಉಳಿಯಿತೇ ಅದನ್ನು ಚಳುವಳಿ ಆಧರಿಸಿತೇ ಎನ್ನುವುದು ಒಂದು ಮುಖ್ಯ ಪ್ರಶ್ನೆ. ಇಲ್ಲಿನ ತಾತ್ವಿಕ ವಿಚಲತೆ ಮತ್ತು ಪ್ರಾಯೋಗಿಕತೆ ಸಮಸ್ಯೆ ಗಳನ್ನು ತಂದೊಡ್ಡಿತೇ? ಇದರಲ್ಲಿ ವ್ಯಕ್ತಿನಿಷ್ಠತೆಯ ಪಾಲೆಷ್ಟು? ಇಂಥ ವಿಮರ್ಶೆ ದಲಿತ ಚಳುವಳಿಯಲ್ಲಿ ನಡೆಯಬೇಕು. ಮಾತ್ರವೇ ಅಲ್ಲ ಶ್ರಮಜೀವಿಗಳ, ಶೋಷಿತರ ಚಳುವಳಿಯಾದ ಎಡ ಚಳುವಳಿ ಗಳೂ ವಿಮರ್ಶಿಸಿಕೊಳ್ಳಬೇಕಾದ ಹಲವು ಸಂಗತಿಗಳೂ ಇವೆ.

ಇವೆಲ್ಲವುಗಳಿಗೆ ಡಿಸೆಂಬರ್ 6 ರಂದಿನ ಐಕ್ಯತಾ ರ್‍ಯಾಲಿ ಒಂದು ಸ್ಪಷ್ಟತೆಯನ್ನು ತಂದು ಕೊಡಬಹುದು ಅಥವಾ ಒಗ್ಗೂಡುವ ಪ್ರಕ್ರಿಯೆಯಲ್ಲಿ ಹೊಸ ಆಯಾಮಗಳು, ಚಿಂತನೆಯ ಹೊಳಹುಗಳು ಕೂಡ ರೂಪುಗೊಳ್ಳಬಹುದು. ಇಂದಿನ ಫ್ಯಾಸಿಸ್ಟ್ ಮಾದರಿಯ ಕೋಮುವಾದವನ್ನು ಎದುರಿಸಲು ದಲಿತತ್ವದ ಸಾಂಸ್ಕೃತಿಕ ಪ್ರತಿರೋಧವನ್ನು ಒಡ್ಡುವುದಾಗಿ ಸಂಘಟನೆಗಳ ನಾಯಕರು ತಿಳಿಸಿದ್ದಾರೆ. ದಲಿತ ಅಸ್ಮಿತತೆಯ ಆಧಾರದಲ್ಲಿ ಸಾಂಸ್ಕೃತಿಕ ಪ್ರತಿರೋಧ ಎಂದರೇನು? ಅದು ಮಾತ್ರವೇ ಫ್ಯಾಸಿಸ್ಟ್ ಮಾದರಿಯ ಶಕ್ತಿಗಳ ದಾಳಿಯನ್ನು ಎದುರಿಸಲು ಸಾಕಾಗುತ್ತದೆಯೇ? ಈ ಪ್ರತಿರೋಧ ಸ್ವರೂಪವಾದರೂ ಏನು? ಎನ್ನುವುದರತ್ತ ಇನ್ನಷ್ಟು ಮನನ ಮತ್ತು ಸ್ಪಷ್ಟತೆ ಅಗತ್ಯ. ದಲಿತರು ಭಾರತದ ಶ್ರಮಜೀವಿ ವರ್ಗಗಳ ಅತಿ ಮುಖ್ಯವಾದ ಭಾಗವಾಗಿರುವಾಗ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಮುನ್ನಡೆಯ ಹೆಜ್ಜೆಗಳೇನು ಎನ್ನುವುದರತ್ತಲೂ ಸಹ ಚಿಂತಿಸಬೇಕಿದೆ. ಈ ಪ್ರಯತ್ನಗಳು ಸಮುದಾಯಗಳ ವಿಮೋಚನೆಗೆ ನಿಜವಾದ ಪರ್ಯಾಯವನ್ನು ಮತ್ತು ಜೊತೆಗೂಡಬೇಕಾದ ಶಕ್ತಿಗಳನ್ನು ನಿಖರವಾಗಿ ಗುರುತಿಸಿಕೊಳ್ಳಬೇಕು. ಇಲ್ಲವಾದಲ್ಲಿ ಕೇವಲ ಚುನಾವಣೆಯ ಸಂದರ್ಭಕ್ಕೆ ಕೊಡುವ ಪ್ರತಿಕ್ರಿಯೆ ಯಾದರೆ ಮುಂದಿನ ಹಾದಿ ಮಂಕಾಬಹುದು.

"ರೈತ, ಕಾರ್ಮಿಕರನ್ನು ವಿಭಜಿಸಲಾಗುತ್ತಿದೆ" ಕಾರ್ಮಿಕ ಮುಖಂಡ ದೇಬಶಿಸ್ ರಾಯ್ ಆತಂಕ

ವರದಿ: ವಾ. ಉಚ್ಚಿಲ್

"ಭಾರತದಲ್ಲಿ ಈಗ ಹಸಿವು, ಬಡತನ, ಕಾರ್ಮಿಕರ ಪರಿಸ್ಥಿತಿ ಬಗ್ಗೆ ಚರ್ಚೆ ನಡೆಯದೆ ಹಿಜಾಬ್, ಕಾಶ್ಮೀರಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಇಂತಹ ತಂತ್ರದ ಮೂಲಕ ರೈತ–ಕಾರ್ಮಿಕರನ್ನು ವಿಭಜಿಸುವ ಪ್ರಯತ್ನ ನಡೆಯುತ್ತಿದೆ. ನಮ್ಮ ಸಂವಿಧಾನವು ಎಲ್ಲ ಭಾಷೆ, ಧರ್ಮಗಳಿಗೆ ಸಮಾನತೆ ನೀಡಿದೆ. ಆದರೆ ಈಗಿನ ಕೇಂದ್ರ ಸರಕಾರವು ಹಿಂದಿ–ಹಿಂದೂ–ಹಿಂದೂಸ್ಥಾನ್ ಎಂಬ ನೀತಿ ಹೇರಲು ಹೊರಟಿದೆ. ಶಿಕ್ಷಣ, ಆಡಳಿತ ಉದ್ಯೋಗದಲ್ಲಿ ಹಿಂದಿಯನ್ನು ಕಡ್ಡಾಯಗೊಳಿಸುವ ಅಮಿತ್ ಶಾ ಅವರ ಪ್ರಸ್ತಾಪವು ಸಂವಿಧಾನದ ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಸಂಚಿನಂತೆ ಕಾಣುತ್ತದೆ ಹಾಗೂ ಹಿಂದಿಯೇತರ ರಾಜ್ಯಗಳ ಅವಕಾಶಗಳನ್ನು ವಂಚಿಸುತ್ತಿದೆ" ಎಂದು ರಾಷ್ಟ್ರೀಯ ಬೀಡಿ ಕಾರ್ಮಿಕರ ಫೆಡರೇಶನ್ನಿನ ಪ್ರಧಾನ ಕಾರ್ಯದರ್ಶಿ ದೇಬಶಿಸ್ ರಾಯ್ ಹೇಳಿದ್ದಾರೆ. ಅವರು ಮಂಗಳೂರಿನಲ್ಲಿ ಅಕ್ಟೋಬರ್ 31ರಂದು ನಡೆದ ಬೀಡಿ ಕಾರ್ಮಿಕರ 10ನೇ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತ ಹೀಗೆ ಹೇಳಿದರು.

"ಇತ್ತೀಚಿನ ಜಾಗತಿಕ ಹಸಿವಿನ ಸೂಚ್ಯಂಕಗಳ ಪ್ರಕಾರ, ಭಾರತವು ನೆರೆಹೊರೆಯ ದೇಶಗಳಿಗಿಂತ ಹೆಚ್ಚು ಹಸಿವನ್ನು ಅನುಭವಿಸುವ ದೇಶವಾಗಿದೆ. ಆಂತರಿಕ ಸಂಘರ್ಷದ ದಳ್ಳುರಿಗೆ ಸಿಲುಕಿರುವ ಅಫಘಾನಿಸ್ಥಾನ, ಶ್ರೀಲಂಕಾ ರಾಷ್ಟ್ರಗಳಿಗಿಂತಲೂ ಭಾರತ ಕಳಪೆ ಸ್ಥಾನದಲ್ಲಿದೆ. ದೇಶದಲ್ಲಿ ಆಹಾರದ ಲಭ್ಯತೆ ಸಾಕಷ್ಟಿದೆ. ಆದರೂ ಪೌಷ್ಟಿಕ ಆಹಾರದ ಕೊರತೆಯನ್ನು ಜನಸಾಮಾನ್ಯರು ಎದುರಿಸುತ್ತಿದ್ದಾರೆ. ಆದರೆ ಅದೇ ವೇಳೆಗೆ ಭಾರತದ 2–3 ದೊಡ್ಡ ಉದ್ಯಮಿಗಳು ಜಗತ್ತಿನ ಅತಿ ದೊಡ್ಡ ಸಿರಿವಂತರ ಪಟ್ಟಿಯಲ್ಲಿ ಸ್ಥಾನ ಪಡೆಯುತ್ತಿದ್ದಾರೆ. ಅವರ ಸಂಪತ್ತು ಪ್ರತೀ ವರ್ಷ ಹೆಚ್ಚುತ್ತಾ ಹೋಗುತ್ತಿದೆ" ಎಂದು ಕೇಂದ್ರ ಸರಕಾರದ ನೀತಿಯನ್ನು ಅವರು ಖಂಡಿಸಿದರು.

ದಕ್ಷಿಣ ಕನ್ನಡ. ಕಣ್ಣೂರು. ಸೊಲ್ಲಾಪುರ, ಮೊರ್ಶಿದಾಬಾದ್ ಮೊದಲಾದೆಡೆ ಬೀಡಿ ಕಾರ್ಮಿಕರ ಚಳುವಳಿ ಸ್ವಾತಂತ್ರ್ಯ ಪೂರ್ವದಿಂದಲೂ ಬಲಿಷ್ಠವಾಗಿ ನಡೆದು ಬಂದಿದೆ. ಇದರಿಂದ ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿ, ತುಟ್ಟಿಭತ್ತೆ, ಭವಿಷ್ಯನಿಧಿ, ಕಲ್ಯಾಣನಿಧಿ ಸೌಲಭ್ಯಗಳು ದೊರೆಯುವಂತಾಗಿದೆ. ಆದರೆ ಮೋದಿ ಸರಕಾರ ಕಾರ್ಮಿಕರ ಒಂದೊಂದೇ ಸೌಲಭ್ಯಗಳನ್ನು ಕಿತ್ತುಕೊಳ್ಳಲು ಹೊರಟಿದೆ. ಹಿಂದೆ ಇದ್ದ ಕಾರ್ಖಾನೆ ಪದ್ಧತಿಯನ್ನು ರದ್ದು ಮಾಡಿ ಕೆಲಸವನ್ನು ಮನೆಗಳಿಗೆ ಸೀಮಿತಗೊಳಿಸಲಾಗಿದೆ. ಬೀಡಿ ಕಾರ್ಮಿಕರಿಗಾಗಿ ತೆರೆಯಲಾಗಿದ್ದ ಚಿಕಿತ್ಸಾಲಯಗಳಲ್ಲಿ ಇಂದು ಬಹಳಷ್ಟು ಸ್ಥಗಿತಗೊಂಡಿವೆ. ಬೀಡಿ ಕಾರ್ಮಿಕರ ಆರೋಗ್ಯ ರಕ್ಷಣೆಗಾಗಿ ಇದ್ದ ಆಂಬುಲೆನ್ಸ್ ಸೇವೆಗಳೂ ಈಗ ಸಿಗುತ್ತಿಲ್ಲ. ಇಎಸ್ಐ ಸೌಲಭ್ಯ ದೊರೆಯುತ್ತಿಲ್ಲ. ಬೀಡಿಗೆ ನಿರ್ದಿಷ್ಟ ಬೆಲೆ ನಿಗದಿಪಡಿಸಿದರೂ ಅದು ಹೆಚ್ಚಿನ ಬೀಡಿ ಕಾರ್ಮಿಕರಿಗೆ ಸಿಗುತ್ತಿಲ್ಲ. ಜೊತೆಗೆ ಕೇಂದ್ರ ಸರ್ಕಾರ ಜಾರಿಗೆ ತಂದ ಜಿಎಸ್ಟಿಯಿಂದಾಗಿ ಬೀಡಿ ಕೈಗಾರಿಕೆಯು ಸಂಕಷ್ಟಕ್ಕೆ ಸಿಲುಕಿದೆ. ಎಂದರು.

ಕಾರ್ಮಿಕ ವರ್ಗವೇ ಅಪಾಯದಲ್ಲಿದೆ:

ವಿದ್ಯಾರ್ಥಿ ವೇತನವು ಆನ್ಲೈನ್ ಮೂಲಕ ಪಡೆಯುವ ಹೊಸ ವ್ಯವಸ್ಥೆ ಎಲ್ಲಾ ಬೀಡಿ ಕಾರ್ಮಿಕರಿಗೆ ತಲುಪುತ್ತಿಲ್ಲ. ಮಾಲಿಕರು ಇಎಸ್ಐಗಾಗಿ ತಮ್ಮ ವಂತಿಗೆ ಕಟ್ಟುವುದರ ಬಗ್ಗೆ ಸರಕಾರ ಬಲವಂತಪಡಿಸದೆ ಇರುವುದರಿಂದ ಇಎಸ್ಐ ಮೂಲಕ ಚಿಕಿತ್ಸಾ ಸೌಲಭ್ಯ ಸಿಗುತ್ತಿಲ್ಲ. ಚಳುವಳಿಯನ್ನು ಬಲಿಷ್ಟಗೊಳಿಸದಿದ್ದರೆ ಬೀಡಿ ಕಾರ್ಮಿಕರು ಈಗಾಗಲೇ ಗಳಿಸಿರುವ ಸೌಲಭ್ಯಗಳನ್ನು ಕಳೆದುಕೊಳ್ಳುವ ಪರಿಸ್ಥಿತಿ ಬರುತ್ತದೆ. ಇದಕ್ಕಾಗಿ ಇತರ ಕಾರ್ಮಿಕ ಸಂಘಟನೆಗಳೊಡನೆ ಸೇರಿ ಚಳುವಳಿ ನಡೆಸಬೇಕಾಗಿದೆ. ಇವತ್ತು ಬೀಡಿ ಕಾರ್ಮಿಕರು ಮಾತ್ರವೇ ಅಲ್ಲ, ಕಾರ್ಮಿಕ ಕಾಯಿದೆಗಳ ಸ್ಥಾನದಲ್ಲಿ ಕಾರ್ಮಿಕ ಕೋಡ್ಗಳು ಜಾರಿಗೆ ಬರುವುದರಿಂದ ಕಾರ್ಮಿಕ ವರ್ಗವೇ ಅಪಾಯದ ಪರಿಸ್ಥಿತಿಯಲ್ಲಿದೆ. ಈ ನಿಟ್ಟಿನಲ್ಲಿ ಎಲ್ಲಾ ಕಾರ್ಮಿಕರು ಒಟ್ಟಾಗಿ ಸರಕಾರದ ನೀತಿಗಳ ವಿರುದ್ಧವಾದ ಹೋರಾಟವನ್ನು ಕಟ್ಟಬೇಕಾಗಿದೆ. ಆ ಮೂಲಕ ಕಾರ್ಮಿಕರ ಹಕ್ಕುಗಳ ರಕ್ಷಣೆ ಮಾಡಬೇಕು ಎಂದು ದೇಬಶಿಸ್ ರಾಯ್ ಕಾರ್ಮಿಕರಿಗೆ ಕರೆ ನೀಡಿದರು.

ಕರ್ನಾಟಕದಲ್ಲಿ ರಾಜ್ಯ ಬೀಡಿ ಫೆಡರೇಶನ್ (ಸಿಐಟಿಯು) ನೇತೃತ್ವದಲ್ಲಿ ಮಂಗಳೂರಿನಲ್ಲಿ ಡಾನ್ಬಾಸ್ಕೋ ಹಾಲಿನ 'ಕಾ|ಬಿ. ಮಾಧವ ವೇದಿಕೆ'ಯಲ್ಲಿ ಎರಡು ದಿನಗಳು ನಡೆಯಿತು. ಹಿರಿಯ ಕಾರ್ಮಿಕ ಮುಖಂಡ ಯು.ಬಿ.ಲೋಕಯ್ಯನವರು ಸಮ್ಮೇಳನದ ಧ್ವಜಾರೋಹಣ ನೆರವೇಸಿದರು. ಬೀಡಿ ಫೆಡರೇಶನ್ನಿನ ರಾಜ್ಯ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದ ಉದ್ಘಾಟನಾ ಸಭೆಯಲ್ಲಿ, ಸಮ್ಮೇಳನವನ್ನು ಉದ್ದೇಶಿಸಿ ಎಐಟಿಯುಸಿ ಸಂಯೋಜಿತ ದ.ಕ.ಜಿಲ್ಲಾ ಬೀಡಿ ಫೆಡರೇಶನ್ನಿನ ಮುಖಂಡರಾದ ಸೀತಾರಾಮ ಬೇರಿಂಜ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿದರು. ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರೂ ದ.ಕ.ಜಿಲ್ಲಾ ಬೀಡಿ ಫೆಡರೇಶನ್ನಿನ ಅಧ್ಯಕ್ಷರಾದ ವಸಂತ ಆಚಾರಿ ಸಮ್ಮೇಳನದ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಬೀಡಿ ರಾಜ್ಯ ಫೆಡರೇಶನ್ನಿನ ಮುಖಂಡರಾದ ಸೈಯ್ಯದ್ ಮುಜೀಬ್, ಪದ್ಮಾವತಿ ಶೆಟ್ಟಿ, ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಹಾಗೂ ಫೆಡರೇಶನ್ನಿನ ರಾಜ್ಯ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಮಿಕ ಮುಖಂಡ ಸುಕುಮಾರ್ ಉದ್ಘಾಟನಾ ಸಮಾರಂಭದ ನಿರೂಪಣೆ ಮಾಡಿದರು.

ಸಮ್ಮೇಳನವು ಬೀಡಿ ಉದ್ದಿಮೆ ಹಾಗೂ ಕೈಗಾರಿಕಾ ರಂಗದಲ್ಲಿ ಕಾರ್ಮಿಕರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ, ರಾಜ್ಯ ಪ್ರಧಾನ ಕಾರ್ಯದರ್ಶಿ ಸೈಯ್ಯದ್ ಮುಜೀಬ್ ಅವರು ಮಂಡಿಸಿದ ಚಟುವಟಿಕೆಗಳ ವರದಿಯನ್ನು ಆಧರಿಸಿ ದೀರ್ಘವಾಗಿ ಚರ್ಚೆ ನಡೆಸಿತು. ಹಾಗೂ ಮುಂದಿನ ದಿನಗಳಲ್ಲಿ ಸಂಘಟನೆಯನ್ನು ಬಲಪಡಿಸುವ ಬಗ್ಗೆ ಕಾರ್ಯಕ್ರಮಗಳನ್ನು ರೂಪುಗೊಳಿಸಿತು.

ಬಾಬು ಪಿಲಾರ್ ಅವರು ಬರೆದಿರುವ ಹಿರಿಯ ಕಾರ್ಮಿಕ ಮುಖಂಡರಾದ ಯು.ಬಿ.ಲೋಕಯ್ಯ ಅವರ ಜೀವನ ಹೋರಾಟಗಳನ್ನು ವಿವರಿಸುವ ಪುಸ್ತಕವನ್ನು ದೇಬಶಿಸ್ ರಾಯ್ ಅವರು ಬಿಡುಗಡೆಗೊಳಿಸಿದರು.

ಸಮ್ಮೇಳನವು ಮುಂದಿನ ಅವಧಿಗೆ 30 ಮಂದಿ ಸದಸ್ಯರುಳ್ಳ ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಜೆ.ಬಾಲಕೃಷ್ಣ ಶೆಟ್ಟಿಯವರು ಅಧ್ಯಕ್ಷರಾಗಿಯೂ, ಸೈಯ್ಯದ್ ಮುಜೀಬ್ ಅವರು ಪ್ರಧಾನ ಕಾರ್ಯದರ್ಶಿಗಳಾಗಿಯೂ ಮತ್ತು ಎಸ್.ಪದ್ಮಾವತಿ ಶೆಟ್ಟಿಯವರು ಕ ೋ ೀ ಶಾ ಧಿ ಕಾ ರಿ ಗ ಳಾ ಗಿ ಂ ು ೂ ಪುನರಾಯ್ಕೆಗೊಂಡಿರುತ್ತಾರೆ.

ಸಮ್ಮೇಳನ ಕೈಗೊಂಡ ಪ್ರಮುಖ ನಿರ್ಣಯ:

2023ರ ಜನವರಿಯಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನವನ್ನು ಯಶಸ್ವಿಗೊಳಿಸಲು, ಏರಿಕೆಯಾಗಿರುವ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ನಿಯಂತ್ರಣಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲು, ಬೀಡಿ ಕಾರ್ಮಿಕರಿಗೆ ಕನಿಷ್ಟ ವೇತನ ಜಾರಿಗಾಗಿ, ಕೋಮುವಾದವನ್ನು ವಿರೋಧಿಸುವ ಕುರಿತು, ಬೀಡಿ ಕಾರ್ಮಿಕರ ಉದ್ಯೋಗ ಮತ್ತು ಪರಿಹಾರಕ್ಕಾಗಿ ಒತ್ತಾಯಿಸುವ ಹಾಗೂ ಭವಿಷ್ಯನಿಧಿ ಪಿಂಚಣಿಗೆ ಸಂಬಂಧಿಸಿದ ನಿರ್ಣಯಗಳನ್ನು ಸಮ್ಮೇಳನವು ಕೈಗೊಂಡು ಮುಂದಿನ ದಿನಗಳಲ್ಲಿ ಹೋರಾಟಗಳನ್ನು ನಡೆಸಲು ಕರೆ ನೀಡಿತು.

ಹಕ್ಕುಪತ್ರ ಒತ್ತಾಯಿಸಿ ಬೈಂದೂರಿನಲ್ಲಿ ಧರಣಿ



ಬೈಂದೂರು ಪಟ್ಟಣ ಪಣಚಾಯತ್ ವ್ಯಾಪ್ತಿಯ ಸರಕಾರಿ ಭೂಮಿಯಲ್ಲಿ ವಾಸವಾಗಿದ್ದು, ನಿವೇಶನಕ್ಕೆ ಸ್ಥಳ ಕೋರಿ ಅರ್ಜಿ ಸಲ್ಲಿಸಿದವರಿಗೆ ಹಕ್ಕುಪತ್ರ ಮಂಜೂರು ಮಾಡಲು ಒತ್ತಾಯಿಸಿ ರೈತ ಕೃಷಿಕೂಲಿಕಾರರು ನವಂಬರ್ 4 ರಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ತಹಶೀಲ್ದಾರ್ ಕಚೇರಿ ಎದುರು ಧರಣಿ ನಡೆಸಿದರು.


ಈ ಕುರಿತ ಮನವಿಯನ್ನು ತಹಶೀಲ್ದಾರ್ ಶ್ರೀಕಾಂತ ಎಸ್.ಹೆಗ್ಡೆ ಅವರಿಗೆ ಸಲ್ಲಿಸಲಾಯಿತು. ಕೃಷಿಕೂಲಿಕಾರರ ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ, ಕಾರ್ಯದರ್ಶಿ ನಾಗರತ್ನ ನಾಡಾ, ನಾಗರತ್ನ ಪಡುವರಿ, ಸಿಐಟಿಯು ತಾಲೂಕು ಸಂಚಾಲಕ ರೊನಾಲ್ಡ್ ರಾಜೇಶ್ ಕ್ವಾಡ್ರಸ್ ಮತ್ತಿತರರು ಉಪಸ್ಥಿತರಿದ್ದರು.



ಟೋಲ್ಗೇಟ್ ವಿರೋಧಿ ಧರಣಿ; ರಾಜ್ಯೋತ್ಸವ ಆಚರಣೆ:

ಸುರತ್ಕಲ್ ಟೋಲ್ಗೇಟ್ ತೆರವಿಗೆ ಆಗ್ರಹಿಸಿ ಹೋರಾಟ ಸಮಿತಿ ಅಕ್ಟೋಬರ್ 28 ರಿಂದ ನಡೆಸುತ್ತಿರುವ ಅಹೋರಾತ್ರಿ ಧರಣಿ 5ನೇ ದಿನವನ್ನು ಪೂರೈಸಿದ ನವಂಬರ್ 1 ರಂದು, ಧರಣಿ ಸ್ಥಳದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು. ದಲಿತ ಚಳುವಳಿಯ ಹಿರಿಯ ಹೋರಾಟಗಾರ ಎಂ.ದೇವದಾಸ್ ಧ್ವಜಾರೋಹಣ ಮಾಡಿದರು. ರಾಜ್ಯೋತ್ಸವದ ನಿಮಿತ್ತ ಟೋಲ್ಗೇಟ್ ಕವಿತೆಗಳ ಕವಿಗೋಷ್ಠಿಯನ್ನು ಧರಣಿಯ ವೇದಿಕೆಯಲ್ಲಿ ಆಯೋಜಿಸಲಾಗಿತ್ತು. ಕವಿ ವಿಲ್ಸನ್ ಕಟೀಲ್ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಕವಿ ಮಹಮ್ಮದ್ ಬಡ್ಡೂರು, ಜೊಸ್ಸಿ ಪಿಂಟೋ ಕಿನ್ನಿಗೋಳಿ, ಅಸುಂತಾ ಡಿಸೋಜ, ನವೀನ್ ಪಿರೇರಾ ಸುರತ್ಕಲ್, ಸಂವರ್ಥ ಸಾಹಿಲ್, ಹುಸೇನ್ ಕಾಟಿಪಳ್ಳ, ಎಂ.ಜಿ.ಹೆಗ್ಡೆ ಹಾಗೂ ಜಲೀಲ್ ಮುಕ್ರಿ ಅವರು ಕವನಗಳನ್ನು ಓದಿದರು.

ಇದೇ ದೀನ ಮಂಗಳೂರು ಜನಪರ ವಕೀಲರ ತಂಡವು ಧರಣಿಯಲ್ಲಿ ಭಾಗವಹಿಸಿತು. ವಕೀಲರಾದ ಎಸ್.ಪಿ.ಚೆಂಗಪ್ಪ, ಬಿ. ಇಬ್ರಾಹಿಂ, ಯಶವಂತ ಮರೋಳಿ, ಟಿ.ನಾರಾಯಣ ಪೂಜಾರಿ, ಶಾಲಿನಿ ಬೋಳಾರ್, ವಸಂತ ಕಾರಂದೂರು, ರಾಮಚಂದ್ರ ಬಬ್ಬುಕಟ್ಟೆ, ನಿತಿನ್ ಕುತ್ತಾರ್, ಚರಣ್ ಪಂಜಿಮೊಗರು, ದಿನೇಶ್ ಹೆಗ್ಡೆ ಉಳ್ಳೆಪಾಡಿ ಭಾಗವಹಿಸಿದರು.



8ನೇ ರಾಜ್ಯ ಸಮ್ಮೇಳನಕ್ಕೆ ಸಜ್ಜಾಗುತ್ತಿರುವ ಕೃಷಿ ಕೂಲಿಕಾರರು

ಕೃಷಿ ಕೂಲಿಕಾರರ 10ನೇ ಅಖಿಲ ಭಾರತ ಸಮ್ಮೇಳನ 2023 ಫೆಬ್ರವರಿ ತಿಂಗಳ 12 ರಿಂದ 15 ರ ವರೆಗೆ ಪಶ್ಚಿಮ ಬಂಗಾಳದ ಹೌವ್ರಾ ನಗರದಲ್ಲಿ ನಡೆಯಲಿದೆ. ಇದರ ಪೂರ್ವಭಾವಿಯಾಗಿ ರಾಜ್ಯ ಸಮ್ಮೇಳನಗಳು ಹಾಗೂ ಜಿಲ್ಲಾ ಸಮ್ಮೇಳನಗಳು ನಡೆಯಲಿವೆ. 8ನೇ ಕರ್ನಾಟಕ ರಾಜ್ಯ ಸಮ್ಮೇಳನವು 2022 ನವಂಬರ್ 29 ಮತ್ತು 30 ಹಾಗೂ ಡಿಸೆಂಬರ್ 1 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಇದಕ್ಕೂ ಪೂರ್ವದಲ್ಲಿ ನಡೆಯಬೇಕಾದ ತಾಲೂಕು, ವಲಯ ಹಾಗೂ ಗ್ರಾಮ ಸಮ್ಮೇಳನಗಳು ಈಗಾಗಲೇ ಆರಂಭವಾಗಿವೆ. ಕರ್ನಾಟಕ ರಾಜ್ಯ ಸಮ್ಮೇಳನವನ್ನು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರೂ, ಮಾಜಿ ರಾಜ್ಯಸಭಾ ಸದಸ್ಯರು, ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರೂ ಆಗಿರುವ ಸಂಗಾತಿ ಎ.ವಿಜಯ ರಾಘವನ್ ರವರು ನವೆಂಬರ್ 29 ರಂದು 11 ಗಂಟೆಗೆ ನಡೆಯುವ ಬೃಹತ್ ಬಹಿರಂಗ ಸಭೆಯಲ್ಲಿ ಉದ್ಘಾಟಿಸುವರು. ಸಂಘದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸಂಗಾತಿ ಬಿ. ವೆಂಕಟ್, ದೇಶದ ಸರ್ವೋಚ್ಚ ನ್ಯಾಯಾಲಯದ ಗೌರವಾನ್ವಿತ ವಿಶ್ರಾಂತ ನ್ಯಾಯಾಧೀಶರಾದ ಸನ್ಮಾನ್ಯ ಶ್ರೀ ವಿ. ಗೋಪಾಲಗೌಡರು ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ, ಪ್ರಗತಿಪರ ಚಿಂತಕಿ ಸಂಗಾತಿ ಕೆ.ಎಸ್. ಲಕ್ಷ್ಮಿ ಮುಖ್ಯ ಅತಿಥಿಗಳಾಗಿ ಬಹಿರಂಗ ಸಭೆಯಲ್ಲಿ ಭಾಗವಹಿಸಿ ಮಾತನಾಡುವರು. ನಂತರ ಧ್ವಜಾರೋಹಣದೊಂದಿಗೆ ಪ್ರತಿನಿಧಿಗಳ ಅಧಿವೇಶನ ಆರಂಭವಾಗುವುದು. ಮೆರವಣಿಗೆ ಮತ್ತು ಬಹಿರಂಗ ಸಭೆಯಲ್ಲಿ ಸಾರ್ವಜನಿಕರು ವಿವಿಧ ಪ್ರಗತಿಪರ ಸಂಘಟನೆಗಳ ಸದಸ್ಯರು ಭಾಗವಹಿಸಬೇಕೆಂದು ಕೋರಲಾಗಿದೆ.

ಕೃಷಿ ಕೂಲಿಕಾರರ ಸಂಘ ಒಂದು ವರ್ಗ ಸಂಘಟನೆಯಾಗಿದೆ. ಇವರು ಆರ್ಥಿಕವಾಗಿ ಶೋಷಿತರೂ ಸಾಮಾಜಿಕವಾಗಿ ದಮನಿತರೂ ಆಗಿರುವವರು. ರಟ್ಟೆಯ ಬಿಟ್ಟರೆ ಬೇರೆ ಆಸ್ತಿ ಇಲ್ಲದವರು. ತಮ್ಮ ಜೀವನ ನಿರ್ವಹಣೆಗೆ ತಮ್ಮ ನಿತ್ಯದ ದುಡಿಮೆಯನ್ನೇ ಅವಲಂಬಿಸಿದವರು ಇವರು. ಶ್ರೀಮಂತ ರೈತರ ಹಾಗೂ ಜಮೀನ್ದಾರರ ಹೊಲಗದ್ದೆಗಳಲ್ಲಿ ಮತ್ತು ತೋಟಗಳಲ್ಲಿ ದೊರೆಯುವ ಕೃಷಿ ಕೆಲಸವನ್ನು ಕೊಟ್ಟಷ್ಟು ಕೂಲಿಗೆ ಜೀವನ ಸಾಗಿಸುತ್ತಿರುವವರು. ಇತರ ಅಸಂಘಟಿತ ವಲಯದ ಕಾರ್ಮಿಕರಿಕ್ಕಿಂತ ಇವರಿಗೆ ದೊರೆಯುವ ಕನಿಷ್ಠ ವೇತನ ಅತಿ ಕಡಿಮೆ. ಇವರಲ್ಲಿ ಬಹುತೇಕ ಮಂದಿಗೆ ವಾಸಕ್ಕೆ ಸ್ವಂತ ಮನೆಗಳಿಲ್ಲ.



ಇವರಲ್ಲಿ ಬಹುತೇಕ ಮಂದಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರು. ಇಂದಿಗೂ ಜೀವಂತವಾಗಿರುವ ಮನುಸ್ಮೃತಿ ಆಧಾರಿತ ಚತುರ್ವರ್ಣ ಪದ್ಧತಿ ಆಧಾರಿತ ಪಾಳೆಗಾರಿ ಸಮಾಜದಲ್ಲಿ ಅವರನ್ನು ಇತರರೊಂದಿಗೆ ಸಮಾನವಾಗಿ ಕಾಣಲಾಗುವುದಿಲ್ಲ. ಅಸಂಖ್ಯಾತ ಸಾಮಾಜಿಕ ತಾರತಮ್ಯದ ಆಚರಣೆಗಳ ಮೂಲಕ ಅವರನ್ನು ಪಶುಗಳಿಗಿಂತ ಕೀಳಾಗಿ ಕಾಣಲಾಗುತ್ತದೆ. ಇವರು ಬಹುತೇಕವಾಗಿ ಅನಕ್ಷರಸ್ಥರಾಗಿದ್ದು ಅವರ ಪ್ರಜ್ಞೆ ತೀರಾ ಕೆಳಮಟ್ಟದಾಗಿರುತ್ತದೆ. ಮೌಢ್ಯ, ಕೀಳರಿಮೆ ಅವರನ್ನು ಆವರಿಸಿಕೊಂಡಿರುತ್ತದೆ. ಇವರನ್ನು ಸಂಘಟಿಸುವುದು ಮತ್ತು ಅವರು ತಮ್ಮ ವರ್ಗ ರಾಜಕೀಯವನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾಗಿದೆ.

ಇಂದು ಕೃಷಿ ರಂಗದಲ್ಲಿ ಅನೇಕ ಬದಲಾವಣೆಗಳು ಆಗುತ್ತಿವೆ. ಕೃಷಿ ಬಿಕಟ್ಟು ಆಳವಾಗುತ್ತದೆ. ಕೃಷಿಯಲ್ಲಿ ಯಾಂತ್ರಿಕರಣ ಹಾಗೂ ಕಾರ್ಪೊರೇಟೀಕರಣ ತೀವ್ರಗತಿಯಿಂದ ಆಗುತ್ತಿದೆ. ಕಾರ್ಪೋರೇಟ್ ಪರವಾಗಿರುವ ಬಿಜೆಪಿಯಂತಹ ಸರ್ಕಾರಗಳು ತಮ್ಮ ಉದಾರೀಕರಣವೆಂಬ ವಿನಾಶಕಾರಿ ನೀತಿಗಳಿಂದಾಗಿ ಲೂಟಿಕೋರ ಕಾರ್ಪೋರೇಟ್ ಕಂಪೆನಿಗಳಿಗೆ ದೇಶದ ಸಂಪತ್ತನ್ನು ಹರಾಜು ಹಾಕಲು ಮುಂದಾಗಿವೆ. ಕೃಷಿ ಕೂಲಿಕಾರರಿಗೆ ಕೆಲಸದ ಲಭ್ಯತೆ ತೀವ್ರವಾಗಿ ಕುಸಿಯುತ್ತಿದೆ. ಕೂಲಿಕಾರರಿಗೆ ಕೆಲಸ ಒದಗಿಸಬಲ್ಲ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ನಿರ್ನಾಮ ಮಾಡುವ ಪಿತೂರಿ ಮಾಡಲಾಗುತ್ತಿದೆ. ಸರ್ಕಾರದ ತಪ್ಪು ನೀತಿಗಳನ್ನು ವಿರೋಧಿಸುವ ಧ್ವನಿಗಳನ್ನು ಹತ್ತಿಕ್ಕಲಾಗುತ್ತದೆ. ಅವರ ನಡುವೆ ಜಾತಿ, ಧರ್ಮದ ದ್ವೇಷವನ್ನು ಬಿತ್ತಿ, ಬೆಳಸಿ ಬಡವರ ಸಹಜವಾದ ಐಕ್ಯತೆಯನ್ನು ನಾಶಮಾಡಲಾಗುತ್ತದೆ. ಇಂತಹ ವಿಶಮ ಕಾಲಘಟ್ಟದಲ್ಲಿ ಕೃಷಿಕೂಲಿಕಾರರನ್ನು ಮತ್ತು ಗ್ರಾಮೀಣ ಬಡವರನ್ನು ಜಾತಿ ಧರ್ಮದ ಅಮಲನ್ನು ಮೀರಿ ವೃತ್ತಿ ಆಧಾರದಲ್ಲಿ ಒಂದುಗೂಡಿಸುವುದು ನಮ್ಮ ಸಂಘದ ವಿಶೇಷ ಜವಾಬ್ದಾರಿಯಾಗಿದೆ.



ರಾಜ್ಯದ ಮಂಡ್ಯ, ಚಿಕ್ಕಬಳ್ಳಾಪುರ, ಕಲಬುರಗಿ, ಯಾದಗಿರಿ, ಕೊಪ್ಪಳ, ಕೊಡಗು ಮುಂತಾದ ಜಿಲ್ಲೆಗಳಲ್ಲಿ ನವೆಂಬರ್ 18 ರೊಳಗಾಗಿ ಜಿಲ್ಲಾ ಸಮ್ಮೇಳನಗಳನ್ನು ಪೂರ್ಣಗೊಳಿಸಲಾಗುವುದು. ಮುಂಡಗೋಡ್, ಸಿರುಗುಪ್ಪ, ವಿಜಯನಗರ ಜಿಲ್ಲೆ ಹರಪನಹಳ್ಳಿ, ಟಿ. ನರಸೀಪುರ ಮೊದಲಾದ ತಾಲ್ಲೂಕು ಸಮ್ಮೇಳನಗಳು ನಡೆದಿವೆ. ಗಂಗಾವತಿ, ಕನಕಗಿರಿ, ಕಾರಟಗಿ, ಕೊಪ್ಪಳ ತಾಲೂಕುಗಳ, ಮಳವಳ್ಳಿ, ಮದ್ದೂರು, ಮಂಡ್ಯ, ಪಾಂಡವಪುರ ತಾಲೂಕುಗಳಲ್ಲಿ, ಕಾಳಗಿ, ಜೇವರ್ಗಿ, ಚಿಂಚೋಳ್ಳಿ, ಅಫಜಲ್‌ಪುರ ತಾಲೂಕುಗಳಲ್ಲಿ ಹುಮ್ನಾಬಾದ್, ಔರಾದ್, ಬಾಲ್ಕಿ ತಾಲ್ಲೂಕುಗಳಲ್ಲಿ, ರಾಯಚೂರು, ದೇವದುರ್ಗ, ಲಿಂಗಸ್ಗೂರು ತಾಲೂಕುಗಳಲ್ಲಿ, ಸಮ್ಮೇಳನಗಳು ನಡೆದಿವೆ. ಕುಷ್ಟಗಿ ಶ್ರೀರಂಗಪಟ್ಟಣ, ನಾಗಮಂಗಲ, ಕಲಘಟಗಿ, ಹಾನಗಲ್ ತಾಲೂಕುಗಳಲ್ಲಿ ಸರ್ವ ಸದಸ್ಯರ ಸಭೆಗಳನ್ನು ನಡೆಸಿ ಸಂಚಾಲಕ ಸಮಿತಿಗಳನ್ನು ರಚಿಸಲಾಗಿದೆ. 2021–22 ಅವಧಿಯಲ್ಲಿ ಕರ್ನಾಟಕದ ಒಟ್ಟು ಸದಸ್ಯತ್ವ 3 ಲಕ್ಷ ದಾಟಿರುವುದು ಗಮನಾರ್ಹವಾಗಿದೆ.

ಚಂದ್ರಪ್ಪ ಹೊಸ್ಕೇರಾ









ಅಖಿಲ ಭಾರತ ಮಟ್ಟದಲ್ಲಿ ದೇಶೀಯ ಟೆಲಿಕಾಂ ವಲಯದ ಭಾರತ ಸಂಚಾರ ನಿಗಮದ ಕಾರ್ಮಿಕ ಸಂಘಟನೆಗಳ ಚುನಾವಣೆಯಲ್ಲಿ ಸಿಐಟಿಯು ಮಾರ್ಗದರ್ಶನದ, ಕಾಂ.ವಿ.ಎ.ಎನ್ ನಂಬೂದಿರಿಯವರಿಂದ ಸ್ಥಾಪಿತವಾದ ಬಿ.ಎಸ್. ಎನ್.ಎಲ್. ಎಂಪ್ಲಾಯಿಸ ಯೂನಿಯನ್ ಸತತ ಎಂಟನೆಯ ಬಾರಿಗೆ ನಂ.1 ಯುನಿಯನ್ ಆಗಿ ಅಂದರೆ ಪ್ರತಿಶತ 48.6 ಉದ್ಯೋಗಿಗಳ ಮನ್ನಣೆ ಪಡೆದು ಜಯ ಗಳಿಸಿದೆ.

ಮುಂದಿನ ಮೂರು ವರ್ಷ ಕಾರ್ಮಿಕ ಹಿತರಕ್ಷಣೆ, ಬಿ.ಎಸ್.ಎನ್.ಎಲ್. ನ್ನು ಭಾರತೀಯ ಸಂಸ್ತೆಯನ್ನಾಗಿ ಸಂರಕ್ಷಿಸುವದು, ನಿಗಮಕ್ಕೆ 4ಜಿ ಸೌಲಭ್ಯ ಪಡೆಯುವ ಗುರಿ ಹೊಂದಿದೆ... ಪ್ರಸಕ್ತ ಸಂಘದ ಕೇಂದ್ರದಲ್ಲಿ ಕಾಂ.ಅನುಮೇಶ ಮಿತ್ರೋ ಹಾಗೂ ಕಾಂ.ಪಿ.ಅಭಮನ್ಯು ಧುರಿಣರಾದರೆ ಕರ್ನಾಟಕ ದ ಕಾಂ.ಸಿ.ಕೆ.ಗುಂಡಣ್ಣ, ಕಾಂ. ಎಚ್.ವಿ.ಸುದರ್ಶನ ರಾಜ್ಯದ ಜವಾಬ್ದಾರಿ ಹೊತ್ತು ಜಯದ ರೂವಾರಿಯಾಗಿದ್ದಾರೆ. ಕಳೆದ ಎರಡು ದಶಕಗಳಿಂದ ತಿಂಗಳಿಗೆ 300 ರೂ. ಸಂಬಳ ಪಡೆಯುತ್ತಿದ್ದ ಗುತ್ತಿಗೆ ಕಾರ್ಮಿಕರ ಸಂಘಟನೆಯ ನೇತೃತ್ವದ **CONTRACT & CASUAL LANOUR ORGANISATION, BSNL EMPLOYEES UNION** ದ ಆಧೀನದ ಸಂಸ್ತೆಯಾಗಿದ್ದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ.ಮೀನಾಕ್ಷಿ ಸುಂದರಂ ಹಾಗೂ ಕಾಂ.ಕೆ.ಮಹಾಂತೇಶ್ ರ ಧುರಿಣತ್ವದಲ್ಲಿ ಸಂಘದ ನಾಯಕತ್ವದ ಪ್ರಯತ್ನದಿಂದ ಕೇಂದ್ರ ಸರ್ಕಾರದ ಕಾರ್ಮಿಕ ಕಾಯ್ದೆಯಂತೆ ಅವರ ಸಂಬಳ ವೃದ್ದಿಯಾಗಿದೆ... ವಲಯ ಹಾಗೂ ಕೇಂದ್ರ ಧುರಿಣರು ಉದ್ಯೋಗಿಗಳು ನೀಡಿದ ಬೆಂಬಲಕ್ಕೆ ಅಭಿನಂದಿಸಿದ್ದಾರೆ.

ಜಿ.ಬಿ.ಸಾಲಕ್ಕಿ
ಕೇಂದ್ರ ಸಂಘಟನೆಯ ಪರವಾಗಿ

ಚೀನಾ ಕಮ್ಯುನಿಸ್ಟ್ ಪಕ್ಷದ 20ನೆಯ ಮಹಾಧಿವೇಶನ ಕಳೆದ ವಾರ ಜಾಗತಿಕ ಮತ್ತು ಭಾರತೀಯ ಮಾಧ್ಯಮಗಳಲ್ಲಿ ಭಾರೀ ಸುದ್ದಿಯಲ್ಲಿತ್ತು. ಈ ಸುದ್ದಿಗಳು ವರದಿಗಳು ನಿರೂಪಿಸಿದಂತೆ? ತೈವಾನ್ ಮತ್ತು ನೆರೆಯ ದೇಶಗಳ ಮೇಲೆ ಹಾಗೂ ವಿದೇಶ ನೀತಿಯಲ್ಲಿ ಆಕ್ರಾಮಕ ಧೋರಣೆ, ಮಹಾಧಿವೇಶನ ಷಿ ಜಿಂಪಿಂಗ್ ನಾಯಕತ್ವ ಮೊದಲೇ ಮಾಡಿದ ನಿರ್ಣಯಗಳಿಗೆ ಅಸ್ತು ಕೊಡುವ 'ರಬ್ಬರ್ ಸ್ಟಾಂಪ್', ಷಿ ಜಿಂಪಿಂಗ್ ಮೂರನೆಯ ಅವಧಿಗೆ ಪ್ರಧಾನ ಕಾರ್ಯದರ್ಶಿಯಾಗಿ ಪ್ರಾಬಲ್ಯ ಅಗಾಧವಾಗಿ ಹೆಚ್ಚಾಗಿ ಏಕವ್ಯಕ್ತಿ ಸರ್ವಾಧಿಕಾರಿಯಾಗಿ ಹೊಮ್ಮುತ್ತಿರುವುದು, ಷಿ ಜಿಂಪಿಂಗ್ ತಮ್ಮ ವಿರೋಧಿಗಳನ್ನು ಹಣಿದು ಇದನ್ನು ಸಾಧಿಸಿರುವುದು – ಇವೇ ಮಹಾಧಿವೇಶನದ ಮುಖ್ಯ ಅಂಶಗಳೇ? ಅಲ್ಲದಿದ್ದರೆ ಮಹಾಧಿವೇಶನದ ಕುರಿತ ಈ ಮಾಧ್ಯಮ ವರದಿಗಳಲ್ಲಿ ಬರದ ಪ್ರಮುಖ ಅಂಶಗಳು ಇವೆಯೇ? ಅವು ಯಾವುವು? ಈ ಪ್ರಶ್ನೆಗಳ ಮತ್ತು ಸಂಬಂಧಿತ ಉಪಪ್ರಶ್ನೆಗಳ ಕುರಿತು ಮಹಾಧಿವೇಶನದ ಕಲಾಪಗಳ ಮೇಲೆ ಆಧಾರಿತ ವಾಸ್ತವಾಂಶಗಳು

****

ಮಹಾಧಿವೇಶನದಲ್ಲಿ ತೈವಾನ್ ಮತ್ತು ನೆರೆಯ ದೇಶಗಳ ಮೇಲೆ ಹಾಗೂ ವಿದೇಶ ನೀತಿಯಲ್ಲಿ ಆಕ್ರಾಮಕ ಧೋರಣೆ ವ್ಯಕ್ತವಾಯಿತೇ?



ಚೀನಾ ಕಮ್ಯೂನಿಸ್ಟ್ ಪಕ್ಷದ 20ನೆಯ ಮಹಾಧಿವೇಶನ

ಸಮಾಜವಾದಿ ಆಧುನಿಕರಣಕ್ಕೆ ಕರೆ

ಜಗದ ಸುತ್ತ

ವಸಂತರಾಜ ಎನ್.ಕೆ.

ಮಹಾಧಿವೇಶನದಲ್ಲಿ ಮಂಡಿಸಿ ಅಂಗೀಕೃತವಾದ ಸಿ.ಪಿ.ಸಿ.ಯ ಕೇಂದ್ರ ಸಮಿತಿ ವರದಿ ತೈವಾನ್ ಜತೆ 'ಒಂದು ದೇಶ, ಎರಡು ವ್ಯವಸ್ಥೆಗಳು' ನೀತಿಯ ಆಧಾರದ ಮೇಲೆ ಹೊಸ ಯುಗದಲ್ಲಿ ಶಾಂತಿಯುತವಾಗಿ ಸಾಧಿಸಲಾಗುವುದು ಎಂದು ಹೇಳಿದೆ. ತೈವಾನ್ ಕುರಿತು ವರದಿ ಪಕ್ಷದ ಎಂದಿನ ನಿಲುವುಗಳನ್ನು ಮನರುಚ್ಚರಿಸಿದೆ.

"ನಾವು ಶಾಂತಿಯುತ ಪುನರ್–ಏಕೀಕರಣಕ್ಕೆ ಗರಿಷ್ಟ ಪ್ರಾಮಾಣಿಕತೆ ಮತ್ತು ಮೇರೆ ಮೀರಿ ಪ್ರಯತ್ನವನ್ನು ಮುಂದುವರೆಸುತ್ತೇವೆ. ಆದರೆ ನಾವು ಬಲಪ್ರಯೋಗ ತ್ಯಾಗ ಮಾಡುತ್ತೇವೆ ಎಂದು ಯಾವತ್ತೂ ಭರವಸೆ ಕೊಡುವುದಿಲ್ಲ. ನಾವು ಪುನರ್–ಏಕೀಕರಣಕ್ಕೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಆಯ್ಕೆಯನ್ನು ಕಾದಿರಿಸುತ್ತೇವೆ.. ..(ಆದರೆ) ಇದು (ಈ ಬಲಪ್ರಯೋಗ) ಹಸ್ತಕ್ಷೇಪ ಮಾಡುವ ಹೊರಗಿನ ಶಕ್ತಿಗಳು ಮತ್ತು 'ತೈವಾನ್ ಸ್ವಾತಂತ್ರ್ಯ' ಬಯಸುವ ಕೆಲವೇ ಪ್ರತ್ಯೇಕತಾವಾದಿಗಳ ಹಾಗೂ ಅವರ ಪ್ರತ್ಯೇಕತಾವಾದಿ ಚಟುವಟಿಕೆಗಳ ವಿರುದ್ಧ ಮಾತ್ರವೇ ಇರುತ್ತದೆ. ಅದು ನಮ್ಮ ತೈವಾನ್ ದೇಶಬಾಂಧವರ ವಿರುದ್ಧ ಇರುವುದಿಲ್ಲ"

ಇದು ಚಾರಿತ್ರಿಕವಾಗಿ ಒಂದಾಗಿದ್ದ ಪರಸ್ಪರ ಒಪ್ಪಂದವಿಲ್ಲದೆ ಪ್ರತ್ಯೇಕವಾದ ಪ್ರದೇಶದ ಕುರಿತು ಯಾವುದೇ ದೇಶದ ನಿಲುವು ಅಲ್ಲವೇ? ಪಾಕಿಸ್ತಾನ–ಆಕ್ರಮಿತ ಕಾಶ್ಮೀರದ ಬಗ್ಗೆ ಭಾರತ ಇದೇ ನಿಲುವು ತಾಳುವುದಿಲ್ಲವೇ? ಇದರಲ್ಲಿ ಆಕ್ರಾಮಕವಾದ ಹೊಸ ನೀತಿ ಏನಿದೆ?

ಚೀನಾ ಪ್ರಬಲ ಆಧುನಿಕೀಕರಣ ಪ್ರಯತ್ನದ ಕುರಿತು ಯಾವುದೇ ದೇಶ ಹೆದರಬೇಕಾಗಿಲ್ಲ ಎಂದು ಮಹಾಧಿವೇಶನದ ನಿರ್ಣಯ ಹೇಳುತ್ತದೆ. "(ಆಧುನೀಕೀಕರಣಕ್ಕೆ) ಚೀನಾ ಕೆಲವು ದೇಶಗಳು ಅನುಸರಿಸಿದ ಯುದ್ಧ, ವಸಾಹತೀಕರಣ ಮತ್ತು ಲೂಟಿಯ ಅಭಿವೃದ್ಧಿಶೀಲ ದೇಶಗಳಿಗೆ ಭಾರೀ ಸಾವು–ನೋವು ತಂದ ಕ್ರೂರ ರಕ್ತಸಿಕ್ತ ಕೊಬ್ಬುವಿಕೆಯ ಹಾದಿಯನ್ನು ತುಳಿಯುವುದಿಲ್ಲ. ನಾವು ಶಾಂತಿ, ಅಭಿವೃದ್ಧಿ, ಸಹಕಾರ ಮತ್ತು ಪರಸ್ಪರ ಹಿತಗಳಿಗೆ ಬದ್ಧರಾಗಿದ್ದೇವೆ.." ಇದು ಆಕ್ರಾಮಕ ವಿದೇಶ ಧೋರಣೆಯೇ?

ಮಹಾಧಿವೇಶನದ ವರದಿ ಯು.ಎಸ್ ನ್ನು ಹೆಸರಿಸದೆ ಅದರ ಬೆದರಿಕೆಗಳಿಗೆ ಜಗ್ಗದೆ ಸೆಡ್ಡು ಹೊಡೆದು ನಿಲ್ಲುತ್ತದೆ ಎಂದು ಖಂಡಿತ ಹೇಳುತ್ತದೆ. ಚೀನಾ "ಯಜಮಾನಿಕೆ ಮತ್ತು ಶಕ್ತಿರಾಜಕಾರಣ" ಹಾಗೂ ಯಾವುದೇ ರೀತಿಯ "ಏಕಪಕ್ಷೀಯವಾದ, ಬೆದರಿಕೆ ಒಡ್ಡುವ ನೀತಿ"ಗಳನ್ನು ಸ್ಪಷ್ಟವಾಗಿ ಎಗ್ಗಿಲ್ಲದೆ ವಿರೋಧಿಸುತ್ತದೆ. ಚೀನಾ "ಶೀತಸಮರ ಧೋರಣೆ, ಇತರ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸುವ ಮತ್ತು ಇಬ್ಬಗೆಯ ನೀತಿ" ಗಳನ್ನು ಸಹ ದೃಢವಾಗಿ ವಿರೋಧಿಸುತ್ತದೆ, ಎಂದು ಮಹಾಧಿವೇಶನ ಅಂಗೀಕರಿಸಿದ ವರದಿ ಹೇಳುತ್ತದೆ. ಬಹುಶಃ ಇವೆಲ್ಲವನ್ನೂ ಮಾಡುವ ದೇಶ ಯು.ಎಸ್ ಒಂದೇ ಮತ್ತು ಹೆಚ್ಚಿನ ದೇಶಗಳು ಇದಕ್ಕೆ ಜಗ್ಗುತ್ತವೆ, ಬಗ್ಗುತ್ತವೆ. ಹಾಗಾಗಿ ಚೀನಾದ ಈ ಧೋರಣೆ 'ಆಕ್ರಾಮಕ'ವಾಗಿ ಕಾಣಬಹುದು. ಆದರೆ ವಾಸ್ತವವಾಗಿ ಇದು ಯು.ಎಸ್ 'ಆಕ್ರಾಮಕತೆ'ಗೆ ದಿಟ್ಟ ಉತ್ತರವೇ ಹೊರತು, ಚೀನಾದ ಆಕ್ರಾಮಕತೆ ಅಲ್ಲ.

ಮಹಾಧಿವೇಶನ ಷಿ ಜಿಂಪಿಂಗ್ ನಾಯಕತ್ವ ಮೊದಲೇ ಮಾಡಿದ ನಿರ್ಣಯಗಳಿಗೆ ಅಸ್ತು ಕೊಡುವ ರಬ್ಬರ್ ಸ್ಟಾಂಪ್ ಅಷ್ಟೇ ಎಂಬುದು ನಿಜವೇ?

ಇದಕ್ಕೆ ಉತ್ತರ ಪಡೆಯಲು ಮಹಾಧಿವೇಶನದ ಪ್ರತಿನಿಧಿಗಳ ಆಯ್ಕೆಯ ಮತ್ತು ಮಹಾಧಿವೇಶನಕ್ಕೆ ಕೇಂದ್ರ ಸಮಿತಿಯ ವರದಿ ತಯಾರಿಯ ಪ್ರಕ್ರಿಯೆಯನ್ನು ನೋಡಬಹುದು.

ಮಹಾಧಿವೇಶನದ ಪ್ರತಿನಿಧಿಗಳ ಆಯ್ಕೆ ನವೆಂಬರ್ 2021ರಿಂದ ಜುಲೈ 2022 ರ ವರೆಗೆ ನಡೆಯಿತು. ಮಹಾಧಿವೇಶನದ ಪ್ರತಿನಿಧಿಗಳ ಚುನಾವಣೆಯ ಅಭ್ಯರ್ಥಿಗಳಿಗೆ – ಸಿದ್ಧಾಂತ, ರಾಜಕೀಯ ನಿಯತ್ತು, ಕೆಲಸದ ಸಾಮರ್ಥ್ಯ, ಜೀವನ ಶೈಲಿ ಮತ್ತು ಕಾರ್ಯ ಸಾಧನೆ ? ಈ ಎಲ್ಲ ಮಾನದಂಡಗಳಲ್ಲಿ ಪರಿಶೀಲನೆ ನಡೆಯುತ್ತದೆ ಅಭ್ಯರ್ಥಿಯ ಆಯ್ಕೆ ಪ್ರಕ್ರಿಯೆಯಲ್ಲಿ ಐದು ಭಾಗಗಳಿದ್ದವು : ಅಭ್ಯರ್ಥಿಯ ಅರ್ಹತೆಗಳ ಪರಿಶೀಲನೆ; ಅಭ್ಯರ್ಥಿಯ ನಾಮಪತ್ರದ ಸಾರ್ವಜನಿಕ ನೋಟೀಸ್; ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹ; ಅರ್ಹತೆ ಆಧಾರದ ಮೇಲೆ ಅಭ್ಯರ್ಥಿಗಳ ಪಟ್ಟಿ ತಯಾರಿ ಮತ್ತು ಆಯಾ ಚುನಾವಣಾ ಘಟಕದಿಂದ ಚುನಾವಣೆ. ಇದು ಬರಿಯ ಚಾರಿಗೆ ಬರದ ಪ್ರಕ್ರಿಯೆಯಲ್ಲ. ಈ ಪ್ರಕ್ರಿಯೆಯನ್ನು ಕಟ್ಟುನಿಟ್ಟಿನಲ್ಲಿ ಜಾರಿ ಮಾಡಿ ಶೇ.15ರಷ್ಟು ಅಭ್ಯರ್ಥಿಗಳನ್ನು ಪಟ್ಟಿಯಿಂದ ತೆಗೆಯಲಾಯಿತು. ಇದು ಮಾತ್ರವಲ್ಲ, ಕೇಂದ್ರ ಸಮಿತಿಯ ಸದಸ್ಯರು ಸಹ ಈ ಪ್ರಕ್ರಿಯೆ ಮೂಲಕ ಪ್ರತಿನಿಧಿಯಾಗಿ ಚುನಾಯಿತರಾಗಬೇಕು. ಷಿ ಜಿಂಪಿಂಗ್ ಸಹ ಗುವಾಂಗ್ಸಿ ಜುವಾಂಗ್ ಸ್ವಾಯತ್ತ ಪ್ರದೇಶದಿಂದ ಚುನಾಯಿತರಾದರು. ಇದು ಇತರ ಪಾಲಿಟ್ ಬ್ಯುರೊ, ಕೇಂದ್ರ ಸಮಿತಿಯ ಸದಸ್ಯರಿಗೂ ಅನ್ವಯವಾಗುತ್ತದೆ. ಇದು ಪ್ರತಿನಿಧಿಗಳ ಆಯ್ಕೆಯ ಮತ್ತು ಆಳುವ ಪಕ್ಷದ ಅತ್ಯಂತ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲವೇ?

ಇದನ್ನು 'ರಬ್ಬರ್ ಸ್ಟಾಂಪ್ ಎನ್ನಲಾದೀತೆ?

ಒಟ್ಟು 2296 ಪ್ರತಿನಿಧಿಗಳಲ್ಲಿ 771 (ಶೇ.33.6) ಕ್ಷೇತ್ರಕಾರ್ಯದಲ್ಲಿ ನೇರವಾಗಿ ನಿರತರಾಗಿರುವವರು. ಶೇ. 27 (19ನೆಯ ಅಧಿವೇಶನದಿಂದ ಶೇ. 2.8ರಷ್ಟು ಹೆಚ್ಚು) ಮಹಿಳಾ ಪ್ರತಿನಿಧಿಗಳು. 264 ಅಲ್ಪಸಂಖ್ಯಾತ ಬುಡಕಟ್ಟು ಪ್ರತಿನಿಧಿಗಳು. ಪ್ರತಿನಿಧಿಗಳ ಸರಾಸರಿ ವಯಸ್ಸು 52.2, ಶೇ.60 55ಕ್ಕೆ ಕಡಿಮ ವಯಸ್ಸಿನವರು. ಶೇ.97 ಪ್ರತಿನಿಧಿಗಳು 1978ರ ನಂತರ ಪಕ್ಷ ಸೇರಿದವರು.

ಇನ್ನು ಮಹಾಧಿವೇಶನಕ್ಕೆ ಕೇಂದ್ರ ಸಮಿತಿಯ ವರದಿ ತಯಾರಿಯ ಪ್ರಕ್ರಿಯೆಯನ್ನು ನೋಡೋಣ. ವರದಿ ತಯಾರಿಗೆ ಮಾಹಿತಿ, ಅಂಶಗಳನ್ನು ಸಂಗ್ರಹಿಸುವ ಪ್ರಕ್ರಿಯೆ ಜನವರಿ 2022ರಲ್ಲಿ ಆರಂಭವಾಯಿತು. ಕೇಂದ್ರ ಸಮಿತಿಯ ಅಡಿ ಕೆಲಸ ಮಾಡುವ 54 ಸಂಸ್ಥೆಗಳು 26 ಪ್ರಮುಖ ಕಾರ್ಯಭಾರಗಳ ಕುರಿತು ವ್ಯಾಪಕ ಸಂಶೋಧನೆ ನಡೆಸಿ 80 ಸಂಶೋಧನಾ ವರದಿಗಳನ್ನು ತಯಾರಿಸಿದವು. ಇದರ ಆಧಾರದ ಮೇಲೆ ಕೇಂದ್ರ ಸಮಿತಿ ಕರಡು ವರದಿ ತಯಾರಿಸಿತು. ಇದನ್ನು ಪ್ರಕಟಿಸಿ ಅಭಿಪ್ರಾಯ, ಸಲಹೆ–ಸೂಚನೆಗಳನ್ನು ಕೇಳಲಾಯಿತು. ಮೊದಲ ಬಾರಿಗೆ ಆನ್–ಲೈನ್ ಮೂಲಕ ಅಭಿಪ್ರಾಯಗಳನ್ನು ಕೇಳಲಾಯಿತು. ಸಾರ್ವಜನಿಕರಿಂದ 85.4 ಲಕ್ಷ ಅಭಿಪ್ರಾಯಗಳು ಬಂದವು. ಎಪ್ರಿಲ್–ಮೇ ತಿಂಗಳಲ್ಲಿ ಪಕ್ಷದ ಎಲ್ಲ ಹಂತದ ಘಟಕಗಳಲ್ಲಿ ಕರಡು ವರದಿ ಬಗ್ಗೆ ಚರ್ಚೆ ನಡೆದು 4700ಕ್ಕೂ ಹೆಚ್ಚು ಅಭಿಪ್ರಾಯಗಳನ್ನು ಕಳಿಸಲಾಯಿತು. ಅಕ್ಟೋಬರ್ ನಲ್ಲಿ ಕೇಂದ್ರ ಸಮಿತಿ ಸಭೆ ಸೇರಿ ಬಂದ ಎಲ್ಲ ಅಭಿಪ್ರಾಯಗಳನ್ನು ಪರಿಶೀಲಿಸಿ ವರದಿಯನ್ನು ಅಂತಿಮಗೊಳಿಸಿತು. ಹೀಗೆ ಪಕ್ಷದ ಎಲ್ಲ ಹಂತದ ಮತ್ತು ಸಮಾಜದ ವಿವಿಧ ವಿಭಾಗಗಳ ಸದಸ್ಯರ ಅಭಿಪ್ರಾಯ, ಸಲಹೆ–ಸೂಚನೆಗಳನ್ನು ಕರಡು ವರದಿಯಲ್ಲಿ ಒಳಗೊಳ್ಳಲಾಯಿತು. ದೇಶದ ಅಭಿವೃದ್ಧಿ ಪಥವನ್ನು ನಿರ್ಧರಿಸುವ ಆಳುವ ಪಕ್ಷದ ಮಹಾಧಿವೇಶನದ ವರದಿಯನ್ನು ಇಷ್ಟು ಪ್ರಜಾಸತ್ತಾತ್ಮಕವಾಗಿ ತಯಾರಿಸುವ (ಕ್ಯೂಬಾ, ವಿಯೆಟ್ನಾಂ ಇತ್ಯಾದಿ ಸಮಾಜವಾದಿ ದೇಶಗಳನ್ನು ಬಿಟ್ಟು) ಇನ್ನೊಂದು ದೇಶದ ಉದಾಹರಣೆ ಇದೆಯೇ?

'ಪ್ರಜಾಸತ್ತಾತ್ಮಕ'ಯೆಂದು ಕರೆದುಕೊಳ್ಳುವ ಪಾಶ್ಚಿಮಾತ್ಯ ದೇಶಗಳಲ್ಲಿ ಆಳುವ ಪಕ್ಷ ದೇಶಧ ಭವಿಷ್ಯದ ಅಭಿವೃದ್ಧಿ ಪಥದ ಯೋಜನೆಯ ಕುರಿತು ಜನತೆಯ ಅಭಿಪ್ರಾಯ ಕೇಳುವುದು ದೂರವುಳಿಯಿತು, ಮಾಹಿತಿಯನ್ನಾದರೂ ಕೊಡುತ್ತವೆಯೇ? ಆದರೂ ಪಾಶ್ಚಿಮಾತ್ಯ ಮತ್ತು ಅವು ಹೇಳಿದ್ದನ್ನೇ ಕಣ್ಣುಮುಚ್ಚಿ ಮರಪ್ರಸಾರ ಮಾಡುವ ದೇಶೀಯ ಮಾಧ್ಯಮಗಳು ಸಮಾಜವಾದಿ ದೇಶಗಳನ್ನು 'ಸರ್ವಾಧಿಕಾರಿ' ಎನ್ನುತ್ತವೆ. ಚೀನಾವನ್ನು ಏಕವ್ಯಕ್ತಿ ಆಳ್ವಿಕೆ ಎನ್ನುತ್ತವೆ. ಪಕ್ಷ, ಅದರ ಮಹಾಧಿವೇಶನ ಒಬ್ಬ ವ್ಯಕ್ತಿಯ 'ರಬ್ಬರ್ ಸ್ಟಾಂಪ್' ಎನ್ನುತ್ತವೆ.

ಇದನ್ನು ಫೇಕ್ ನ್ಯೂಸ್ ಬಿಟ್ಟು ಬೇರೆ ಯಾವುದಾದರೂ ಹೆಸರಿಂದ ಕರೆಯಬಹುದೇ?

ಷಿ ಜಿಂಪಿಂಗ್ ಮೂರನೆಯ ಅವಧಿಗೆ ಪ್ರಧಾನ ಕಾರ್ಯದರ್ಶಿಯಾಗಿ ಅವರ ಪ್ರಾಬಲ್ಯ ಅಗಾಧವಾಗಿ ಹೆಚ್ಚಾಗಿದೆ. ಅವರು ಏಕವ್ಯಕ್ತಿ ಸರ್ವಾಧಿಕಾರಿಯಾಗಿ ಹೊಮ್ಮುತ್ತಿದ್ದಾರೆ. ಷಿ ಜಿಂಪಿಂಗ್ ತಮ್ಮ ವಿರೋಧಿಗಳನ್ನು "ಭ್ರಷ್ಟಾಚಾರ ವಿರುದ್ಧ ಕ್ರಮ'ಗಳ ನೆಪದಲ್ಲಿ ಹಣಿದು ಇದನ್ನು ಸಾಧಿಸಿದ್ದಾರೆ ಎಂಬ ವರದಿಗಳು ನಿಜವೇ?

ಷಿ ಜಿಂಪಿಂಗ್ ಮೂರನೆಯ ಅವಧಿಗೆ ಪ್ರಧಾನ ಕಾರ್ಯದರ್ಶಿಯಾಗಿರುವುದು ನಿಜ. ಅದರ ಪರಿಣಾಮವಾಗಿ ಮೂರನೆಯ ಅವಧಿಗೆ ದೇಶದ ಅಧ್ಯಕ್ಷರಾಗಲಿರುವುದೂ ನಿಜ. ಹಿಂದೆ ಎರಡು ಅವಧಿಗಳ ಮಿತಿ ಇದ್ದಿದ್ದನ್ನು ಪಕ್ಷದ ಸಂವಿಧಾನದಲ್ಲಿ ತಿದ್ದುಪಡಿ ಮಾಡಿದ್ದರಿಂದ ಇದು ಸಾಧ್ಯವಾಯಿತು ಎಂಬುದೂ ನಿಜ. ಆದರೆ ಮೂರನೆಯ ಅವಧಿಗೆ ಅಧಿಕಾರ ವಹಿಸಿಕೊಳ್ಳುವುದೇ 'ಏಕವ್ಯಕ್ತಿ ಸರ್ವಾಧಿಕಾರ' ಎನ್ನಲಾದೀತೇ? ಯು.ಎಸ್ ಬಿಟ್ಟರೆ, ಭಾರತ, ಯುರೋಪ್ ಸೇರಿದಂತೆ ಹೆಚ್ಚಿನ ಪ್ರಜಾಪ್ರಭುತ್ವ ದೇಶಗಳಲ್ಲಿ ಅತ್ಯುನ್ನತ ಚುನಾಯಿತ ಪದವಿಗೆ ಎರಡು ಅವಧಿಗಳ ಮಿತಿಯಿಲ್ಲ. ಅವೆಲ್ಲ ಏಕವ್ಯಕ್ತಿ ಸರ್ವಾಧಿಕಾರಗಳಾಗಿವೆಯೆ? ಪಾಕಿಸ್ತಾನದಲ್ಲಿದ್ದಂತೆ ಒಂದೇ ಅವಧಿಯೊಳಗೆ 'ಏಕವ್ಯಕ್ತಿ ಸರ್ವಾಧಿಕಾರ' ಸ್ಥಾಪಿಸಿದ ಉದಾಹರಣೆಗಳಿಲ್ಲವೇ? ಭಾರತದಲ್ಲಿ ನೆಹರೂ ಮೂರು ಅವಧಿಗಳಲ್ಲಿ ಪ್ರಧಾನಿಯಾಗಿದ್ದರು. ಅವರದ್ದು 'ಏಕವ್ಯಕ್ತಿ ಸರ್ವಾಧಿಕಾರ' ವಾಗಿತ್ತೇ? ಲುಲಾ ಮೂರನೆಯ ಬಾರಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಬ್ರೆಜಿಲ್ ನಲ್ಲಿ 'ಏಕವ್ಯಕ್ತಿ ಸರ್ವಾಧಿಕಾರ'ದ ಅಪಾಯ ಇದೆಯೇ? ಮೋದಿ ಮೂರನೆಯ ಅವಧಿಗೆ ಪ್ರಧಾನಿಯಾದರೆ, ಅದು ಒಂದೇ ಕಾರಣಕ್ಕೆ ಅವರದ್ದು 'ಏಕವ್ಯಕ್ತಿ ಸರ್ವಾಧಿಕಾರ' ಎನ್ನಬಹುದೇ? ಒಬ್ಬ ನಾಯಕನ ಸಾಮರ್ಥ್ಯ, ಸಾಧನೆಗಳ ಆಧಾರದ ಮೇಲೆ ಪಕ್ಷದ, ದೇಶದ ಮುಖ್ಯಸ್ಥನಾಗಿ ಆಯ್ಕೆ ಮಾಡುವುದು, ನಿಗದಿತ ಅವಧಿಗಳ ಮಿತಿಯನ್ನು ಅಗತ್ಯವೆನಿಸಿದರೆ ಹೇರುವುದು ಅಥವಾ ಹೇರದಿರುವುದು, ಆಯಾ ಪಕ್ಷದ ಸದಸ್ಯರ, ದೇಶದ ಜನತೆಯ ಸಾರ್ವಭೌಮ ಆಯ್ಕೆಯಲ್ಲವೇ?

ಅಷ್ಟಕ್ಕೂ ಕಳೆದ ಎರಡು ಅವಧಿಗಳಲ್ಲಿ ಚೀನಾ ಅಗಾಧ ಪ್ರಗತಿ ಸಾಧಿಸಿರುವುದನ್ನು ಯಾರೂ ನಿರಾಕರಿಸಲು ಸಾಧ್ಯವಿಲ್ಲ. ಷಿ ಜಿಂಪಿಂಗ್ ಅವರ ನಾಯಕತ್ವದ ಹತ್ತು ವರ್ಷಗಳಲ್ಲಿ ಚೀನಾದ ಜಿ.ಡಿ.ಪಿ 54 ಲಕ್ಷ ಕೋಟಿ ಯೂವಾನ್ ನಿಂದ 114 ಲಕ್ಷ ಕೋಟಿ ಯೂವಾನ್ ಗೆ ಏರಿದೆ ಅಂದರೆ ದುಪ್ಪಟ್ಟು ಆಗಿದೆ. ಚೀನಾದ ತಲಾ ಜಿಡಿಪಿ ಸಹ 39.8 ಸಾವಿರ ಯೂವಾನ್ ನಿಂದ 81 ಸಾವಿರ ಯೂವಾನ್ ಗೆ ಏರಿದೆ ಅಂದರೆ ದುಪ್ಪಟ್ಟು ಆಗಿದೆ. ಈ ಅವಧಿಯಲ್ಲೇ ಚೀನಾದ 140 ಕೋಟಿ ಜನತೆಗೆ ಆಹಾರ ಮತ್ತು ಇಂಧನ ಭದ್ರತೆ ಒದಗಿಸಲಾಗಿದೆ. ಜಗತ್ತಿನಲ್ಲೇ ಆಹಾರಧಾನ್ಯ ಮತ್ತು ಕೈಗಾರಿಕಾ ಉತ್ಪಾದನೆ ಯಲ್ಲಿ ಚೀನಾ ಮೊದಲ ಸ್ಥಾನ ಪಡೆದಿದೆ. ಇದೇ ಅವಧಿಯಲ್ಲಿ ಚೀನಾ ಜಗತ್ತಿನ ಅತಿ ಉದ್ದವಾದ ರೈಲು ಮತ್ತು ಹೆದ್ದಾರಿ ಜಾಲ ಹೊಂದಿರುವ ಮತ್ತು ಅತಿ ಹೆಚ್ಚು ಸರಕುಗಳ ವ್ಯಾಪಾರ ಇರುವ ದೇಶವೆಂಬ ಹೆಗ್ಗಳಿಕೆ ಸಾಧಿಸಿದೆ. 140

ಪುಟ 15 ಕ್ಕೆ

ಬ್ರೆಜಿಲ್ ಚುನಾವಣೆಯಲ್ಲಿ ಲೂಲಾ ವಿಜಯದ ಮಹತ್ವ



ಬೋಲ್ಸನಾರೋ ವೈಚಾರಿಕತೆ-ವಿರೋಧಿ ಮತ್ತು ವಿಜ್ಞಾನ-ವಿರೋಧಿ ಮಾತ್ರವೇ ಅಲ್ಲ, ಹವಾಮಾನ-ಬದಲಾವಣೆಯನ್ನು ತಿರಸ್ಕರಿಸುತ್ತಿರುವವರೂ ಆಗಿದ್ದಾರೆ. ಈ ನಿಲುವುಗಳು ಹಾಗೂ ಕಾರ್ಪೊರೇಟ್-ಪರ ಧೋರಣೆಗಳಿಂದಾಗಿ ಪರಿಸರ ರಕ್ಷಣೆ ನಿಯಮಗಳು ದುರ್ಬಲಗೊಂಡು ಅಂತಿಮವಾಗಿ ಅಮೆಜಾನ್ ಮಳೆ-ಕಾಡುಗಳು ದೊಡ್ಡ ಪ್ರಮಾಣದಲ್ಲಿ ಬೆಂಕಿಗೆ ಆಹುತಿಯಾದವು. ಪರಿಸರವಾದಿಗಳು ಮತ್ತು ಹಸಿರು ಕಾರ್ಯಕರ್ತರು ದೊಡ್ಡ ಪ್ರಮಾಣದಲ್ಲಿ ವಿರೋಧಿಸಿದರೂ ಅಮೆಜಾನ್ ಅರಣ್ಯದ ದೊಡ್ಡ ಭಾಗಗಳನ್ನು ತೆರವು ಮಾಡಲಾಯಿತು. ಈ ಭೂಮಿಯನ್ನು ಅಗ್ರಿ-ಕಾರ್ಪೊರೇಶನ್‌ಗಳು ಮತ್ತು ದೊಡ್ಡ ಭೂಮಾಲಿಕರು ಕೃಷಿ ಮಾಡಲು ಮುಕ್ತಗೊಳಿಸಲಾಯಿತು.

ಪ್ರಕಾಶ್ ಕಾರತ್

ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆಯಲ್ಲಿ ಲೂಯಿಸ್ ಇನಾಷಿಯೋ 'ಲೂಲಾ' ದ ಸಿಲ್ವ ಜಯಶಾಲಿಯಾಗಿರುವುದನ್ನು ಇಡೀ ಜಗತ್ತು ನಿಟ್ಟುಸಿರಿನೊಂದಿಗೆ ಸ್ವಾಗತಿಸಿದೆ. ಅತಿ-ಬಲಪಂಥೀಯ ಹಾಲಿ ಅಧ್ಯಕ್ಷ ಜೈರ್ ಬೋಲ್ಸನಾರೋರನ್ನು ಸೋಲಿಸಿ ಬ್ರೆಜಿಲ್ ಅಧ್ಯಕ್ಷರಾಗಿ ಲೂಲಾ ಆಯ್ಕೆಯಾಗಿರುವುದು ಬ್ರೆಜಿಲ್ ಮತ್ತು ಲ್ಯಾಟಿನ್ ಅಮೆರಿಕದ ಭವಿಷ್ಯದ ಮೇಲೆ ಪರಿಣಾಮ ಬೀರಲಿದೆ.

2022 ಅಕ್ಟೋಬರ್ 30 ರಂದು ನಡೆದ ಚುನಾವಣೆಯಲ್ಲಿ ಕಾರ್ಮಿಕರ ಪಕ್ಷದ (ವರ್ಕರ್ಸ್ ಪಾರ್ಟಿ-ಪಿಟಿ) ಅಭ್ಯರ್ಥಿಯಾಗಿದ್ದ ಲೂಲಾ 50.9% ಮತಗಳನ್ನು ಗೆದ್ದಿದ್ದಾರೆ. ಬೋಲ್ಸನಾರೋ 49.1 ಶೇಕಡ ಮತಗಳನ್ನು ಪಡೆದಿದ್ದಾರೆ. ಅವರ ವಿಜಯದ ಅಂತರ 21,25,334 ಮತಗಳಾಗಿವೆ. 1980ರಲ್ಲಿ ಪ್ರಜಾಪ್ರಭುತ್ವ ಪುನರ್‌ಸ್ಥಾಪನೆಯಾದ ನಂತರ ಇಲ್ಲಿವರೆಗೆ ನಡೆದ ಅಧ್ಯಕ್ಷೀಯ ಚುನಾವಣೆಗಳಲ್ಲೇ ಜಿದ್ದಾಜಿದ್ದಿನ ಹೋರಾಟ ಇದಾಗಿತ್ತು. ಹಾಲಿ ಅಧ್ಯಕ್ಷರೊಬ್ಬರು ಸೋತಿದ್ದು ಕೂಡ ಇದೇ ಮೊದಲ ಸಲವಾಗಿದೆ.

ಲೂಲಾರಿಗೆ ಸುಲಭ ಗೆಲುವು ಸಿಗಲಿದೆ ಎಂದು ಅನೇಕ ಚುನಾವಣಾ ವೀಕ್ಷಕರು ಚುನಾವಣೆಯ ಮೊದಲ ಸುತ್ತಿನಲ್ಲೇ ಹೇಳಿದ್ದರು. ಬೋಲ್ಸನಾರೋಗಿಂತ ಲೂಲಾ ಎರಡಂಕಿ ಪಾಯಿಂಟ್‌ನಿಂದ ಮುಂದಿದ್ದಾರೆಂದು ಹಲವು ಸಮೀಕ್ಷೆಗಳು ಸತತವಾಗಿ ಹೇಳಿದ್ದವು. ಆದರೆ ಅಕ್ಟೋಬರ್ ಎರಡರ ಮೊದಲ ಸುತ್ತಿನ ಚುನಾವಣೆಯಲ್ಲಿ ಈ ಎಲ್ಲ ಭವಿಷ್ಯಗಳು ಹುಸಿಯಾಗಿವೆ. ಲೂಲಾ ಸಿಂಧುವಾದ 48.43% ಮತಗಳನ್ನು ಪಡೆದರು ಹಾಗೂ ಬೋಲ್ಸನಾರೋ 43.20% ಮತಗಳನ್ನು ಗಳಿಸಿದ್ದರು. ಅಗತ್ಯವಾದ ಶೇಕಡ 50 ಮತಗಳನ್ನು ಪಡೆಯಲು ಉಭಯ ಹುರಿಯಾಳುಗಳು ವಿಫಲರಾದ್ದರಿಂದ ಚುನಾವಣೆ ನಡೆಯುವುದು ಅಗತ್ಯವಾಯಿತು.

ಲೂಲಾ 2003 ಮತ್ತು 2010ರ ನಡುವೆ ಎರಡು ಬಾರಿ ಬ್ರೆಜಿಲ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಬ್ರೆಜಿಲ್ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಇದು ಮೂರನೇ ಸಲವಾಗಿದೆ. ಈ ಅವಧಿಯಲ್ಲಿ ಬ್ರೆಜಿಲ್ ತುಂಬಾ ಬದಲಾಗಿದ್ದು ಲೂಲಾರ ಮೂರನೇ ಅವಧಿ ತೀರಾ ಸವಾಲಿನಿಂದ ಕೂಡಿದ್ದಾಗಿತ್ತು. ಅವರು ಮೊದಲ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾಗ ಸರಕುಗಳ ಮಾರುಕಟ್ಟೆಯಲ್ಲಿ ಹುಮ್ಮಸ್ಸಿತ್ತು. ಅದನ್ನು ಬಳಸಿಕೊಂಡು ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪಿ.ಟಿ. ಸರಕಾರಕ್ಕೆ ಸಾಧ್ಯವಾಗಿತ್ತು. ಅದರಿಂದ ಮಿಲಿಯಗಟ್ಟಲೆ ಜನರನ್ನು ಬಡತನದಿಂದ ಮೇಲೆತ್ತಲು ಸಾಧ್ಯವಿತ್ತು. ಲೂಲಾ ಮತ್ತು ಅವರ ಉತ್ತರಾಧಿಕಾರಿ, ಪಿಟಿ ಪಕ್ಷದ ದಿಲ್ಮಾ ರೌಸೆಫ್ ಅನುಸರಿಸಿದ ನೀತಿಗಳಿಂದಾಗಿ 2014ರ ಅಂತ್ಯದ ವೇಳೆಗೆ ಬ್ರೆಜಿಲ್ ಅನ್ನು ಹಸಿವು ಮುಕ್ತ ದೇಶ ಎಂದು ಘೋಷಿಸಲು ಸಾಧ್ಯವಿತ್ತು. ಆದರೆ ಈಗ ಆ ಪರಿಸ್ಥಿತಿ ಉಲ್ಟಾಪಲ್ಟಾ ಆಗಿದೆ. ಬ್ರೆಜಿಲ್ ಆಹಾರ ಮತ್ತು ಪೌಷ್ಟಿಕತೆ ಸಾರ್ವಭೌಮತೆ ಮತ್ತು ಭದ್ರತೆ ಸಂಶೋಧನಾ ನೆಟ್‌ವರ್ಕ್ ಪ್ರಕಾರ, ಈಗ 33.1 ಮಿಲಿಯ ಬ್ರೆಜಿಲಿಯನ್ನರು ಹಸಿವಿನಿಂದ ಬಳಲುತ್ತಿದ್ದಾರೆ. ಇದು ಕಳೆದ ವರ್ಷಕ್ಕಿಂತ ಬಹುತೇಕ ದುಪ್ಪಟ್ಟಾಗಿದೆ.

7 ಲಕ್ಷ ಸಾವು:

ಕೋವಿಡ್-19 ಸಾಂಕ್ರಾಮಿಕದ ಅವಧಿಯಲ್ಲಿ ಬೋಲ್ಸನಾರೋ ಸರಕಾರದ ದುರಾಡಳಿತದಿಂದಾಗಿ ಸುಮಾರು 7 ಲಕ್ಷ ಬ್ರೆಜಿಲಿಯನ್ನರು ಮೃತಪಟ್ಟಿದ್ದಾರೆ. ಕರೊನಾ ವೈರಸ್ ಇರುವುದನ್ನು ಹಾಗೂ ಹರಡುತ್ತಿರುವುದನ್ನು ಬೋಲ್ಸನಾರೋ ನಿರಾಕರಿಸುತ್ತಲೇ ಬಂದರು. ಅದರ ಫಲವಾಗಿ ಆರೋಗ್ಯ ಬಿಕ್ಕಟ್ಟನ್ನು ನಿಭಾಯಿಸಲು ದೇಶ ಸಜ್ಜಾಗಲಿಲ್ಲ. ವಿಜ್ಞಾನದ ನಿರಾಕರಣೆ ಮತ್ತು ಸರಕಾರ ಅನುಸರಿಸಿದ ನವ-ಉದಾರವಾದಿ ನೀತಿಗಳಿಂದಾಗಿ ಆರೋಗ್ಯ ವೆಚ್ಚದಲ್ಲಿ ಕಡಿತವಾಗಿದ್ದರಿಂದ ಸಾಂಕ್ರಾಮಿಕದಿಂದ ಉದ್ಭವಿಸಿದ ಬಿಕ್ಕಟ್ಟು ಉಲ್ಬಣಗೊಂಡಿತ್ತು. ಲಸಿಕೆ ಉತ್ಪಾದನೆ ಮತ್ತು ಸರಬರಾಜಿನಲ್ಲಿ ಭ್ರಷ್ಟಾಚಾರದ ತಾಂಡವ ನೃತ್ಯವು ಸರಕಾರದ ಅಮಾನವೀಯ ಸ್ವರೂಪವನ್ನು ಬಯಲುಮಾಡಿದೆ.

ಬೋಲ್ಸನಾರೋ ವೈಚಾರಿಕತೆ-ವಿರೋಧಿ ಮತ್ತು ವಿಜ್ಞಾನ-ವಿರೋಧಿ ಮಾತ್ರವೇ ಅಲ್ಲ, ಹವಾಮಾನ-ಬದಲಾವಣೆಯನ್ನು ತಿರಸ್ಕರಿಸುತ್ತಿರುವವರೂ ಆಗಿದ್ದಾರೆ. ಈ ನಿಲುವುಗಳು ಹಾಗೂ ಕಾರ್ಪೊರೇಟ್-ಪರ ಧೋರಣೆಗಳಿಂದಾಗಿ ಪರಿಸರ ರಕ್ಷಣೆ ನಿಯಮಗಳು ದುರ್ಬಲಗೊಂಡು ಅಂತಿಮವಾಗಿ ಅಮೆಜಾನ್ ಮಳೆ-ಕಾಡುಗಳು ದೊಡ್ಡ ಪ್ರಮಾಣದಲ್ಲಿ ಬೆಂಕಿಗೆ ಆಹುತಿಯಾದವು. ಪರಿಸರವಾದಿಗಳು ಮತ್ತು ಹಸಿರು ಕಾರ್ಯಕರ್ತರು ದೊಡ್ಡ ಪ್ರಮಾಣದಲ್ಲಿ ವಿರೋಧಿಸಿದರೂ ಅಮೆಜಾನ್ ಅರಣ್ಯದ ದೊಡ್ಡ ಭಾಗಗಳನ್ನು ತೆರವು ಮಾಡಲಾಯಿತು. ಈ ಭೂಮಿಯನ್ನು ಅಗ್ರಿ-ಕಾರ್ಪೊರೇಶನ್‌ಗಳು ಮತ್ತು ದೊಡ್ಡ ಭೂಮಾಲಿಕರು ಕೃಷಿ ಮಾಡಲು ಮುಕ್ತಗೊಳಿಸಲಾಯಿತು.



ರಾಜಕೀಯ ರಂಗದಲ್ಲಿ ಬೋಲ್ಸನಾರೋ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ತೀವ್ರ ದಾಳಿ ನಡೆಸಿದರು. ಅವರು ಬ್ರೆಜಿಲ್‌ನ ಹಿಂದಿನ ಮಿಲಿಟರಿ ಮತ್ತು ಸರ್ವಾಧಿಕಾರಿ ಆಡಳಿತಗಳಿಗೆ ಬಹಿರಂಗವಾಗಿಯೇ ಬೆಂಬಲ ಸೂಚಿಸಿದ್ದರು. ಫ್ಯಾಸಿಸ್ಟ್-ಪರ ಧೋರಣೆಯನ್ನು ನಾಚಿಕೆಯಿಲ್ಲದೆ ಪ್ರದರ್ಶಿಸಿದ್ದರು, ಟ್ರೇಡ್ ಯೂನಿಯನ್‌ಗಳು, ದೇಶೀಯ ಜನರು, ಮಹಿಳೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರ ಮೇಲೆ ಎಗ್ಗಿಲ್ಲದೆ ದಾಳಿ ನಡೆಸಿದ್ದರು. ತನ್ನ ಕಮ್ಯೂನಿಸ್ಟ್-ವಿರೋಧಿ ಹಾಗೂ ಎಡ-ವಿರೋಧಿ ಹಿನ್ನೆಲೆಯನ್ನು ಸಂಭ್ರಮಿಸಿದ್ದರು.

ವಿಜ್ಞಾನ-ವಿರೋಧಿ, ವೈಚಾರಿಕತೆ-ವಿರೋಧಿ, ಅಲ್ಪಸಂಖ್ಯಾತ-ವಿರೋಧಿ ಹಾಗೂ ಕಮ್ಯೂನಿಸ್ಟ್-ವಿರೋಧಿ ಧೋರಣೆಗಳಿಂದಾಗಿ ಇವಾಂಜೆಲಿಕಲ್ ಕ್ರೈಸ್ತರ ಬೆಂಬಲ ಪಡೆದರು. ಇದು ಅವರ ಅತಿ ಮಹತ್ವದ ಬೆಂಬಲದ ನೆಲೆಯಾಗಿತ್ತು.

ಬ್ರೆಜಿಲ್ ರಾಜಕೀಯದಲ್ಲಿ ಮತ್ತು ಸಮಾಜದಲ್ಲಿ ಪ್ರಬಲ ಸಂಪ್ರದಾಯವಾದಿ ಶಕ್ತಿಯಾದ ಇವಾಂಜೆಲಿಕಲ್ ಪಾದ್ರಿಗಳು, ಬೋಲ್ಸನಾರೋ ಹಾಗೂ ಅವರ ನೈತಿಕವಾದಿ ಧೋರಣೆಗಳನ್ನು ಬಲವಾಗಿ ಬೆಂಬಲಿಸಿದರು. ಈ ಧಾರ್ಮಿಕ ಬಲಪಂಥೀಯ ವಿಭಾಗದವರು ಎಡಪಂಥೀಯರ ವಿರುದ್ಧ ಬೋಧನೆ ಮಾಡಿದರು ಹಾಗೂ 'ಲೂಲಾ ಚರ್ಚುಗಳನ್ನು ನಾಶ ಮಾಡುತ್ತಾರೆ' ಎಂದು ಅಪಪ್ರಚಾರ ಮಾಡಿದರು. ಈ ರೀತಿಯಾಗಿ, ದೇಶದಾದ್ಯಂತ ಬಲಪಂಥೀಯ ಸಿದ್ಧಾಂತಿಗಳನ್ನು ಅಣಿನೆರೆಯಿಸಲು ಹಾಗೂ ಸಾಮಾಜಿಕ ವಿಭಜನೆಗಳನ್ನು ಆಳಗೊಳಿಸಲು ಬೋಲ್ಸನಾರೋ ಯಶಸ್ವಿಯಾದರು.

ಇವಾಂಜೆಲಿಕಲ್ ಕ್ರೈಸ್ತರ ಬೆಂಬಲ ಮಾತ್ರವಲ್ಲದೆ ನವ-ಉದಾರವಾದಿಗಳು, ಕಟ್ಟಾ ಮುಕ್ತ-ಮಾರುಕಟ್ಟೆ ಆರ್ಥಿಕ ನೀತಿಗಳ ಆರಾಧಕರು, ಮೇಲ್ವರ್ಗ, ವರ್ತಕರು ಮತ್ತು ದೊಡ್ಡ ಬಂಡವಾಳಶಾಹಿಗಳ ವಿಭಾಗಗಳು ಕೂಡ ಅವರ ಬೆಂಬಲಕ್ಕಿದ್ದವು. ಅಗ್ರಿ-ಕಾರ್ಪೊರೇಶನ್‌ಗಳು ಮತ್ತು ದೊಡ್ಡ ಭೂಮಾಲಿಕರು ಕೂಡ ಅವರ ಬೆನ್ನಿಗೆ ನಿಂತರು. ಉಗ್ರ ಬಲಪಂಥೀಯರು ಅತ್ಯಗತ್ಯವಾಗಿ ಬೋಲ್ಸನಾರೋರ ಬೆಂಬಲಕ್ಕೆ ನಿಂತಿದ್ದರು. ಆಳುವ ವರ್ಗಗಳು ಮತ್ತು ಅತಿ ಬಲಪಂಥೀಯ ಶಕ್ತಿಗಳ ಈ ಬೆಂಬಲದ ಕಾರಣ ಮಾಧ್ಯಮದ ಹೆಚ್ಚಿನ ವಿಭಾಗಗಳ ಮೇಲೆ ನಿಯಂತ್ರಣ ಸಾಧಿಸಲು ಅವರಿಗೆ ಸಾಧ್ಯವಾಯಿತು. ಸುಳ್ಳುಗಳು ಮತ್ತು ಸುಳ್ಳು ಸುದ್ದಿಗಳನ್ನು ಹರಡಲು ಅವರು ಸಾಮಾಜಿಕ ಮಾಧ್ಯಮವನ್ನು ಬಳಸಿಕೊಂಡರು.

ಬಡವರ ಬೆಂಬಲ:

ಅದಕ್ಕೆ ತದ್ವಿರುದ್ಧವಾಗಿ, ಲೂಲಾರನ್ನು ಸಮಾಜದ ಬಡ ವರ್ಗದವರು ದೃಢವಾಗಿ ಬೆಂಬಲಿಸಿದರು. ಈ ವಿಭಾಗಗಳಿಂದ ವ್ಯಾಪಕ ಬೆಂಬಲ ಪಡೆಯುತ್ತಿರುವುದರಿಂದ ಬೆದರಿದ ಬೋಲ್ಸನಾರೋ ಬಡ ಜನರ ಸಹಾನುಭೂತಿ ಗಳಿಸಲು ಆಕ್ಸಿಲೋ ಬ್ರಾಸಿಲ್ ಎಂಬ ಕಾರ್ಯಕ್ರಮವನ್ನು ಆರಂಭಿಸಿದ್ದರು. ಈ ಸಾಮಾಜಿಕ ಕಲ್ಯಾಣ ಕಾರ್ಯಕ್ರಮದ ಅಡಿಯಲ್ಲಿ ಕಡಿಮೆ ಆದಾಯದ ನಾಗರಿಕರಿಗೆ ಹಣವನ್ನು ನೇರವಾಗಿ ವರ್ಗಾಯಿಸಲಾಗುತ್ತದೆ.

ಕೋವಿಡ್ ಸಾಂಕ್ರಾಮಿಕತೆ ಕಾಲದಲ್ಲಿ ಸೀಮಿತ-ಅವಧಿಯ ಕಾರ್ಯಕ್ರಮವಾಗಿ ಅದನ್ನು ಆರಂಭಿಸಲಾಗಿತ್ತು. ಜನರ ಸಮಸ್ಯೆಗಳನ್ನು ಬಗೆಹರಿಸಲು ಸರಕಾರ ವಿಫಲವಾಗಿದೆ ಎಂಬ ವ್ಯಾಪಕ ಟೀಕೆಯಿಂದ ರಕ್ಷಣೆ ಪಡೆಯಲು ಅವರು ಈ ತಂತ್ರಕ್ಕೆ ಮೊರೆ ಹೋಗಿದ್ದರು. ಆದರೆ, ಯೋಜನೆಗೆ ವ್ಯಕ್ತವಾದ ಧನಾತ್ಮಕ ಪ್ರತಿಕ್ರಿಯೆಯನ್ನು ಕಂಡು ಹಾಗೂ ಅದು ಲೂಲಾರ ಬೆಂಬಲದ ನೆಲೆಯನ್ನು ಕೊರೆಯುತ್ತಿರುವುದನ್ನು ಪರಿಗಣಿಸಿ ಬೋಲ್ಸನಾರೋ ಈ ಯೋಜನೆಯನ್ನು ಮುಂದುವರಿಸಿದರು.

ಈ ಎಲ್ಲ ಪ್ರಯತ್ನಗಳ ಫಲವಾಗಿ ಅಧ್ಯಕ್ಷೀಯ ಚುನಾವಣೆಯಲ್ಲಿ ಲೂಲಾರಿಗೆ ನಿಕಟ ಸ್ಪರ್ಧೆಯೊಡ್ಡಲು ಬೋಲ್ಸನಾರೋಗೆ ಸಾಧ್ಯವಾಯಿತು. ಇದು, ಮಧ್ಯಪಂಥೀಯ ಪಕ್ಷಗಳೊಂದಿಗೆ ಬಲಪಂಥೀಯ ಶಕ್ತಿಗಳು ಕಾಂಗ್ರೆಸ್‌ನಲ್ಲಿ (ಸಂಸತ್ತು) ಬಹುಮತ ಪಡೆಯಲು, ರಾಜ್ಯಪಾಲರ ಹುದ್ದೆ ಗಳಿಸಲು ಮತ್ತು ಪ್ರಾದೇಶಿಕ ಅಸೆಂಬ್ಲಿಗಳಲ್ಲಿ ಬಹುಮತ ಪಡೆಯಲು ನೆರವಾಯಿತು. ಅಧ್ಯಕ್ಷೀಯ ಚುನಾವಣೆಯ ಮೊದಲ ಹಂತದ ಚುನಾವಣೆಯೊಂದಿಗೇ ಈ ಚುನಾವಣೆಗಳು ಕೂಡ ನಡೆದಿದ್ದವು. ಬೋಲ್ಸನಾರೋ ಬ್ರೆಜಿಲ್‌ನ 27 ರಾಜ್ಯಗಳ ಪೈಕಿ 14ರಲ್ಲಿ ಗೆದ್ದರು. ಬಲಪಂಥೀಯ ಪಕ್ಷಗಳು ಕಾಂಗ್ರೆಸ್‌ನ ಒಟ್ಟು 513 ಸ್ಥಾನಗಳಲ್ಲಿ 249ರಲ್ಲಿ ಗೆದ್ದು ತಮ್ಮ ಪ್ರಾತಿನಿಧ್ಯ ಹೆಚ್ಚಿಸಿಕೊಂಡವು. ಇದು ಅರ್ಧಕ್ಕಿಂತ ಸ್ವಲ್ಪವಷ್ಟೇ ಕಡಿಮೆಯಾಗಿತ್ತು. ಲೂಲಾರ ಪಿ.ಟಿ. ಮತ್ತು ಮಿತ್ರಪಕ್ಷಗಳು 141 ಸ್ಥಾನಗಳನ್ನು ಗೆಲ್ಲಲಷ್ಟೇ ಯಶಸ್ವಿಯಾದವು.

ಬಲಪಂಥೀಯ ಸಂಸದರ ಸಂಖ್ಯೆ ಜಾಸ್ತಿ ಇರುವುದರಿಂದ ತಮ್ಮ ಕಾರ್ಯಸೂಚಿ ಅನುಷ್ಠಾನ ಮಾಡಲು ಲೂಲಾರಿಗೆ ಕಷ್ಟವಾಗಬಹುದು. ಅವರು ತಮ್ಮ ಅಧಿಕಾರಾವಧಿಯಲ್ಲಿ ಮಧ್ಯಪಂಥೀಯರ ಬೆಂಬಲ ಕೋರುವ ಪರಿಸ್ಥಿತಿ ಬರಬಹುದು. ಕೆಲವು ರಾಜಿ ಮತ್ತು ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗಬಹುದು.

ಲೂಲಾ ಗೆಲ್ಲಲು ಈಗಾಗಲೇ ಕೆಲವು ರಾಜಿಗಳನ್ನು ಮಾಡಿದ್ದಾರೆ. ಭಾಷಣಗಳಲ್ಲಿ ಧರ್ಮಗ್ರಂಥಗಳು ಮತ್ತು ದೇವರ ಬಗ್ಗೆ ಉಲ್ಲೇಖಿಸಿ ಇವಾಂಜೆಲಿಕಲ್‌ರನ್ನು ಅನುಸರಿಸಿ ಜನಸಮುದಾಯವನ್ನು ಓಲೈಸಲು ಪ್ರಯತ್ನಿಸಿದ್ದಾರೆ. ಹಿಂದಿನ ವಿರೋಧಿ ಹಾಗೂ ಮಧ್ಯಪಂಥೀಯ ನಾಯಕ ಗೆರಾಲ್ಡೋ ಅಕ್‌ಮಿನ್ ಲೂಲಾರ ಉಪಾಧ್ಯಕ್ಷ ಅಭ್ಯರ್ಥಿಯಾಗಿದ್ದಾರೆ. ಲೂಲಾರ ಮೈತ್ರಿಕೂಟದಲ್ಲಿ ಕಮ್ಯೂನಿಸ್ಟರು, ಸಮಾಜವಾದಿಗಳು ಮತ್ತು ಉದಾರವಾದಿ-ಬೂರ್ಜ್ವಾಗಳು ಇದ್ದಾರೆ. ಅವರೆಲ್ಲರೂ ಪ್ರಜಾಪ್ರಭುತ್ವ ರಕ್ಷಣೆ, ಬಲಪಂಥೀಯ ಬೆಳವಣಿಗೆ ತಡೆ, ಅಮೆಜಾನ್ ಅರಣ್ಯ ರಕ್ಷಣೆ ಮತ್ತು ಪರಿಸರ ರಕ್ಷಣೆಯ ಸಾಮಾನ್ಯ ಗುರಿಯೊಂದಿಗೆ ಒಂದಾಗಿದ್ದಾರೆ.

ಲೂಲಾರ ವಿಜಯವನ್ನು ಬ್ರೆಜಿಲ್‌ನಾದ್ಯಂತ ಬಡಜನರು ಸಂಭ್ರಮಿಸಿದ್ದಾರೆ. ಈ ಜಯವು ಲೂಲಾರೇ ಹೇಳಿದಂತೆ ಪ್ರಜಾಸತ್ತಾತ್ಮಕ ಚಳವಳಿಯ ಜಯವಾಗಿದೆ. ಬಡತನ, ಹಸಿವು, ಕನಿಷ್ಠ ಕೂಲಿ ಏರಿಕೆ ಮತ್ತು ಅರಣ್ಯ ನಾಶದಿಂದ ಅಮೆಜಾನ್ ರಕ್ಷಣೆಯ ವಿಚಾರಗಳಿಗೆ ತುರ್ತಾಗಿ ಸ್ಪಂದಿಸುವುದಾಗಿ ಲೂಲಾ ಭರವಸೆ ನೀಡಿದ್ದಾರೆ. ಲ್ಯಾಟಿನ್ ಅಮೆರಿಕದ ವಿವಿಧ ದೇಶಗಳ ಆಳುವ ಮುಖ್ಯಸ್ಥರು ಹಾಗೂ ವಿಶ್ವದ ನಾಯಕರು ನಿಯೋಜಿತ-ಅಧ್ಯಕ್ಷರನ್ನು ಅಭಿನಂದಿಸಿದ್ದಾರೆ. ಭಾರತ ಕೂಡ ಭಾಗವಾಗಿರುವ ಬ್ರಿಕ್ಸ್ ಮತ್ತು ಲ್ಯಾಟಿನ್ ಅಮೆರಿಕದ ಸೆಲಾಕ್‌ನಂಥ ಬಹುಪಕ್ಷೀಯ ವೇದಿಕೆಗಳಿಗೆ ಒಂದು ಹೊಸ ಆಶಾಭಾವ ಮೂಡಲಿದೆ.

ಈ ಚುನಾವಣೆಯಲ್ಲಿ ಬೋಲ್ಸನಾರೋ ಸೋತರೂ ಅವರು ಗಳಿಸಿದ ಮತದ ಪ್ರಮಾಣ ನೋಡಿದರೆ ಬಲಪಂಥೀಯ ಸಿದ್ಧಾಂತ ಹೇಗೆ ಜನಸಾಮಾನ್ಯರನ್ನು ತಲುಪಿದೆ ಎನ್ನುವುದು ಗೊತ್ತಾಗುತ್ತದೆ. ಲೂಲಾ ಚುನಾವಣೆಯಲ್ಲಿ ನೀಡಿದ್ದ ಎಲ್ಲ ಆಶ್ವಾಸನೆಗಳನ್ನು ಈಡೇರಿಸಲು ಪ್ರಯತ್ನಿಸದಿದ್ದರೆ, ಜನತಾಂತ್ರಿಕ ಹಕ್ಕುಗಳ ಮರುಸ್ಥಾಪನೆ ಮಾಡದಿದ್ದರೆ, ಜನರ ಜೀವನೋಪಾಯ ರಕ್ಷಿಸದಿದ್ದರೆ, ಹಸಿವು ಮತ್ತು ಬಡತನ ನಿರ್ಮೂಲನೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳದಿದ್ದರೆ ಬಲಪಂಥೀಯರು ಮತ್ತೆ ತಲೆಯೆತ್ತುವ ಅಪಾಯವನ್ನು ತಳ್ಳಿಹಾಕಲು ಆಗುವುದಿಲ್ಲ.

ಅನು: ವಿಶ್ವ

ಭೂಸ್ವಾಧೀನತೆಗೆ ಪ್ರತಿರೋಧ





ಕಾಂ.ಅಶೋಕ ಧವಳೆ



ಕಾಂ.ಯು.ಬಸವರಾಜ

ಚನ್ನರಾಯಪಟ್ಟಣ ಭೂ ಹೋರಾಟಕ್ಕೆ ತುಂಬು ಏಳು ತಿಂಗಳು..!

ಪ್ರಭಾ ಎನ್.ಬೆಳವಂಗಲ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿಗೆ ಸೇರಿದ ಚನ್ನರಾಯಪಟ್ಟಣ ಹೋಬಳಿಯ ಹದಿಮೂರು ಹಳ್ಳಿಗಳ 1777 ಎಕರೆ ಭೂಮಿಯ ಮೇಲೆ ಬೊಮ್ಮಾಯಿ ಸರ್ಕಾರದ ವಕ್ರದೃಷ್ಟಿ ಬಿದ್ದಿದೆ. ಬಹಳ ಫಲವತ್ತಾದ ಕೆಂಪು ಮಣ್ಣಿನ ಕೃಷಿ ಭೂಮಿ, ತರಾವರಿ ಹಣ್ಣುಗಳು, ಮನಮೋಹಕ ಪುಷ್ಪಗಳು, ಬಗೆ ಬಗೆಯ ತರಕಾರಿ, ಅತ್ಯಾಧುನಿಕ ವಿಧಾನಗಳಿಂದ ಗಮನ ಸೆಳೆಯುತ್ತಿರುವ ಕೃಷಿ ಟೆಂಟುಗಳು, ಕೋಳಿ ಫಾರಂ, ರೇಷ್ಮೆ ಗೂಡು, ಸನಿಹದಲ್ಲೆ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಸಾಗಾಣಿಕೆಗೆ ಬೇಕಾದ ರಸ್ತೆಗಳು. ಆಡಳಿತದ ಚುಕ್ಕಾಣಿ ಹಿಡಿದಿರುವ ಕಾರ್ಪೊರೇಟ್ ಏಜೆಂಟ್ ಬಿಜೆಪಿ ಸರ್ಕಾರಕ್ಕೆ ಭೂಮಿ ಕಸಿಯಲು ಹೆಚ್ಚುವರಿ ಇನ್ನೇನು ಬೇಕು,?


ಸರ್ಕಾರಿ ಪ್ರಾಯೋಜಿತ ನಾಟಕ ಕಂಪನಿ "ಕೆಐಎಡಿಬಿ" (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ) ಹೆಸರಿನಲ್ಲಿ ಸರ್ಕಾರ ರೈತರಿಗೆ ನೋಟೀಸ್ ಕೊಟ್ಟೇ ಬಿಟ್ಟಿತು. ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ಬೇಕಾಗಿದೆ, ಮಾತುಕತೆಗೆ ಬನ್ನಿ ಬೆಲೆ ನಿಗದಿ ಮಾಡೋಣ. ನೋಟೀಸ್ ಪಡೆದಿದ್ದ ರೈತರೊಳಗೆ ಅಲ್ಲಲ್ಲೆ ಗುಸುಗುಸು. ಅವರ ಭೂಮಿಗೂ ನೋಟೀಸ್ ಬಂತಂತೆ ಇವರ ಭೂಮಿಯೂ ಬೇಕಂತೆ, ಚೀಮಾಚನಹಳ್ಳಿಗೂ ಬಕಾಸುರರು ಹೊಕ್ಕರಂತೆ, ಮಟ್ಟಬರ್ಲನ್ನೂ ಬಿಟ್ಟಿಲ್ಲವಂತೆ, ನಲ್ಲಪನಹಳ್ಳಿಯಲ್ಲಿ ನಂಜಪ್ಪಣ್ಣನ ಜಮೀನು ಪೂರ್ತಿ ಹೋಗುವುದಂತೆ, ಚನ್ನರಾಯಪಟ್ಟಣದವರು ಭೂಮಿ ಕೊಡುವರಂತೊ! ಮುಂತಾಗಿ ಜನ ಟೀ ಅಂಗಡಿಗಳು ನಿಂತಲ್ಲಿ ಕೂತಲ್ಲಿ ಮಾತಿಗೆ ಶುರುವಿಟ್ಟರು.


2021ರ ಜನವರಿ ತಿಂಗಳ ಮೊದಲ ವಾರ ನೋಟೀಸ್ ಕೈ ಸೇರಿ ಪ್ರಾರಂಭವಾದ ಮಾತು-ಕತೆ ತಿಂಗಳು ಮುಗಿಯುವುದರೊಳಗೆ ಹಲವು ರೈತಾಪಿ ಗೆಳೆಯರನ್ನು ಗುಂಪುಗೂಡಿಸಿತ್ತು. ಚೀಮಾಚನಹಳ್ಳಿ ಮೂರ್ತಿ, ರಮೇಶ್, ಮುಕುಂದ್ ನಲ್ಲಪನಹಳ್ಳಿಯ ನಂಜಪ್ಪ, ಮಟ್ಟಬರ್ಲು ನಂದೀಶ್, ಚನ್ನರಾಯಪಟ್ಟಣದ ಮೋಹನ್, ಮಾರೇಗೌಡ, ನಂಜೇಗೌಡ, ಲಾಯರ್ ಸಿದ್ದಾರ್ಥ್, ಕಾರಹಳ್ಳಿ ಶ್ರೀನಿವಾಸ್, ಪೋಲನಹಳ್ಳಿ ಪ್ರಮೋದ್ ಗೌಡ ಮುಂತಾದವರ ನಡುವೆ ಪರಸ್ಪರ ಸಂಪರ್ಕವೇರ್ಪಟ್ಟು ಹಲವು ಸುತ್ತಿನ ದೀರ್ಘ ಸಮಾಲೋಚನೆಗಳು ನಡೆದು ಒಂದು ತೀರ್ಮಾನಕ್ಕೆ ಬಂದೇ ಬಿಟ್ಟರು. ಏನದು ತೀರ್ಮಾನ? "ನಮ್ಮೂರ ಭೂಮಿ ನಮಗೇ ಇರಲಿ ಕೆಐಎಡಿಬಿ ವಾಪಸ್ಸಾಗಲಿ". ಈ ತೀರ್ಮಾನ ಸುಮ್ಮನೆ ಬಂದದ್ದಲ್ಲ. ಇದರ ಹಿಂದೆ ಹಲವು ಘಟನಾವಳಿಗಳು ಎಚ್ಚರಿಕೆ ಗಂಟೆಯಾಗಿ ರಿಂಗಣಿಸಿದವು. ವಿಮಾನ ನಿಲ್ದಾಣ ಪ್ರಾಧಿಕಾರವು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆಂದು ದೇವನಹಳ್ಳಿಯ ರೈತರಿಂದ ಫಲವತ್ತಾದ ಕೃಷಿ ಭೂಮಿಯನ್ನು ಎಕರೆಗೆ ಕೇವಲ ಐದು ಲಕ್ಷ ನೀಡಿ ಖರೀದಿಸಿದ ನಂತರ ಭೂಮಿ ಕಳೆದುಕೊಂಡ ರೈತರು ಅನುಭವಿಸುತ್ತಿರುವ ದಾರುಣ ಬದುಕು, ಹರಳೂರು ಕೈಗಾರಿಕಾ ಅಭಿವೃದ್ಧಿ ಹೆಸರಿನಲ್ಲಿ ಮೊದಲ ಹಂತದಲ್ಲೆ 1300 ಎಕರೆ ಭೂಮಿ ಕಳೆದುಕೊಂಡ ರೈತ ಕುಟುಂಬಗಳ ಬೇಗುದಿ, ತಮ್ಮೂರಿನಲ್ಲಿಯೆ ತಬ್ಬಲಿಗಳಂತಾಗಿರುವ ಕುಟುಂಬಗಳನ್ನು ಕಂಡು ಬೆಚ್ಚಿ ಬೀಳುತ್ತಿರುವ ರೈತರು ನಮ್ಮ ಭೂಮಿಯನ್ನು ಯಾರಿಗೋ ಒಪ್ಪಿಸಿ ನಾವಲ್ಲಿ ಸೆಕ್ಯುರಿಟಿ ಗಾರ್ಡ್‌ಗಳಾಗಿ, ಕಸ ಗುಡಿಸೋಕೆ, ಶೌಚಾಲಯ ತಿಕ್ಕೋಕೆ, ಲಗ್ಗೇಜ್ ಹೊರೋಕೆ, ಲೋಡ್ ತುಂಬೋಕೆ, ಮುಸುರೆ ತೊಳೆಯೋಕೆ ಸಾಧ್ಯವಿಲ್ಲ. ನಮ್ಮೂರ ಭೂಮಿ ನಮಗೇ ಇರಲಿ ಎಂದು ಸರ್ಕಾರಕ್ಕೆ ತಿಳಿಸುವ ದೃಢ ನಿರ್ಧಾರ ಕೈಗೊಂಡರು.

ಹೀಗೆ, ನಾಲ್ಕಾರು ಜನ ಕೈಗೊಂಡ ನಿರ್ಧಾರ ಹತ್ತಾರು ಜನರನ್ನ ಮುಟ್ಟಲು ಬಹಳ ತಡವೇನು ಆಗಲಿಲ್ಲ. ಜನವರಿ 28ರಂದು ಚನ್ನರಾಯಪಟ್ಟಣ ನಾಡ ಕಚೇರಿ ಎದುರಿಗೆ ಕೃಷಿ ಭೂಮಿ ಪರಭಾರೆ ಕೈಬಿಡಿ ಎಂದು ಆಗ್ರಹಿಸಿ ನೋಟೀಸ್ ಹಿಂಪಡೆಯಲು ಜಿಲ್ಲಾಡಳಿತಕ್ಕೆ ಹದಿನೈದು ದಿನಗಳ ಗಡುವು ನೀಡುವುದರೊಂದಿಗೆ ಹೋರಾಟಕ್ಕೆ ಚಾಲನೆ ಪಡೆಯಿತು. ಗಡುವು ಮುಗಿಯಿತು, ಜಿಲ್ಲಾಡಳಿತದಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಮತ್ತೆ ಸರ್ಕಾರದ ಗಮನ ಸೆಳೆಯಲು ಫೆ.16 ರಂದು ಟ್ರ್ಯಾಕ್ಟರ್ ರ್‍ಯಾಲಿಗೆ ತೀರ್ಮಾನಿಸಲಾಯ್ತು. ಈ ಹೋರಾಟವನ್ನು ಭಂಗಗೊಳಿಸಲು ಪೊಲೀಸರ ಮೂಲಕ, ಏಜೆಂಟರ ಮೂಲಕ ಸಾಕಷ್ಟು ಪ್ರಯತ್ನಿಸಲಾಯಿತು, ಬೆದರಿಸಲಾಯಿತು. ಈ ಯಾವ ಕುತಂತ್ರಗಳಿಗೂ ಜಗ್ಗದ ನೇಗಿಲ ಯೋಗಿಗಳು ಟ್ರಾಕ್ಟರ್ ರ್‍ಯಾಲಿಯನ್ನು ಯಶಸ್ವಿಗೊಳಿಸಿದರು. ಇಷ್ಟಾದ ನಂತರ ಜಿಲ್ಲಾಡಳಿತ ಹೇಳಿದ್ದು ನಿಮ್ಮನ್ನ ಕೈಗಾರಿಕಾ ಮಂತ್ರಿಗಳ ಜೊತೆ ಮಾತನಾಡಿಸುತ್ತೇವೆ. ಆಹಾ, ಮಂತ್ರಿಗಳನ್ನು ಭೇಟಿ ಮಾಡಿಸುವುದೆಂದರೆ ಸುಲಭದ ಮಾತೆ!? ಅವರೇನು? ಅವರ ವ್ಯವಹಾರಗಳೇನು? ಅವರ ವಹಿವಾಟುಗಳೇನು? ಅವರ ವಾಸವೇನು? ಒಡನಾಟಗಳೇನು? ಮಂತ್ರಿಗಳೆಂದರೆ ಸಾಮಾನ್ಯರೆ!? ಪಾಪ, ಬಡಪಾಯಿ ರೈತರಿಗೂ ಇಂತಿರುವ ಮಂತ್ರಿಗಳನ್ನು ನೋಡುವ, ಎದುರು ಕೂತು ಮಾತನಾಡಿಸುವ ಅವಕಾಶವನ್ನು ಕಲ್ಪಿಸಿಕೊಡುವುದಾಗಿ ಜಿಲ್ಲಾಧಿಕಾರಿಗಳು ಭರವಸೆ ನೀಡಿದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಯೆ ಸ್ವತಃ ತನ್ನನ್ನು ತಾನು ಮಹಾರಾಣಿಯೆಂದು ತಿಳಿದಿರುವಾಗ, ಭೇಟಿಗೆಂದು ಬರುವ ಅಮಾಯಕರನ್ನು ಗಂಟೆಗಟ್ಟಲೆ ಕಾಯುವಂತೆ ಮಾಡುವಾಗ ಮಂತ್ರಿಯ "ಸ್ಥಾನ-ಮಾನ" ಇನ್ನೆಂತದ್ದಾಗಿರಬೇಡ. ಅಧಿಕಾರಿಗಳು, ಜನ ಪ್ರತಿನಿಧಿಗಳು ಹೀಗಿರದಿದ್ದರೆ ಪ್ರಜಾಪ್ರಭುತ್ವಕ್ಕೆ ಶೋಭೆಯೆಲ್ಲಿಂದ!!

ಫೆಬ್ರವರಿ 25ರಂದು ಕೊನಗೂ ರೈತರು ತಮ್ಮನ್ನು ಭೇಟಿಯಾಗವ ಅವಕಾಶ ಮಾಡಿಕೊಟ್ಟರು ಸಚಿವ ಮುರುಗೇಶ್ ನಿರಾಣಿ. ಸಂಸದರು, ಶಾಸಕರು ಮುಂತಾದ ಜನ ಪ್ರತಿನಿಧಿಗಳ ಸಭೆ ಕರೆದು ಸಮಸ್ಯೆಯನ್ನು ಬಗೆಹರಿಸುತ್ತೇನೆನ್ನುವ ಮಾಮೂಲಿ ಸುಳ್ಳಿನ ಭರವಸೆ ನೀಡಿ ರೈತರನ್ನ ಸಾಗಹಾಕಿದ ಸಚಿವರು ನಂತರ ರೂಪಿಸಿದ್ದು ಬೇರೆಯದೆ ಸಂಚು. ರೈತರ ಮನ ಒಲಿಸಲು ದಲ್ಲಾಳಿಗಳ ಬಳಕೆ. ಒಪ್ಪದಾದಾಗ ಅವರಿಂದಲೆ ಧಮಕಿ. ಕೆಲಸ ಕೊಡುವ ಭರವಸೆಗಳು, ಬೆಲೆ ಚೌಕಾಸಿ, ಪ್ರತಿ ಕುಟುಂಬಕ್ಕೆ ಕೆಲಸ, ಇತ್ಯಾದಿಗಳು. ಈ ನಡುವೆ ಜಿಲ್ಲಾ ಉಸ್ತುವಾರಿ ಮಂತ್ರಿ ಡಾ.ಸುಧಾಕರ್, ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ್, ಎಂಟಿಬಿ ನಾಗರಾಜ್ ಮೂಲಕವು ಸರ್ಕಾರಕ್ಕೆ ಮನವಿ ಸಲ್ಲಿಸಿದರುಕ. ರೈತರ ಸಹನೆ ಮೀರಿತು. ಕಂಡೂ ಕಾಣದ ಹಾಗೆ ಮಂತ್ರಿಗಳಾಟವೂ ನಿಲ್ಲದಾಯಿತು. ಸಂಘರ್ಷದ ದಾರಿ ಸ್ಪಷ್ಟವಾಯಿತು.

ಮುಂದೇನು ಮಾಡುವುದು? ಯಾವ ದಾರಿ? ಜೊತೆ ಯಾರು? ಯಾರನ್ನು ನಂಬುವುದು? ನಮ್ಮ ಭೂಮಿ ಕಾಯ್ದುಕೊಳ್ಳುವ ಪರಿ ಎಂತು? ಚಿಂತೆಗಿಟ್ಟುಕೊಂಡಿತು. ಅರೆ, ದಾರಿ ಇದೆ. ನಿರಾಸೆ ಬೇಕಿಲ್ಲ. ದೆಹಲಿಯಲ್ಲಿ ನಡೆದ ರೈತ ಹೋರಾಟ ನಮಗೂ ಮಾದರಿಯಾಗದೇನು? ಅದೇ ನಮ್ಮದೂ ದಾರಿ, ಸಂಘರ್ಷದ ದಾರಿ. ಇನ್ನು ತಡ ಬೇಡ. ಹೋರಾಟದ ರೂಪುರೇಷೆ ಆಖೈರಾಯಿತು. ಏಪ್ರಿಲ್ 4ರಂದು ಚನ್ನರಾಯಪಟ್ಟಣದ ನಾಡ ಕಚೇರಿ ಎದುರು ಅನಿರ್ದಿಷ್ಟಾವಧಿ ಅಹೋ ರಾತ್ರಿ ಧರಣಿಗೆ ಟೆಂಟ್ ಸಿದ್ಧವಾಯಿತು. ಹೀಗೆ ಪ್ರಾರಂಭವಾದ ಚನ್ನರಾಯಪಟ್ಟಣ ರೈತ ಹೋರಾಟವೀಗ ಏಳು ತಿಂಗಳುಗಳನ್ನ ಪೂರೈಸುತ್ತಿದೆ. ಈ ತುಂಬು ಹೋರಾಟದ ಗರ್ಭಪಾತಕ್ಕೆ ನಡೆಸಿದ ಸಂಚುಗಳೇನು ಕಡಿಮೆಯಲ್ಲ, ಕುತಂತ್ರಗಳು ಒಂದೆರಡಲ್ಲ. ಅವೆಲ್ಲವು ದೃಢ ಹೋರಾಟದೆದುರು ವಿಫಲಗೊಂಡವು. ಹೋರಟಗಾರರು ಸೆಟೆದು ನಿಂತರು. ನಾವು ನಡೆಸುವ ಹೋರಾಟದಿಂದ ಬರಿಗೈನಲ್ಲಿ ಹಿಂದಿರುಗುವ ಮಾತೇ ಇಲ್ಲ ಎನ್ನುತ್ತಾರೆ ದಿನವೂ ಧರಣಿ ಕಾರ್ಯಕ್ರಮದಲ್ಲಿ





ಭಾಗವಹಿಸುತ್ತಿರುವ ಚನ್ನರಾಯಪಟ್ಟಣದ ಒಂದೇ ಹೆಸರಿನ ಇಬ್ಬರು ನಾರಾಯಣಮ್ಮ, ಮಟ್ಟಬರ್ಲುವಿನ ವೆಂಕಟಮ್ಮ, ಲಕ್ಷ್ಮಮ್ಮ, ಮುನಿಯಮ್ಮ, ಪಾರ್ವತಮ್ಮ. "ಜೀವ ಬಿಟ್ಟೇವು ಭೂಮಿ ಕೊಡೆವು" ಎನ್ನುತ್ತಿದ್ದಾರೆ ಹೋರಾಟದಲ್ಲಿ ಸತತವಾಗಿ ಪಾಲ್ಗೊಳ್ಳುತ್ತಿರುವ ಇಷ್ಟೂ ರೈತ ಮಹಿಳೆಯರು. ಹಗಲು ಹೊಲಗಳಲ್ಲಿ ದುಡಿದು ಬರುವ ಇವರು ರಾತ್ರಿ ಚಳವಳಿ ಟೆಂಟಿನಲ್ಲಿ ಮಲಗುತ್ತಾರೆ, ಹೋರಾಟದ ಕಾವನ್ನು ಕಾಪಿಟ್ಟುಕೊಂಡಿದ್ದಾರೆ. ನೂರಾರು ಮಹಿಳೆಯರು ಸೇರಿ ಒಂದು ದಿನದ ಧರಣಿ ಕಾರ್ಯಕ್ರಮವನ್ನು ನಡೆಸಿ ನಮ್ಮೂರ ಭೂಮಿ ನಮಗೇ ಬೇಕೆಂದು ಮುಗಿಲು ಮುಟ್ಟುವ ಘೋಷಣೆಗಳನ್ನು ಕೂಗಿದ್ದಾರೆ. ಸರ್ಕಾರದ ರೈತ ವಿರೋಧಿ ಹಠಮಾರಿತನವನ್ನು ಖಂಡಿಸಿ ಹೆದರದೆ, ತೊದಲದೆ ಭಾಷಣಗಳನ್ನೂ ಮಾಡಿದರು. ನಮಗಿಲ್ಲದ ಈ ಸರ್ಕಾರ ಇದ್ದರೆಷ್ಟು ಹೋದರೆಷ್ಟು ಮೊದಲು ತೊಲಗಲಿ ಈ ಸರ್ಕಾರ ಎನ್ನುವ ಆಕ್ರೋಶವನ್ನು ಹೊರ ಹಾಕಿದರು.

1777 ಎಕರೆ ಭೂಮಿಯ ಪೈಕಿ ಬಗರ್ ಹುಕುಂ ಸಾಗುವಳಿ ಮೂಲಕ ಪಡೆದಿರುವ ಭೂಮಿ ಸುಮಾರು 250 ಎಕರೆಯಷ್ಟಿದೆ. ಈ ಮೂಲಕ ಸಾಗುವಳಿ ಚೀಟಿ ಪಡೆದು ಇತ್ತೀಚೆಗಷ್ಟೆ ಸ್ವಂತ ಭೂಮಿಯನ್ನು ಕಣ್ಣರಳಿಸಿ ನೋಡುತ್ತಿರುವ ದಲಿತರ ಭೂಮಿಯನ್ನೂ ಮರಳಿ ಕಸಿಯಲು ನೋಟೀಸ್ ಹೊರಡಿಸಿದೆ ಬಿಜೆಪಿ ಸರ್ಕಾರ. ಬಗರ್ ಹುಕುಂ ಭೂಮಿಗೆ ಹಕ್ಕುಪತ್ರ ಪಡೆಯಲು ಅಂದೂ ಪೊಲೀಸರೊಂದಿಗೆ ಸೆಣೆಸಾಡಿದ್ದ ಘಟನೆಗಳನ್ನು, ಪಟ್ಟಭದ್ರ ಹಿತಾಸಕ್ತಿಗಳಿಗೆದುರಾಗಿ ಜಗ್ಗದೆ ನಿಂತಿದ್ದನ್ನು ಉಸಿರುಗಟ್ಟಿ ವಿವರಿಸುತ್ತಾರೆ ಚನ್ನರಾಯಪಟ್ಟಣದ ದಲಿತ ಸೋದರಿಯರು. ಚಳವಳಿ ಟೆಂಟಿನಲ್ಲಿ ಪ್ರತಿ ಮಧ್ಯಾಹ್ನ ಎಲ್ಲರೂ ಒಟ್ಟಿಗೆ ಸಹಭೋಜನ ಮಾಡುತ್ತಾರೆ. ಅಲ್ಲಿಯೇ ಅಡುಗೆ ಮಾಡುವ ಕೆಲಸವನ್ನು ಎಲ್ಲರೂ ನಿಭಾಯಿಸುತ್ತಾರೆ. ಪ್ರಾರಂಭದ ದಿನಗಳಲ್ಲಿ ಜಾತಿ, ಧರ್ಮ, ಮೇಲು-ಕೀಳುಗಳ ಭಾವನೆಗಳು ಪರಸ್ಪರ ಒಡನಾಡುವುದನ್ನು ನಿರ್ಭಂದಿಸಿದವಾದರು ಹೋರಾಟ ತೀವ್ರಗೊಳ್ಳುತ್ತಾ ಇವೆಲ್ಲವುಗಳು ತೆಳುವಾಗುತ್ತಾ ಬಂದವು. ಹಳ್ಳಿಗಳಲ್ಲಿ ಸಹಜವಾಗಿ ಇರುವಂತಹ ಸಾಮಾಜಿಕ ಅಂತರವನ್ನು ಸವೆಸಲು ಪ್ರಾರಂಭಿಸಿದೆ ನಮ್ಮ ಹೋರಾಟ ಎಂದು ಖುಷಿಯಿಂದ ಹೇಳುತ್ತಾರೆ ಚೀಮಾಚನಹಳ್ಳಿ ರಮೇಶ್ ಮತ್ತು ಕಾರಹಳ್ಳಿ ಶ್ರೀನಿವಾಸ್. ತೀರಾ ಇತ್ತೀಚೆಗೆ ಭೂಮಿಯ ಒಡೆಯರಾಗಿರುವ ದಲಿತರು ಹೋರಾಟದಲ್ಲಿ ಮುಂಚೂಣಿಯಲ್ಲಿದ್ದಾರೆಂದರೆ ತಪ್ಪಾಗದು. ಸಾಮಾನ್ಯ ಸಿಮೆಂಟ್ ಸೀಟಿನ ಮನೆಗಳಲ್ಲಿ ವಾಸವಾಗಿರುವ ಈ ದಲಿತ ಕುಟುಂಬಗಳು ತಮ್ಮ ಕೃಷಿ ಭೂಮಿಯಲ್ಲಿ ಅರಮನೆಯ ವೈಭವವನ್ನು ಸೃಷ್ಟಿಸಿದ್ದಾರೆ. ಹೀಗೇಕೆ ನೀವು ಎಂದರೆ, ನಾವು ಅಡುಗೆ ಮಾಡಿ ಮಲಗಲು ಮಾತ್ರ ಮನೆ. ಬಾಕಿ ನಮ್ಮ ಬದುಕೆಲ್ಲ ಈ ಭೂಮ್ತಾಯಿಯ ಮಡಿಲಿನಲ್ಲೆ ಎಂದು ಕಣ್ಣಂಚಿನಲ್ಲಿ ಮಿಂಚು ಹೊರಳಿಸಿ ಮತ್ತೇನೊ ಹೊಸದನ್ನು ತೋರಿಸಲು ತೊಡಗುತ್ತಾರೆ. ಪಾಲಿ ಹೌಸ್ ಎನ್ನುವ ಈ ಕೃಷಿ ಟೆಂಟುಗಳೊಳಗೆ ತಾಪಮಾನ ಸರಿದೂಗಿಸಲು ಹಾಕಿರುವ ಲೈಟುಗಳನ್ನು ಕತ್ತಲೆಯಿರುವಾಗ ಹಾಕಿದರೆಂದರೆ ಅರಮನೆಯೇ ನಾಚುವಂತಹ ಸಿರಿ ಅದರೊಳಗೆ. ನೆಲದಲ್ಲಿ ಹಸಿರು, ಬೆಳ್ಳನೆಯ ಮೋಡದಂತಹ ಮೇಲೊದಿಕೆ, ನಡುವಿನಲ್ಲಿ ಪ್ರಕಾಶಮಾನವಾದ ಬೆಳಕು. ಈ ಆಧುನಿಕ ಕೃಷಿ ವಿಧಾನವನ್ನು ಮೊದಲ ಬಾರಿಗೆ ನೋಡುವ ನನ್ನಂತವರಿಗಂತು ಸೋಜಿಗವೆ ಸರಿ. ಸಾಲ-ಸೋಲ ಮಾಡಿ ಲಕ್ಷಾಂತರ ರೂಪಾಯಿಗಳನ್ನು ತಂದು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕೃಷಿಯಿಂದ ಬದುಕನ್ನು ಕಟ್ಟಿಕೊಳ್ಳುವ ಆಸೆಯಿಂದ ಹಗಲಿರುಳು ಮಣ್ಣಿನಲ್ಲಿ ಮಣ್ಣಾಗಿ ದುಡಿಯುತ್ತಿರುವ ಈ ಶ್ರಮಿಕರ ಜಮೀನಿನ ಮೇಲೆ ಕಾರ್ಪೊರೇಟ್ ಕಳ್ಳರ ಕಣ್ಣು ಬಿದ್ದಿರುವುದು ಯಾವುದೇ ನಾಗರಿಕ ಸಮಾಜ ನಾಚಿಕೆ ಪಡಬೇಕಾದಂತಹ ಸಂಗತಿ. ಅದರಲ್ಲೂ, ಒತ್ತಾಯದ ಭೂ ಸ್ವಾಧೀನ ಕೃಷಿಕರ ಸ್ವಾಭಿಮಾನವನ್ನು ಕೆಣಕುವ ಕೃತ್ಯ. ಇಂತಹ ವೈಪರಿತ್ಯಕ್ಕಿಳಿದ ಸರ್ಕಾರದ ವಿರುದ್ಧ ಸಹಜವಾಗಿ ಕೆರಳಿರುವ ರೈತ ಬಂಧುಗಳು ಛಲಬಿಡದ ಹೋರಾಟವನ್ನು ಇನ್ನೂ ಮುನ್ನಡೆಸುತ್ತಿದ್ದಾರೆ.



ಪ್ರಾರಂಭಿಕ ಹಂತದಲ್ಲಿ, ದೆಹಲಿ ಹೋರಾಟದ ಮಾದರಿಯನ್ನನುಸರಿಸಿ ಸ್ವಯಂ ಬೀದಿಗಿಳಿದ ರೈತರ ಹೋರಾಟಕ್ಕೆ ಹಲವಾರು ಸಂಘಟನೆಗಳು ಎಡಬಲಕ್ಕೆ ನಿಂತವು. ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ದಲಿತ ಸಂಘರ್ಷ ಸಮಿತಿ ಒಕ್ಕೂಟ, ಕರ್ನಾಟಕ ರಕ್ಷಣಾ ವೇದಿಕೆ ಮುಂತಾದ ಸಂಘಟನೆಗಳು ನಿರಂತರ ಬೆಂಬಲ ನೀಡಿದವು. ಹಲವು ಹಂತಗಳ ಹೋರಾಟಗಳನ್ನು ರೂಪಿಸಲು ರೈತರಿಗೆ ನೆರವಾದವು.


ದುಡಿದುಣ್ಣುವ ಸ್ವಾತಂತ್ರ್ಯ ನಮಗಿಲ್ಲವೇ?

ನಮ್ಮ ಭೂಮಿಯಲ್ಲಿ ನಾವು ದುಡಿದುಣ್ಣುವ ಸ್ವಾತಂತ್ರ್ಯವೂ ನಮಗಿಲ್ಲವೆ? ಮತ್ತಾರಿಗೆ ಬಂದಿದೆ ಸ್ವಾತಂತ್ರ್ಯ ಎಂದು ವ್ಯಗ್ರವಾಗುವ ರೈತರು ಎಪ್ಪತ್ತೈದನೆಯ ಸ್ವಾತಂತ್ರ್ಯ ದಿನಾಚರಣೆಯಂದು ತಾಲ್ಲೂಕು ಕೇಂದ್ರ ದೇವನಹಳ್ಳಿಯಲ್ಲಿ ಮೆರವಣಿಗೆ ನಡೆಸಲು ತಯಾರಾದರು. ಇದರ ಮಾಹಿತಿ ಪಡೆದ ಪೊಲೀಸರು ರಾತ್ರೋರಾತ್ರಿ ರೈತ ಮುಖಂಡರುಗಳ ಮನೆಗಳಿಗೆ ತೆರಳಿ ಹಲವರನ್ನು ವಶಕ್ಕೆ ಪಡೆದರು. ಅದರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾಗಿರುವ ಜಿ.ಸಿ.ಬಯ್ಯಾರೆಡ್ಡಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಾರ್ಯದರ್ಶಿ ಚಂದ್ರು ತೇಜಸ್ವಿ, ಚನ್ನರಾಯಪಟ್ಟಣದ ಗ್ರಾಮ ಪಂಚಾಯ್ತಿ ಸದಸ್ಯ ಮಾರೇಗೌಡ, ಮೋಹನ್, ಅಶ್ವಥಪ್ಪ, ವೆಂಕರಮಣಪ್ಪ ಚೀಮಾಚನಳ್ಳಿ ರಮೇಶ್, ಮಟ್ಟಬರ್ಲುವಿನ ಗೋಪಾಲಪ್ಪ ಸೇರಿದ್ದರು. ಆಗಸ್ಟ್ 15ರ ಬೆಳಗಿನ ಜಾವ ಬಂಧನಕ್ಕೊಳಗಾದ ಹೋರಾಟಗಾರರ ಕುರಿತಾಗಿ ವಿಷಯ ತಿಳಿದು ಕೆರಳಿದ ರೈತರು ಮತ್ತು ರೈತ ಮಹಿಳೆಯರು ಬೆಳಕಾಗುತ್ತಿದ್ದಂತೆ ದೇವನಹಳ್ಳಿಯಲ್ಲಿ ಪ್ರತಿಭಟನೆ ಮಾಡಿ ತಮ್ಮ ಪ್ರತಿರೋಧವನ್ನು ದಾಖಲಿಸಲು ದೇವನಹಳ್ಳಿ ಕಡೆ ಹೊರಟರು..

75ನೆಯ ಸ್ವಾತಂತ್ರೋತ್ಸವಕ್ಕೆ ಚಾಲನೆ ನೀಡಲು ಮಂತ್ರಿಗಳು, ಅಧಿಕಾರಿಗಳು ಸೇರುವ ನೆಪ ಒಡ್ಡಿ ಸಿಕ್ಕ ಸಿಕ್ಕಲ್ಲೆ ಪ್ರತಿಭಟನಾಕಾರರನ್ನು ಬಂಧಿಸಿದ ಪೊಲೀಸರು ಬಸ್ಸು, ಜೀಪುಗಳಿಗೆ ಅವರನ್ನೆಲ್ಲ ತುಂಬಿಸಿ ಬೆಂಗಳೂರಿನ ಸಂಪಿಗೆಹಳ್ಳಿ ಪೊಲೀಸ್ ತರಬೇತಿ ಕೇಂದ್ರಕ್ಕೆ ತಂದು ಕೂಡಿದರು. ಕಾರಳ್ಳಿ ಶ್ರೀನಿವಾಸ್, ಚೀಮಾಚನಹಳ್ಳಿ ಮುಕುಂದ್, ನಲಪ್ಪನ ಹಳ್ಳಿ ತಿಮ್ಮೇಗೌಡ, ಮಟ್ಟಬರ್ಲುವಿನ ರಮೇಶ್, ನಂದನ್, ಲೋಕೇಶ್, ಅತ್ತಿಬೆಲೆ ನರಸಪ್ಪ, ಮುನಿವೆಂಕಟಮ್ಮ, ಬಾಲೇಪುರ ನಾಗರಾಜ್, ಹೊಸಹಳ್ಳಿ ನಾರಾಯಣ ಸ್ವಾಮಿ, ಪೋಲನಹಳ್ಳಿಯ ಶೃತಿ, ಪ್ರಮೋದ್ ಗೌಡ ಸೇರಿದಂತೆ 81 ಜನರನ್ನು ಬೆಳಗಿನ ಉಪಹಾರಕ್ಕೂ ಮುಂಚೆಯೆ ವಶಕ್ಕೆ ಪಡೆದ ಪೊಲೀಸರು 71 ಜನರ ಮೇಲೆ ಎಫ್‌ಐಆರ್ ಜಡಿದರು.

ಆ ಕಡೆ ಮಂತ್ರಿಗಳು, ಶಾಸಕರು, ಜನಪ್ರತಿನಿಧಿಗಳು, ಅಧಿಕಾರಿಗಳು ಸ್ವಾತಂತ್ರ್ಯ ಬಾವುಟವನ್ನು ಹಾರಾಡಿಸಿ ಸಿಹಿ ಹಂಚಿಕೊಂಡು ಸಂಭ್ರಮಿಸಿದರೆ ಇತ್ತ ಕಡೆ ಪೊಲೀಸರ ವಶದಲ್ಲಿದ್ದ ಅನ್ನದಾತರು ತಮಗೊದಗಿದ ಸ್ಥಿತಿಗಾಗಿ ನಲುಗುತ್ತಿದ್ದರು. ಈ ಘಟನೆ ಸ್ವಾತಂತ್ರ್ಯ ಹೋರಾಟದಲ್ಲಿ ನರಳಿದವರು, ನೆಲಕ್ಕೆ ನೆತ್ತರು ಸುರಿಸಿದವರು, ನೇಣುಗಂಬವೇರಿದವರು, ನೆಲೆ ಕಳೆದುಕೊಂಡವರು, ಅನಾಥರಾದವರು ಮತ್ತು ಇವರಿಗೆದುರಾಗಿ ಆಂಗ್ಲರ ಬೂಟು ನೆಕ್ಕಿದ ವಿದ್ರೋಹಿಗಳು ಅಧಿಕಾರ ಅನುಭವಿಸುತ್ತ ಸುಖವಾಗಿರುವ ಭಾರತವನ್ನು ಪ್ರತಿನಿಧಿಸುವಂತಿತು. ದೇಶದ ಪ್ರಜಾಪ್ರಭುತ್ವದ ಘೋರ ಅಣಕವಿದು. ಪೊಲೀಸ್ ದೌರ್ಜನ್ಯಕ್ಕೆ ಸಿಲುಕಿದ ಪೋಲನಹಳ್ಳಿಯ ಪ್ರಮೋದ್ ಗೌಡ ಕಣ್ಣಿಗೆ ಬಲವಾದ ಏಟು ಬಿದ್ದಿತ್ತು. ದರ್ಪವನ್ನೆ ಮೈವೆತ್ತಿದ್ದ ಪೊಲೀಸ್ ಅಧಿಕಾರಿಗಳು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುವ ಬದಲು ಬಂಧನದಲ್ಲಿಟ್ಟರು. ಚಿಕಿತ್ಸೆಗೆ ತಡವಾದ ಕಾರಣ ಕಣ್ಣು ಅಪಾಯದಲ್ಲಿದೆ ಎಂದು ವೈದ್ಯರು ಹೇಳಿದ ಮಾತನ್ನು ಕುಟುಂಬಕ್ಕೆ ತಿಳಿಸದೆ ಚಿಕಿತ್ಸೆ ಮುಂದುವರೆಸಿಕೊಂಡ ಪ್ರಮೋದ್ ಗೌಡಗೆ ಈಗಲು ಹತ್ತಿರದಿಂದ ಏನೂ ಕಾಣದು. ಅರವತ್ತರ ಆಸುಪಾಸಿನ ರೈತ ಮಹಿಳೆ





ನಾರಾಯಣಮ್ಮನನ್ನು ಎಳೆಯುವ ರಭಸದಲ್ಲಿ ಅವರ ಕೈಗೆ ಪೆಟ್ಟಾಗಿ ಈಗಲೂ ನೋವಿಗೆ ಮಾತ್ರೆ ನುಂಗುವರು. ಅರೆಸ್ಟ್ ಮಾಡಿ ಸುಮ್ಮನಾಗದ ಪೊಲೀಸರು ಎಲ್ಲರ ಮೊಬೈಲುಗಳನ್ನ ಸೀಜ್ ಮಾಡಿದರು. ಸಂಪರ್ಕ ತಪ್ಪಿಸುವಲ್ಲಿ ಯಶಸ್ವಿಯಾದರು. ಇಪ್ಪತ್ತೈದು ದಿನಗಳ ನಂತರ ಕೋರ್ಟ್ ಮೂಲಕ ರೈತ ಬಂಧುಗಳು ತಮ್ಮ ಮೊಬೈಲುಗಳನ್ನು ಹಿಂಪಡೆದರು.

ಕಳೆದ ಜನವರಿಯಲ್ಲಿ ಪ್ರಾರಂಭಿಸಿದ ಹೋರಾಟವನ್ನು ಸೋರಿ ಹೋಗದಂತೆ ಕಾಪಿಟ್ಟುಕೊಳ್ಳಲು ಹಲವು ಹಂತದ ಕಾರ್ಯಯೋಜನೆಯನ್ನು ಯಶಸ್ವಿಯಾಗಿ ನಿಭಾಯಿಸಿರುವ ಹೋರಾಟಗಾರರು ಈ ಹಿಂದೆ ಚಳುವಳಿಯನ್ನು ಕಂಡವರೆ ಅಲ್ಲ. ಸ್ವತಃ ಪ್ರಯೋಗಕ್ಕಿಳಿದು ಸರ್ಕಾರಕ್ಕೆ ಸವಾಲಾಗಿ ನಿಂತಿರುವ ಇವರು ಕರ್ನಾಟಕ ರಾಜ್ಯದ ರೈತ ಸಮುದಾಯಕ್ಕೆ ಅನುಕರಣೀಯ. ನಮಗೂ ಕೃಷಿಯಲ್ಲಿ ಕೆಲಸವಿದೆ, ಭೂಮಿಯಲ್ಲಿ ನಮ್ಮದೂ ಪಾಲಿದೆ ಎಂದು ಪುರುಷರಿಗೆ ಸರಿಸಮನಾಗಿ ಹೋರಾಟಕ್ಕೆ ನಿಲ್ಲುವ ರೈತ ಮಹಿಳೆಯರು ಹತ್ತಾರು ವರ್ಷಗಳ ಹೋರಾಟಗಳಲ್ಲಿ ಪಳಗಿದ ಅನುಭವೀ ನಾಯಕಿಯರಂತೆ ಚರ್ಚಿಸುವುದನ್ನು ನೋಡುವುದಂತು ನನ್ನಂತ ಕಾರ್ಯಕರ್ತೆಯರ ಪಾಲಿಗೆ ಹಬ್ಬ. ಬದುಕಿನ ಅನುಭವ, ಅರಿವು ಯಾರಪ್ಪನ ಆಸ್ತಿ?

ಏಪ್ರಿಲ್ 17 ರಂದು ಜನಜಾಗೃತಿ ಮೂಡಿಸುವ ಬೈಕ್ ಜಾಥಾ ಸಂಘಟಿಸಿದ ಇವರು. ಏಪ್ರಿಲ್ 20 ರಂದು ಭೂಮ್ತಾಯಿ ಕೂಗು ಬೀದಿ ನಾಟಕ ಪ್ರದರ್ಶಿಸಿದರು. ಏಪ್ರಿಲ್ 23 ರಂದು ಯುವಜನರ ಬೆಂಬಲ ಕೋರಿ ಬಹಿರಂಗ ಸಭೆ ನಡೆಸಿದರು. ಪ್ರತಿಭಟನೆಯ ಐವತ್ತನೆಯ ದಿನದಂದು ಜಸ್ಟೀಸ್ ಗೋಪಾಲಗೌಡರನ್ನು ಪ್ರತಿಭಟನಾ ಸ್ಥಳಕ್ಕೆ ಕರೆಸಿಕೊಂಡ ಚಳುವಳಿನಿರತರು "ರೈತರ ಸ್ವಾಭಿಮಾನ ಸಮಾವೇಶ" ವನ್ನು ಸಂಘಟಿಸಿದರು. ಜೂನ್ 17 ರಂದು ದೇವನಹಳ್ಳಿ ಬಂದ್ ಕರೆ ನೀಡಿ ಯಶಸ್ವಿಯಾದರು. ಆಗಸ್ಟ್

ಪುಟ 10 ಕ್ಕೆ

ಕುಲಾಂತರಿ ಸಾಸಿವೆಯ ವಾಣಿಜ್ಯ ಬಳಕೆಗೆ ಅವಕಾಶ ನೀಡಲು ಆತುರ ಬೇಡ

ಜೈವಿಕವಾಗಿ ಮಾರ್ಪಾಡುಗೊಳಿಸಿದ(ಜಿಎಂ) ಸಾಸಿವೆ ಕುರಿತಂತೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಪ್ರಧಾನ ಕಾರ್ಯದರ್ಶಿ ಹನನ್ ಮೊಲ್ಲಾ ರವರ ಅಭಿಪ್ರಾಯಗಳು ಮಾಧ್ಯಮಗಳಲ್ಲಿ ತಪ್ಪಾಗಿ ವರದಿಯಾಗಿರುವುದರಿಂದ ಜಿಇಎಸಿ(ಜೈವಿಕ ಇಂಜಿನಿಯರಿಂಗ್ ಪರಿಶೀಲನಾ ಸಮಿತಿ) ನಿರ್ಧಾರವನ್ನು ಎಐಕೆಎಸ್ ಸ್ವಾಗತಿಸಿದೆ ಎಂಬ ಅಭಿಪ್ರಾಯ ಮೂಡುವಂತಾಗಿ ಯಾವುದೇ ವಿವೇಚನೆ ಇಲ್ಲದೇ ಜಿಎಂ ಸಾಸಿವೆಯನ್ನು ಎಐಕೆಎಸ್ ತರಾತುರಿಯಿಂದ ಸ್ವಾಗತಿಸಿದೆ ಎಂದು ತಪ್ಪಾಗಿ ಬಿಂಬಿತವಾಗಿದೆ.

ಕೃಷಿಗೆ ಜಿಎಂ ಸಾಸಿವೆ ಲಭ್ಯವಾಗುವಂತೆ ಮಾಡುವ ಒಂದು ಹೆಜ್ಜೆಯಾಗಿ, ಜಿಇಎಸಿ ಯು ಜೈವಿಕವಾಗಿ ಮಾರ್ಪಾಡುಗೊಳಿಸಿದ ಸಾಸಿವೆ ಬೀಜ ಉತ್ಪಾದನೆ ಹಾಗೂ ಪರೀಕ್ಷೆಗೆ ಹಸಿರು ನಿಶಾನೆ ನೀಡಿರುವುದನ್ನು ಎಐಕೆಎಸ್ ಗಮನಿಸಿದೆ. ಕೃಷಿ ಬೆಳವಣಿಗೆಗೆ, ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಹಾಗೂ ರೈತರ ಆದಾಯ ಹೆಚ್ಚಿಸಲು ವಿಜ್ಞಾನ ಆಧಾರಿತ ಪರಿಹಾರವನ್ನು ಎಐಕೆಎಸ್ ಬೆಂಬಲಿಸುತ್ತದೆ. ಎಣ್ಣೆಬೀಜಗಳ ಕೃಷಿಯು ಹೆಚ್ಚು ಲಾಭದಾಯಕವಾಗಿರಲು ಹಾಗೂ ಖಾದ್ಯ ತೈಲಗಳ ಆಮದು ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಲು ಹೆಚ್ಚು ಇಳುವರಿ ಸಾಸಿವೆ ಬೀಜಗಳನ್ನು ಅಭಿವೃದ್ಧಿ ಪಡಿಸುವುದು ಬಹಳ ಮುಖ್ಯವಾದುದು.

ಆದಾಗ್ಯೂ ಇತ್ತೀಚಿನ ದಿನಗಳಲ್ಲಿ ಇಂತಹ ತಂತ್ರಜ್ಞಾನದ ಪರಿಹಾರವು ರೈತರ, ಗ್ರಾಹಕರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಬದಲು ಕಾರ್ಪೊರೇಟ್ ಹಿತಾಸಕ್ತಿಗಳನ್ನೇ ಮತ್ತಷ್ಟು ಪೋಷಿಸುತ್ತದೆ ಎಂಬುದೇ ನಮ್ಮ ಅನುಭವ. ಹಾಗಾಗಿ ಬೀಜ ತಳಿಗಳನ್ನು ಉತ್ಪಾದಿಸಲು ಸಾರ್ವಜನಿಕ ಸಂಪನ್ಮೂಲಗಳನ್ನು ಬಳಸಬೇಕು ಮತ್ತು ಇಂತಹ ಬೀಜಗಳನ್ನು ರೈತರು ಪುನರುತ್ಪಾದನೆ ಮಾಡುವಂತಿದ್ದು ಖಾಸಗಿ ಬೀಜ ಕಂಪನಿಗಳ ಮೇಲಿನ ಅವಲಂಬನೆಯನ್ನು ಹೆಚ್ಚಿಸಬಾರದು ಎಂಬುದು ತಮ್ಮ ಸ್ಪಷ್ಟ ಅಭಿಮತವಾಗಿದೆ. ಡಿಎಂಹೆಚ್–11 ಸಾಸಿವೆ ಒಂದು ಹೈಬ್ರೀಡ್ ಬೀಜ (ಬೀಜ ತಳಿ ಅಲ್ಲ) ವಾಗಿದ್ದು ಪ್ರತಿ ಬೆಳೆ ಅವಧಿಯಲ್ಲಿ ರೈತರು ಹೊಸದಾಗಿಯೇ ಖರೀದಿಸಬೇಕಿರುತ್ತದೆ. ಸಾರ್ವಜನಿಕ ವಲಯದಲ್ಲೇ ಅಭಿವೃದ್ಧಿಪಡಿಸಿದರೂ ಈ ಹೈಬ್ರೀಡ್ ಬೀಜಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಲು ಖಾಸಗಿ ಕಂಪನಿಗಳಿಗೆ ಈ ತಂತ್ರಜ್ಞಾನವನ್ನು ಹಸ್ತಾಂತರಿಸುವ ಸಾಧ್ಯತೆ ಇದೆ. ಈಗಲೂ ಈ ಬೀಜಗಳು ಅತ್ಯಂತ ಕಡಿಮೆ ವೆಚ್ಚದಲ್ಲಿ ರೈತರಿಗೆ ದೊರಕುವಂತೆ ಖಾತ್ರಿಪಡಿಸಲು ಯಾವುದೇ ಸಾಂಸ್ಥಿಕ, ನಿಯಂತ್ರಕ ಚೌಕಟ್ಟುಗಳು ಇಲ್ಲ.

ಗಂಡು ಸಾಸಿವೆ ಹಾಗೂ ಹೆಣ್ಣು ಸಾಸಿವೆ ನಡುವೆ ತಳಿ ಸಂಕರಣ ಸಾಧ್ಯವಾಗುವಂತೆ ಜೈವಿಕವಾಗಿ ಮಾರ್ಪಡಿಸಿದ ಡಿಎಂಹೆಚ್–11 ಹೈಬ್ರೀಡ್ ಬೀಜಗಳ ಅಭಿವೃದ್ಧಿಯು ಇಳುವರಿ ಹೆಚ್ಚಳವನ್ನು ಹಾಗೂ ಕಳೆನಾಶಕಕ್ಕೆ ಪ್ರತಿರೋಧಕ ವನ್ನು ಪರಿಚಯಿಸಿದೆ. ಇಳುವರಿ ಹೆಚ್ಚಳದ ಉದ್ದೇಶ ಮುಖ್ಯವಾಗಿರುವಾಗಲೇ ಕಳೆನಾಶಕಕ್ಕೆ ಪ್ರತಿರೋಧದ ವಿಷಯವನ್ನು ಬಹಳ ಎಚ್ಚರಿಕೆಯಿಂದ ಪರಿಗಣಿಸಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಭಾರತವು ಅತಿ ಹೆಚ್ಚು ವಿಷಕಾರಿ ಕಳೆನಾಶಕಗಳ ಬಳಕೆಯನ್ನು ಕಂಡಿದೆ. ನಿಯಂತ್ರಣ ಹಾಗೂ ವಿಸ್ತರಣಾ ವ್ಯವಸ್ಥೆಯ ದುರ್ಬಲವಾಗಿರುವಾಗ, ಕಳೆನಾಶಕ ಪ್ರತಿರೋಧ ತಳಿಗಳು ಆಹಾರ ಬೆಳೆಗಳಲ್ಲಿ ಅನಿಯಂತ್ರಿತವಾಗಿ ವಿಷಕಾರಿ ಕೃಷಿ ರಾಸಾಯನಿಕಗಳ ಬಳಕೆಯನ್ನು ಉತ್ತೇಜಿಸುವ ಅಪಾಯವನ್ನು ಎದುರಿಸಬೇಕಾಗಬಹುದು. ಕೀಟನಾಶಕಗಳ ಮಾರಾಟ ಹಾಗೂ ಬಳಕೆ ನಿಯಂತ್ರಣದ ಕಾನೂನು ಅಂಶಗಳ ಜಾರಿ ಬಹಳ ಪೇಲವವಾಗಿದೆ. ಬಾಯರ್ ನಂತಹ ಬಹುರಾಷ್ಟ್ರೀಯ ಕೃಷಿ ರಾಸಾಯನಿಕ ತಯಾರಿಕೆ ಕಂಪನಿಗಳು ತಾವು ಹೊಂದಿರುವ ಬಹಳ ವ್ಯಾಪಕವಾದ ಕೀಟನಾಶಕ ಡೀಲರ್ ಗಳ ಮೂಲಕ ರೈತರನ್ನು ತಮ್ಮ ದುಬಾರಿಯಾದ ಹಾಗೂ ತೀವ್ರ ವಿಷಕಾರಿ ಕೀಟನಾಶಕಗಳನ್ನು ಬಳಸುವಂತೆ ಮಾಡಬಲ್ಲವು. ರೋಗ ಮತ್ತು ಕೀಟಗಳ ಬಾಧೆಗೆ ತುತ್ತಾದ ಬೆಳೆಗಳ ರೈತರನ್ನು ದುಬಾರಿ ಕೀಟನಾಶಕಗಳ ಮಾರಾಟದ ತಮ್ಮದೇ ಆದ ಪಟ್ಟಭದ್ರ ಹಿತಾಸಕ್ತಿಗಳನ್ನು ಹೊಂದಿರುವ ಡೀಲರ್ ಗಳು ಸುಲಭವಾಗಿ ಪ್ರಲೋಭನೆಗೆ ಒಳಪಡಿಸುವರು. ತತ್ಪರಿಣಾಮವಾಗಿ ರೈತರು ಆಗಾಗ್ಗೆ ನಿರ್ದಿಷ್ಟ ಸಮಸ್ಯೆಗೆ ತಕ್ಕ ಪರಿಹಾರ ಅಲ್ಲದಿದ್ದರೂ ಕೀಟನಾಶಕಗಳ ಮೇಲೆ ವಿಪರೀತ ಹಣವನ್ನು ಖರ್ಚು ಮಾಡಬೇಕಾಗಿ ಬರಬಹುದು. ಈ ವಿಷಕಾರಿ ಕೃಷಿ ರಾಸಾಯನಿಕಗಳು ರೈತರ, ಕೃಷಿಕೂಲಿಕಾರರ ಹಾಗೂ ಗ್ರಾಹಕರ ಆರೋಗ್ಯದ ಮೇಲೂ ಕೂಡ ದುಷ್ಪರಿಣಾಮಗಳನ್ನು ಬೀರುತ್ತವೆ. ಈ ಹಿನ್ನೆಲೆಯಲ್ಲಿ ಇಂತಹ ಕಳೆನಾಶಕ ಔಷಧಿ–ಸ್ನೇಹಿ ತಳಿಗಳನ್ನು ಉತ್ತೇಜಿಸುವಾಗ ಪ್ರಯೋಜನ ಹಾಗೂ ಸಂಭವನೀಯ ಕಂಟಕಗಳ ಕುರಿತು ಪೂರ್ಣ ಮಾಹಿತಿಗಳು ಎಲ್ಲರಿಗೂ ದೊರೆಯುವಂತೆ ಮಾಡಬೇಕಾಗಿದೆ.

ಸಾರ್ವಜನಿಕವಾಗಿ ಲಭ್ಯ ಇರುವ ಮಾಹಿತಿಗಳ ಪ್ರಕಾರ ಕಳೆನಾಶಕ ಪ್ರತಿರೋಧದ ಅಂಶಗಳು ಇಲ್ಲದ ಹೆಚ್ಚು ಇಳುವರಿ ಹೈಬ್ರೀಡ್ ಅನ್ನು ದೆಹಲಿ ವಿಶ್ವವಿದ್ಯಾಲಯದ ಬೆಳೆ ಸಸ್ಯಗಳ ಜೈವಿಕ ಮಾರ್ಪಾಡು ವಿಭಾಗ ತಯಾರಿಸಿದೆಯಾ ಅಥವಾ ತಯಾರಿಸಬಹುದಾ ಎಂಬುದು ಸ್ಪಷ್ಟವಾಗಿಲ್ಲ. ವಿಷಕಾರಿ ಕಳೆನಾಶಕಗಳ ಬಳಕೆ ಉತ್ತೇಜಿಸದೇ ಇಂತಹ ಬೀಜಗಳು ಇಳುವರಿ ಹೆಚ್ಚಳದ ಪ್ರಯೋಜನ ಉಂಟು ಮಾಡಬಹುದೇ ಎಂಬುದು ಕೂಡ ಸ್ಪಷ್ಟವಾಗಿಲ್ಲ. ಹಾಗಾಗಿ ಅಗತ್ಯಾನುಸಾರ ಈ ದಿಕ್ಕಿನಲ್ಲಿ ಮತ್ತಷ್ಟು ಸಂಶೋಧನೆ ನಡೆಸಬೇಕಾಗಿದೆ.

ಡಿಎಂಹೆಚ್ –11 ಪರಿಚಯದಿಂದ ಆಗುವ ಜೈವಿಕ ಪರಿಸರ ಹಾಗೂ ಆರೋಗ್ಯ ಸಂಬಂಧಿ ದುಷ್ಪರಿಣಾಮಗಳ ಬಗ್ಗೆ ಕೂಡ ಟೀಕೆಗಳು ಕೇಳಿಬಂದಿವೆ. ಇವುಗಳನ್ನು ವಸ್ತುನಿಷ್ಠ, ಕಠಿಣ ಹಾಗೂ ಪಾರದರ್ಶಕ ವೈಜ್ಞಾನಿಕ ಪುರಾವೆಗಳ ಆಧಾರದಿಂದ ಪರಿಶೀಲಿಸಿ, ಉತ್ತರಿಸಬೇಕು. ಬಿಜೆಪಿ ಸರ್ಕಾರ ಈ ಎಲ್ಲಾ ಆಯಾಮಗಳ ಬಗ್ಗೆ ಯಾವುದೇ ಆತಂಕ–ಅನುಮಾನಕ್ಕೆ ಎಡೆ ಇಲ್ಲದಂತೆ ಸ್ಪಷ್ಟತೆಯನ್ನು ಪಡೆದುಕೊಳ್ಳಬೇಕು; ಅಲ್ಲಿಯವರೆಗೆ ಜಿಎಂ ಸಾಸಿವೆ ಯನ್ನು ಯಾವುದೇ ರೀತಿಯಲ್ಲೂ ವಾಣಿಜ್ಯ ಬಳಕೆಗೆ ಅವಕಾಶ ನೀಡಲು ಆತುರ ತೋರಬಾರದು ಎಂದು ಅಖಿಲಭಾರತ ಕಿಸಾನ್ ಸಭಾ ಆಗ್ರಹಿಸಿದೆ.

ಹಿರಿಯ ಮಹಿಳಾ ಹಕ್ಕುಗಳ ಹೋರಾಟಗಾರ್ತಿ

ಇಳಾಬೇನ್ ಭಟ್ ನಿಧನಕ್ಕೆ ಸಂತಾಪ



ಇಳಾಬೆನ್ ಭಟ್ 1980 ರ ದಶಕದಲ್ಲಿ ರಾಜ್ಯಸಭೆ ಮತ್ತು ಯೋಜನಾ ಆಯೋಗದ ಸದಸ್ಯರಾಗಿದ್ದರು, ಅವರು ವಿಶ್ವಬ್ಯಾಂಕ್‌ನ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದರು, ಅವರು 1972 ರಲ್ಲಿ 'ಸೇವ' (ಎಸ್.ಇ.ಡಬ್ಲ್ಯು.ಎ.– ಸ್ವ–ಉದ್ಯೋಗಿ ಮಹಿಳಾ ಸಂಘ)) ವನ್ನು ಸ್ಥಾಪಿಸಿದರು. ಇದು ದುಡಿಯುವ ಮಹಿಳೆಯರಿಗಾಗಿ ಕೆಲಸ ಮಾಡುವ ಅತಿದೊಡ್ಡ ಸಹಕಾರಿ ಸಂಸ್ಥೆಗಳಲ್ಲಿ ಒಂದಾಗಿದ್ದು, ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯ ಒಂದು ಮಹತ್ವದ ತುಕಡಿಯಾಗಿದೆ ಎಂದಿರುವ ಸಿಐಟಿಯು ಅವರ ನಿಧನದ ದುಃಖವನ್ನು 'ಸೇವ'ದ ಮುಖಂಡರು ಮತ್ತು ಸದಸ್ಯರೊಂದಿಗೆ ಹಂಚಿಕೊಳ್ಳುತ್ತ ದುಃಖತಪ್ತ ಕುಟುಂಬದ ಸದಸ್ಯರಿಗೆ ಸಂತಾಪವನ್ನು ವ್ಯಕ್ತಪಡಿಸಿದೆ.

ಗುಜರಾತ್‌ನ ಮೋರ್ಬಿ ಸೇತುವೆಯಲ್ಲಿ ಮಾನವ ದುರಂತ ಅತ್ಯುನ್ನತ ಮಟ್ಟದಲ್ಲಿ ಹೊಣೆಗಾರಿಕೆಯನ್ನು ನಿಗದಿ ಪಡಿಸಲು ತನಿಖೆಗೆ ಆಗ್ರಹ

ಗುಜರಾತಿನ ಮೋರ್ಬಿಯಲ್ಲಿ ಸೇತುವೆ ಕುಸಿದು ಸಾವನ್ನಪ್ಪಿದ 141 ಜನರ ಕುಟುಂಬಗಳಿಗೆ ಸಿಐಟಿಯು ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ ಮತ್ತು ಸಂತಾಪ ವ್ಯಕ್ತಪಡಿಸುತ್ತದೆ. ಸೇತುವೆ ಕುಸಿತ ದುರಂತದಲ್ಲಿ ಸಾವಿನ ಸಂಖ್ಯೆ ಏರುತ್ತಿದೆ; ಬಲಿಯಾದವರಲ್ಲಿ 47 ಮಕ್ಕಳು ಮತ್ತು 50 ಕ್ಕೂ ಹೆಚ್ಚು ಮಹಿಳೆಯರು.

ಈ ದುರಂತ ಘಟನೆಯು ಮತ್ತೊಮ್ಮೆ ರಾಜ್ಯ ಮತ್ತು ಕೇಂದ್ರದಲ್ಲಿ ಸಾರ್ವಜನಿಕ ಮೂಲಸೌಕರ್ಯ ನಿರ್ವಹಣೆಯನ್ನು ಖಾಸಗಿ ಕಾರ್ಪೊರೇಟ್ ಗುತ್ತಿಗೆದಾರರಿಗೆ ಹಸ್ತಾಂತರಿಸುವ ವಿನಾಶಕಾರಿ ಪರಿಣಾಮವನ್ನು ಮತ್ತೊಮ್ಮೆ ಬಹಿರಂಗಪಡಿಸಿತು, ಅದು ಕೂಡ ರಾಜ್ಯ–ಕಾರ್ಯನಿರ್ವಹಣೆಯ ಇಲಾಖೆಗಳಿಂದ ಉದಾರವಾದ ಅನಿಯಂತ್ರಿತ ಸ್ವರೂಪಗಳಲ್ಲಿ ಸಾಮೂಹಿಕ ಮಾನವ ನಷ್ಟದ ವಿನಾಶಕಾರಿ ಪರಿಣಾಮಗಳನ್ನು ಹೊಂದಿದೆ. ಅಈಐ ಬಲ್ಬ್‌ಗಳು, ಗೋಡೆ ಗಡಿಯಾರಗಳು ಮತ್ತು ಇ–ಬೈಕ್‌ಗಳನ್ನು ತಯಾರಿಸುವಲ್ಲಿ ಪರಿಣತಿ ಹೊಂದಿರುವ ಕಂಪನಿಯು, ಸಂಬಂಧಪಟ್ಟ ಕ್ಷೇತ್ರದಲ್ಲಿ ಯಾವುದೇ ಸ್ಪಷ್ಟವಾದ ಪರಿಣತಿ ಅಥವಾ ಟ್ರ್ಯಾಕ್ ರೆಕಾರ್ಡ್ ಅನ್ನು ಹೊಂದಿರದ ಕಂಪನಿಯು ಅನಾರೋಗ್ಯದ ನೇತಾಡುವ ಸೇತುವೆಯನ್ನು 15 ವರ್ಷಗಳ ಕಾಲ ದುರಸ್ತಿ ಮಾಡಲು ಮತ್ತು ನಿರ್ವಹಿಸಲು ಮತ್ತು ಟಿಕೆಟ್‌ಗಳನ್ನು ಚಾರ್ಜ್ ಮಾಡುವ ಗುತ್ತಿಗೆಯನ್ನು ನೀಡಿತು. ವ್ಯಾಪ್ತಿಯ ರೂ. 10 ರಿಂದ ರೂ. ಇದರ ಬಳಕೆಗೆ 15 ರೂ. ಸೇತುವೆಯ ಫಿಟ್ನೆಸ್ ಬಗ್ಗೆ ಪ್ರಶ್ನೆಗಳಿವೆ; ಖಾಸಗಿ ಕಂಪನಿಯು ಮೋರ್ಬಿ ಪುರಸಭೆಯ ಆಡಳಿತದಿಂದ ಪಾಲಿಕೆಯಿಂದ ನೀಡಬೇಕಾದ ಫಿಟ್‌ನೆಸ್ ಪ್ರಮಾಣಪತ್ರವನ್ನು ಪಡೆದಿಲ್ಲ, ಅದರ ಬಳಕೆಯ ಯೋಗ್ಯತೆಯನ್ನು ಪರಿಶೀಲಿಸಿದ ನಂತರ. ಇವೆಲ್ಲವೂ ವಿವಿಧ ಹಂತಗಳಲ್ಲಿ ಆಡಳಿತದ ಪ್ರಮುಖ ವೈಫಲ್ಯವನ್ನು ಸೂಚಿಸುತ್ತವೆ. ಗುಜರಾತ್ ರಾಜ್ಯ ಸರ್ಕಾರವು ರಾಜ್ಯ ಲೋಕೋಪಯೋಗಿ ಇಲಾಖೆಯನ್ನು ತೊಡಗಿಸಿಕೊಂಡು ಸರಿಯಾದ ದುರಸ್ತಿ ಮತ್ತು ನಿರ್ವಹಣೆಯನ್ನು ಮಾಡಿದ್ದರೆ, ದುರಂತ ಮಾನವ ನಷ್ಟವನ್ನು ತಪ್ಪಿಸಬಹುದಿತ್ತು. ಗುಜರಾತಿನ ಮುಖ್ಯಮಂತ್ರಿಯೂ ಸಹ ರಾಜ್ಯದ ನಗರಾಭಿವೃದ್ಧಿ ಸಚಿವರಾಗಿದ್ದಾರೆ ಮತ್ತು ಇದು ಅವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದೆ ಎಂಬುದನ್ನು ಸಹ ಗಮನಿಸಬೇಕು. ಅನಾಹುತಕ್ಕೆ ಮುಖ್ಯಮಂತ್ರಿಗಳೇ ಹೊಣೆಯಾಗಬೇಕು.

ಸಾಮೂಹಿಕ ಜೀವಹಾನಿಗೆ ಶೋಕ ಮತ್ತು ಸಂತಾಪ ಸೂಚಿಸುವ ಸಂದರ್ಭದಲ್ಲಿ, ಸಿಐಟಿಯು ಆ ಭೀಕರ ಘಟನೆಯನ್ನು ತನಿಖೆ ಮಾಡಲು ಮತ್ತು ಹೊಣೆಗಾರಿಕೆಯನ್ನು ಸರಿಪಡಿಸಲು ಇಡೀ ವಿಷಯದ ಬಗ್ಗೆ ಸಂಪೂರ್ಣ ಉನ್ನತ ಮಟ್ಟದ ನ್ಯಾಯಾಂಗ ತನಿಖೆಗೆ ಒತ್ತಾಯಿಸುತ್ತದೆ. ಗುತ್ತಿಗೆ ಕಂಪನಿಯ ಕೆಲವು ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿಯನ್ನು ಬಂಧಿಸುವುದು ಕೇವಲ ಅಂದಿನ ಸರ್ಕಾರದ ಅಮಾನವೀಯ ನಿರ್ಲಕ್ಷ್ಯ ಮತ್ತು ನಿರ್ದಾಕ್ಷಿಣ್ಯತೆಯನ್ನು ಮುಚ್ಚಿಹಾಕುತ್ತದೆ. ಸಾರ್ವಜನಿಕ ಮೂಲಸೌಕರ್ಯಗಳ ದುರಸ್ತಿ ಮತ್ತು ನಿರ್ವಹಣೆ ಮತ್ತು ಕಾರ್ಯಾಚರಣೆಗಾಗಿ ಗುತ್ತಿಗೆಯ ಹೆಸರಿನಲ್ಲಿ ಖಾಸಗೀಕರಣವನ್ನು ನಿಲ್ಲಿಸಲು **CITU** ಮತ್ತೊಮ್ಮೆ ತನ್ನ ಬೇಡಿಕೆಯನ್ನು ಪುನರುಚ್ಚರಿಸುತ್ತದೆ. ಸಿಐಟಿಯು ಸಾರ್ವಜನಿಕ ಹೂಡಿಕೆಗಳನ್ನು ಮತ್ತು ಲೋಕೋಪಯೋಗಿ ಇಲಾಖೆಗಳನ್ನು ಬಲಪಡಿಸುವಲ್ಲಿ ರಾಜ್ಯ ಮಧ್ಯಸ್ಥಿಕೆಗೆ ಒತ್ತಾಯಿಸುತ್ತದೆ.

ಚನ್ನರಾಯಪಟ್ಟಣ ಭೂ ಹೋರಾಟಕ್ಕೆ ತುಂಬು ಏಳು ತಿಂಗಳು..!

ಪುಟ 10 ರಿಂದ

15 ರಂದು ಜೈ ಜವಾನ್ ಜೈ ಕಿಸಾನ್ ಘೋಷಣೆಯೊಂದಿಗೆ ಮೆರವಣಿಗೆಯನ್ನು ಯೋಜಿಸಿದರು. ಆಗಸ್ಟ್ 25 ರಂದು ರೈತರ ಮೇಲಿನ ಪೊಲೀಸ್ ದೌರ್ಜನ್ಯ ಖಂಡಿಸಿ ಜಿಲ್ಲಾಧಿಕಾರಿಗಳ ಕಚೇರಿಯೆದುರು ಬೃಹತ್ ಪ್ರತಿಭಟನೆ ಹಮ್ಮಿಕೊಂಡರು. ವಿಧಾನಸಭೆಯ ಅಧಿವೇಶನ ಪ್ರಾರಂಭವಾದ ಸೆಪ್ಟೆಂಬರ್ 13 ರಿಂದ ಆರಂಭಿಸಿ ಹತ್ತು ದಿನಗಳ ಕಾಲ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಹಗಲಿರುಳು ಧರಣಿ ನಡೆಸಿದರು. ಹೋರಾಟ 200ನೆ ದಿನ ತಲುಪುತ್ತಿದ್ದಂತೆ ಚನ್ನರಾಯಪಟ್ಟಣದಲ್ಲಿ ಖಾತೆದಾರರ ಸಮಾವೇಶ ಜರುಗಿಸಿದರು. ಸುರಿವ ಮಳೆಯಲ್ಲೂ ನೂರಾರು ರೈತರು ಸಮಾವೇಶದಲ್ಲಿ ದಾಖಲೆಗಳ ಸಮೇತ ಭಾಗವಹಿಸಿದರು.

ಇಷ್ಟಾದರು ಕುತಂತ್ರಗಳನ್ನು ರೂಪಿಸುತ್ತ ರೈತರನ್ನು ಮತ್ತವರ ಒತ್ತಾಯಗಳನ್ನು ನಗಣ್ಯಗೊಳಿಸುತ್ತಿರುವ ಸರ್ಕಾರವನ್ನು ಮಣಿಸಬೇಕು ಇಲ್ಲವೆ ಕಿತ್ತೊಗೆಯಬೇಕು ಎನ್ನುವ ದೃಢ ನಿರ್ಧಾರದೊಂದಿಗೆ ಹೋರಾಟ ಸಾಗುತ್ತಿದೆ. ಕರ್ನಾಟಕದ ರೈತ ಚಳವಳಿಯ ಇತಿಹಾಸದ ಪುಟಗಳಲ್ಲಿ ದಾಖಲಾಗ ಹೊರಟಿರುವ ಈ ಹೋರಾಟಕ್ಕೆ ಇಡೀ ರಾಜ್ಯದ ಪ್ರಜ್ಞಾವಂತರು, ರೈತರು ಸರ್ವರೀತಿಯಲ್ಲೂ ಬೆಂಬಲ ನೀಡಬೇಕಾಗಿದೆ. ಅನ್ನದಾತರ ಹೋರಾಟ ಗೆಲ್ಲಬೇಕಿದೆ. ರೈತರ ಹೋರಾಟಗಳ ಗೆಲುವಿನಲ್ಲಿ ನಮ್ಮ ಗೆಲುವೂ ಇದೆ ಎಂದರಿತು ರಾಜ್ಯದ ಕಾರ್ಮಿಕರು ರೈತರ ಭುಜಕ್ಕೆ ಭುಜ ಆನಿಸಿ ಹೋರಾಟವನ್ನು ಯಶಸ್ಸಿನ ದಡಕ್ಕೆ ತಲುಪಿಸಬೇಕಿದೆ. ರೈತರ ಉಳಿವು ನಮ್ಮ ಉಳಿವಿನ ಪ್ರಶ್ನೆಯೂ ಆಗಿ ನಮ್ಮೆದುರಿಗಿದೆ.

(ದೊಡ್ಡಬಳ್ಳಾಪುರ ತಾಲ್ಲೂಕಿನ ಭೂ ಹೋರಾಟ– ಮುಂದಿನ ವಾರಕ್ಕೆ ಮುಂದುವರೆಯಲಿದೆ)

ರಾಜ್ಯಪಾಲರುಗಳ ಅಸಂವಿಧಾನಿಕ ನಡೆಗಳ ವಿರುದ್ಧ ಬಿಜೆಪಿಯೇತರ ಜಾತ್ಯತೀತ ಪಕ್ಷಗಳ ಅಣಿನೆರಿಕೆ: ಯೆಚೂರಿ



ಕೇಂದ್ರ –ರಾಜ್ಯ ಸಂಬಂಧಗಳನ್ನು ಬುಡಮೇಲು ಮಾಡುವ ಪ್ರಯತ್ನಗಳಲ್ಲಿ ಈಗ ರಾಜ್ಯಪಾಲರುಗಳನ್ನು ತೊಡಗಿಸಲಾಗುತ್ತಿದೆ. ಬಿಜೆಪಿಯೇತರ ಸರಕಾರಗಳು ಇರುವ ರಾಜ್ಯಗಳಲ್ಲಿ ರಾಜ್ಯಪಾಲರುಗಳು ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಅಜೆಂಡಾವನ್ನು ಮುಂದೊಯ್ಯಲು ಕೆಲಸ ಮಾಡುತ್ತಿದ್ದಾರೆ. ಇದು ಇತ್ತೀಚೆಗೆ ಕೇರಳದಲ್ಲಿ ರಾಜ್ಯಪಾಲರ ಹುದ್ದೆಗೆ ತಕ್ಕುದಲ್ಲದ ಕೃತ್ಯಗಳಿಂದ ಮತ್ತೆ ಮುನ್ನೆಲೆಗೆ ಬಂದಿದೆ. ಇದನ್ನು ಬಲವಾಗಿ ಖಂಡಿಸುತ್ತ ಸಿಪಿಐ(ಎಂ) ಎಲ್ಲಾ ಬಿಜೆಪಿಯೇತರ ಜಾತ್ಯತೀತ ಪ್ರಜಾಸತ್ತಾತ್ಮಕ ಪಕ್ಷಗಳನ್ನು, ವಿಶೇಷವಾಗಿ ರಾಜ್ಯಗಳಲ್ಲಿ ಸರ್ಕಾರಗಳಿಗೆ ನೇತೃತ್ವ ಕೊಡುತ್ತಿರುವ ಪಕ್ಷಗಳನ್ನು, ರಾಜ್ಯಪಾಲರುಗಳ ಇಂತಹ ಪ್ರಜಾಪ್ರಭುತ್ವ ವಿರೋಧಿ ಸಂವಿಧಾನ ವಿರೋಧಿ ಕೃತ್ಯಗಳ ವಿರುದ್ಧ ಒಗ್ಗೂಡಿಸಲು ಪ್ರಯತ್ನಿಸುತ್ತದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದರು.

ಅವರು ನವದೆಹಲಿಯಲ್ಲಿ ಅಕ್ಟೋಬರ್ 29, 30 ಮತ್ತು 31, 2022 ರಂದು ನಡೆದ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆಯ ಚರ್ಚೆಗಳು ಮತ್ತು ನಿರ್ಧಾರಗಳನ್ನು ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ ಇದನ್ನು ತಿಳಿಸಿದರು.

ಮೊರ್ಬಿ ಸೇತುವೆ ದುರಂತದಲ್ಲಿ 140 ಜನರ ಪ್ರಾಣ ಹೋಗಿರುವುದರ ಬಗ್ಗೆ ಖೇದ ವ್ಯಕ್ತಪಡಿಸುತ್ತ ಕೇಂದ್ರ ಸಮಿತಿ ಈ ಕುರಿತು ಉನ್ನತ ಮಟ್ಟದ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿದೆ. ಈ ಬಗ್ಗೆ ಮಾತಾಡುತ್ತ ಯೆಚುರಿಯವರು, ಈ ಸೇತುವೆಯ ನವೀಕರಣದ ಕೆಲಸವನ್ನು ಗೋಡೆ ಗಡಿಯಾರ ತಯಾರಿಸುವ ಒಂದು ಖಾಸಗಿ ಕಂಪನಿಗೆ ಕೊಡಲಾಗಿದ್ದು, ಅದು ಸುರಕ್ಷತೆಯ ಪರಿಶೋಧನೆ ನಡೆಸದೆ ಇದನ್ನು ಸಾರ್ವಜನಿಕರಿಗೆ ತೆರೆದಿದೆ, ಮೋದಿ ಸರಕಾರ ಬಂದ ನಂತರ ಇಂತಹ ಘಟನೆಗಳು ಮತ್ತೆ–ಮತ್ತೆ ನಡೆಯುತ್ತಿವೆ, ಕೆಲವು ಸಮಯದ ಹಿಂದೆ ಬುಂದೇಲಖಂಡ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ಪ್ರಧಾನಿಗಳು ಉದ್ಘಾಟಿಸಿದ ಐದೇ ದಿನಗಳಲ್ಲಿ ಅದು ಕುಸಿದ ಸುದ್ದಿ ಬಂದಿತ್ತು. ಇಂತಹ ಕಾಮಗಾರಿಗಳನ್ನು ಎಂತಹ ಖಾಸಗಿಯವರಿಗೆ ಹೇಗೆಲ್ಲ ಕೊಡಲಾಗುತ್ತಿದೆ ಎಂಬುದು ಆತಂಕವುಂಟು ಮಾಡುವ ಸಂಗತಿಯಾಗುತ್ತಿದೆ, ಏಕೆಂದರೆ ಇದರಲ್ಲಿ ಸಾಮಾನ್ಯ ಜನರ ಪ್ರಾಣಗಳಿಗೇ ಸಂಚಕಾರ ಬರುತ್ತಿದೆ. ಮೊರ್ಬಿ ಘಟನೆಯಲ್ಲಂತೂ ಪೀಡಿತರ ನೆರವಿಗಿಂದ ಅಲ್ಲಿಗೆ ಪ್ರಧಾನಿಗಳ ಭೇಟಿಗೇ ಹೆಚ್ಚಿನ ಗಮನ ಕೇಂದ್ರೀಕರಿಸಿರುವ ಸುದ್ದಿಯಲ್ಲಿ ಅಮಾನವೀಯತೆಯ ಅಂಶವೂ ಕಾಣಬಂದಿರುವುದು ಖೇದದ ಸಂಗತಿ ಎಂದು ಅವರು ಹೇಳಿದರು.


ಇದಲ್ಲದೆ ಕೇಂದ್ರ ಸಮಿತಿ ಅರ್ಥವ್ಯವಸ್ಥೆಯ ಬಿಕ್ಕಟ್ಟು, ಅದರಿಂದ ಜನಗಳ ಮೇಲೆ ಹೆಚ್ಚುತ್ತಿರುವ ಹೊರೆಗಳು, ಜೀವನೋಪಾಯಗಳ ಮೇಲಷ್ಟೇ ಅಲ್ಲ, ಅವರ ಹಕ್ಕುಗಳ ಮೇಲೂ ಹೆಚ್ಚುತ್ತಿರುವ ದಾಳಿಗಳು, ಇದರ ನಡುವೆಯೇ ಕೋಮು ಧ್ರುವೀಕರಣದ ಪ್ರಯತ್ನಗಳಿಗೆ ಪ್ರಧಾನ ಮಂತ್ರಿಗಳೇ ನೇತೃತ್ವ ನೀಡುತ್ತಿರುವುದು ಇತ್ಯಾದಿ ಪ್ರಶ್ನೆಗಳ ಪರಾಮರ್ಶೆ ನಡೆಸಿತು ಎಂದು ಯೆಚುರಿ ತಿಳಿಸಿದರು. ಜನರ ಮೇಲೆ ಹೇರಲಾಗುತ್ತಿರುವ ಸಂಕಷ್ಟಗಳು ಮತ್ತು ಅವರ ನಿರ್ದಿಷ್ಟ 14 ಅಂಶಗಳ ಹಕ್ಕೊತ್ತಾಯಗಳ ಮೇಲೆ ಕಾರ್ಮಿಕ ಸಂಘಗಳು, ಕಿಸಾನ್ ಸಭಾ ಮತ್ತು ಕೃಷಿ ಕಾರ್ಮಿಕ ಸಂಘ ಕರೆ ಕೊಟ್ಟಿರುವ ದೇಶವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಮತ್ತು ಇವುಗಳ ಅಂತಿಮ ಘಟ್ಟವಾಗಿ ಏಪ್ರಿಲ್ 2023ರಲ್ಲಿ 'ಸಂಸದ್ ಚಲೋ'ಗೆ ಪಕ್ಷದ ಬೆಂಬಲವನ್ನು ಕೇಂದ್ರ ಸಮಿತಿಯು ವ್ಯಕ್ತಪಡಿಸಿದೆ.

ಸಭೆಯ ನಂತರ ನೀಡಿರುವ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಗುಜರಾತ್‌ನ ಮೊರ್ಬಿಯಲ್ಲಿ ಆಘಾತಕಾರಿ ಅಪಘಾತ: ಗುಜರಾತ್‌ನ ಮೊರ್ಬಿ ಪಟ್ಟಣದಲ್ಲಿ ಸೇತುವೆಯ ಕುಸಿತದ ದುರಂತದಲ್ಲಿ ಪ್ರಾಣ ಕಳಕೊಂಡ 140 ಕ್ಕೂ ಹೆಚ್ಚು ಜನರ ಕುಟುಂಬಗಳಿಗೆ ಕೇಂದ್ರ ಸಮಿತಿಯು ತನ್ನ ಆಳವಾದ ಸಂತಾಪವನ್ನು ವ್ಯಕ್ತಪಡಿಸಿದೆ. ಇನ್ನೂ ಹಲವರು ಗಾಯಗೊಂಡಿದ್ದಾರೆ. ಗಾಯಗೊಂಡವರಿಗೆ ಅಗತ್ಯವಿರುವ ಎಲ್ಲಾ ವೈದ್ಯಕೀಯ ಆರೈಕೆ ಮತ್ತು ಸಹಾಯವನ್ನು ತಕ್ಷಣವೇ ಒದಗಿಸಬೇಕು.

ಕಾರ್ಮಿಕರು, ರೈತರು, ಕೃಷಿ ಕೂಲಿಕಾರರ ಹೋರಾಟಗಳನ್ನು ಬೆಂಬಲಿಸಿ – ಕೇಂದ್ರ ಸಮಿತಿ ಕರೆ

ನವೀಕರಣದ ನಂತರ ಸುರಕ್ಷತಾ ಪರಿಶೋಧನೆ ನಡೆಸದೆ ಈ ಸೇತುವೆಯನ್ನು ತೆರೆಯಲಾಗಿದೆ ಎಂದು ವರದಿಯಾಗಿದೆ. ಇದಲ್ಲದೆ, ಯಾವುದೇ ಸಮಯದಲ್ಲಿ ಈ



ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ

ಸೇತುವೆಯ ಮೇಲೆ ಎಷ್ಟು ಜನರು ಹೋಗಲು ಅವಕಾಶ ಕೊಡಲಾಗುವುದು ಎಂಬುದರ ಮಿತಿಯನ್ನು ಘೋಷಿಸಿದ್ದು, ಅದನ್ನು ಅತ್ಯಂತ ದುಃಖಕರ ರೀತಿಯಲ್ಲಿ ಉಲ್ಲಂಘಿಸಲಾಗಿದೆ. ಇದಲ್ಲದೆ, ಈ ಪ್ರದೇಶದಲ್ಲಿ ಯಾವುದೇ ಹಿಂದಿನ ಅನುಭವವಿಲ್ಲದ ಕಂಪನಿಗೆ ನವೀಕರಣ ಗುತ್ತಿಗೆಯನ್ನು ನೀಡಲಾಯಿತು. ಈ ಎಲ್ಲ ಆಯಾಮಗಳನ್ನು ನೋಡುವಾಗ, ಹೊಣೆಗಾರಿಕೆಯನ್ನು ನಿಗದಿ ಪಡಿಸಲು ಉನ್ನತ ಮಟ್ಟದ ನ್ಯಾಯಾಂಗ ತನಿಖೆ ಅಗತ್ಯವಾಗಿದೆ.

ರಾಜ್ಯಪಾಲರಿಗೆ ತಕ್ಕುದಲ್ಲದ ಕೃತ್ಯಗಳು

ಎಲ್‌ಡಿಎಫ್ ಸರ್ಕಾರವನ್ನು ಅಸ್ಥಿರಗೊಳಿಸುವ ಆಡಳಿತಾರೂಢ ಬಿಜೆಪಿಯ ರಾಜಕೀಯ ಉದ್ದೇಶಗಳನ್ನು ಸಾಧಿಸಲು ಕೇರಳ ರಾಜ್ಯಪಾಲರು ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ. ಕೇರಳದ ವಿವಿಧ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳ ರಾಜೀನಾಮೆ ಮತ್ತು ನಂತರ ರಾಜ್ಯದ ಹಣಕಾಸು ಸಚಿವರ ರಾಜೀನಾಮೆಗೆ ಅವರು ಆಗ್ರಹಿಸಿದ ರೀತಿಗೆ ಭಾರತೀಯ ಸಂವಿಧಾನದ ಅನುಮೋದನೆ ಇಲ್ಲ. ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳ ಕುಲಪತಿಯಾಗಿ ರಾಜ್ಯಪಾಲರಿಗೆ ಅಂತಹ ಕ್ರಮಗಳನ್ನು ಪ್ರಾರಂಭಿಸಲು ರಾಜ್ಯ ಶಾಸಕಾಂಗವು ಅಂಗೀಕರಿಸಿದ ವಿಶ್ವವಿದ್ಯಾನಿಲಯ ಕಾಯಿದೆಗಳು ಯಾವುದೇ ಅಧಿಕಾರವನ್ನು ಕೊಟ್ಟಿಲ್ಲ.

ರಾಜ್ಯಪಾಲರ ಈ ಕ್ರಮಗಳು ಕೇರಳದ ಜಾತ್ಯತೀತ, ಪ್ರಜಾಸತ್ತಾತ್ಮಕ ಮತ್ತು ವೈಜ್ಞಾನಿಕ ಉನ್ನತ ಶಿಕ್ಷಣ ವ್ಯವಸ್ಥೆ ಹಿಂದುತ್ವದ ಸೈದ್ಧಾಂತಿಕ ಕಾರ್ಯಸೂಚಿಯ ಪ್ರಚಾರಕ್ಕೆ ಅನುಕೂಲವಾಗುವಂತೆ ಮಾಡುವ ಗುರಿಯನ್ನು ಹೊಂದಿವೆ. ಬಿಜೆಪಿ ಕೇಂದ್ರ ಸರ್ಕಾರವು ಇದೇ ಉದ್ದೇಶದಿಂದ ಜೆಎನ್‌ಯು, ಹೈದರಾಬಾದ್ ಮತ್ತು ಇತರ ಹಲವು ಕೇಂದ್ರೀಯ ವಿಶ್ವವಿದ್ಯಾಲಯಗಳನ್ನು ಗುರಿಯಾಗಿಸಿಕೊಂಡು ಬಂದಿದೆ. ರಾಜ್ಯಪಾಲರು ತೋರಿರುವ ಇಂತಹ ನಿರ್ಲಜ್ಜ ಪಕ್ಷಪಾತವನ್ನು ಕೇರಳದ ಜನರು ಒಗ್ಗಟ್ಟಿನಿಂದ ಪ್ರತಿರೋಧಿಸುತ್ತಾರೆ ಮತ್ತು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಎಲ್‌ಡಿಎಫ್ ಸರ್ಕಾರವನ್ನು ಅಸ್ಥಿರಗೊಳಿಸುವ ಎಲ್ಲಾ ಪ್ರಯತ್ನಗಳನ್ನು ಸೋಲಿಸುತ್ತಾರೆ.

ತಮಿಳುನಾಡು: ಆಡಳಿತಾರೂಢ ಡಿಎಂಕೆ ನೇತೃತ್ವದ ಜಾತ್ಯತೀತ ರಂಗದ ಸರ್ಕಾರದ ನಾಯಕರು ರಾಜ್ಯಪಾಲರು ಬಿಜೆಪಿಯ ಅಭಿಪ್ರಾಯವನ್ನು ಪ್ರತಿಬಿಂಬಿಸುವ ನೋಟಗಳನ್ನು ವ್ಯಕ್ತಪಡಿಸಿ ಅನಗತ್ಯ ವಿವಾದಗಳು ಮತ್ತು ಗೊಂದಲಗಳನ್ನು ಸೃಷ್ಟಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ರಾಜ್ಯಪಾಲರ ಹುದ್ದೆಯಲ್ಲಿರುವಾಗ ಸಂಪ್ರದಾಯಶರಣ ಮತ್ತು ವಿಷಪೂರಿತ ವಿಚಾರಗಳ ಅಭಿವ್ಯಕ್ತಿ ಸಂವಿಧಾನದ ಉಲ್ಲಂಘನೆಯಾಗಿದೆ.

ಸಿಪಿಐ(ಎಂ) ಕೇಂದ್ರ ಸಮಿತಿಯು ಎಲ್ಲಾ ಬಿಜೆಪಿಯೇತರ ಜಾತ್ಯತೀತ ಪ್ರಜಾಸತ್ತಾತ್ಮಕ ಪಕ್ಷಗಳಿಗೆ, ವಿಶೇಷವಾಗಿ ರಾಜ್ಯಗಳಲ್ಲಿ ಸರ್ಕಾರಗಳಿಗೆ ನೇತೃತ್ವ ಕೊಡುತ್ತಿರುವ ಪಕ್ಷಗಳಿಗೆ, ರಾಜ್ಯಪಾಲರ ಇಂತಹ ಪ್ರಜಾಪ್ರಭುತ್ವ ವಿರೋಧಿ ಸಂವಿಧಾನ ವಿರೋಧಿ ಕೃತ್ಯಗಳ ವಿರುದ್ಧ ಒಗ್ಗೂಡಬೇಕು ಮತ್ತು ಭಾರತೀಯ ಸಂವಿಧಾನದ ರಕ್ಷಣೆಯಲ್ಲಿ ಒಗ್ಗಟ್ಟಿನಿಂದ ಎದ್ದು ನಿಲ್ಲಬೇಕು ಎಂದು ಮನವಿ ಮಾಡುತ್ತದೆ.

ಒಕ್ಕೂಟ ತತ್ವವನ್ನು ದುರ್ಬಲಗೊಳಿಸಲಾಗುತ್ತಿದೆ: ನಮ್ಮ ಸಂವಿಧಾನದ ಮೂಲಭೂತ ಲಕ್ಷಣವಾದ ಒಕ್ಕೂಟತತ್ವ ಮತ್ತು ಚುನಾಯಿತ ರಾಜ್ಯ ಸರ್ಕಾರಗಳ ಹಕ್ಕುಗಳನ್ನು ದುರ್ಬಲಗೊಳಿಸಲು ಪ್ರಯತ್ನಗಳು ಹೆಚ್ಚುತ್ತಲೇ ಇವೆ. ಕಾನೂನು ಮತ್ತು ಸುವ್ಯವಸ್ಥೆ ರಾಜ್ಯ ಪಟ್ಟಿಯಲ್ಲಿರುವ ವಿಷಯವಾಗಿದೆ. ಪೊಲೀಸರಿಗೆ 'ಒಂದು ದೇಶ ಒಂದು ಸಮವಸ್ತ್ರ' ಎಂಬ ಮೋದಿಯವರ ಕರೆ ಇದನ್ನು ಉಲ್ಲಂಘಿಸುತ್ತದೆ.

ತೆಲಂಗಾಣದಲ್ಲಿ ಟಿಆರ್‌ಎಸ್ ಶಾಸಕರಿಗೆ ಭಾರಿ ಮೊತ್ತದ ಹಣ ಕೊಟ್ಟು ಬೇಟೆಯಾಡುವ ಬಿಜೆಪಿಯ ಪ್ರಯತ್ನಗಳಲ್ಲಿ ಕಂಡುಬರುವಂತೆ ಚುನಾಯಿತ ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸುವ ಪ್ರಯತ್ನಗಳು ಮುಂದುವರಿದಿವೆ.

ಆಳವಾದ ಬಿಕ್ಕಟ್ಟಿನಲ್ಲಿ ಭಾರತೀಯ ಅರ್ಥವ್ಯವಸ್ಥೆ

ಮೋದಿ ಸರ್ಕಾರದ ನೀತಿಗಳು ಬೆಳೆಯುತ್ತಿರುವ ಆರ್ಥಿಕ ಹಿಂಜರಿತದ ಪ್ರವೃತ್ತಿಗಳೊಂದಿಗೆ ಅರ್ಥವ್ಯವಸ್ಥೆಯನ್ನು ಆಳವಾದ ಬಿಕ್ಕಟ್ಟಿಗೆ ನೂಕುತ್ತಿವೆ. ಹಣಕಾಸು ವರ್ಷ 2023ಕ್ಕೆ ವಿಶ್ವ ಬ್ಯಾಂಕ್ ಮೂರನೇ ಬಾರಿಗೆ ಬೆಳವಣಿಗೆಯ ದರದ ಮುನ್ಸೂಚನೆಯನ್ನು ಕ್ಕೆ ಆರಂಭಿಕ ಶೇಕಡಾ 8.7 ರಿಂದ ಶೇಕಡಾ 6.5 ಕ್ಕೆ ಕಡಿತಗೊಳಿಸಿದೆ. ಅದೇ ರೀತಿಯಲ್ಲಿ, ಆರ್‌ಬಿಐ ಅದನ್ನು ಶೇಕಡಾ 7.8ರಿಂದ ಶೇಕಡಾ 7 ಕ್ಕೆ ಇಳಿಸಿದೆ. ಕೈಗಾರಿಕಾ ಬೆಳವಣಿಗೆಯು 18 ತಿಂಗಳ ಕನಿಷ್ಠ ಮಟ್ಟವನ್ನು ದಾಖಲಿಸಿದೆ ಮತ್ತು ಅಂಕಿಅಂಶಗಳ ಸಚಿವಾಲಯದ (ಅಕ್ಟೋಬರ್ 12) ಪ್ರಕಾರ ಕಳೆದ ವರ್ಷ ಶೇಕಡಾ 19.4ಕ್ಕೆ ಹೋಲಿಸಿದರೆ 8 ಪ್ರಮುಖ ವಲಯಗಳು ಶೇಕಡಾ 9.8 ರಷ್ಟು ಬೆಳವಣಿಗೆಯನ್ನು ಮಾತ್ರ ದಾಖಲಿಸಿವೆ.

ರೂಪಾಯಿ ಕುಸಿದಿದೆ, ವಿದೇಶಿ ವಿನಿಮಯ ಮೀಸಲು ಕುಸಿಯುತ್ತಿದೆ ಮತ್ತು ವ್ಯಾಪಾರ ಕೊರತೆ ದಾಖಲೆ ಮಟ್ಟಕ್ಕೆ ಏರುತ್ತಿದೆ.

ಜನರ ಮೇಲೆ ಅಸಹನೀಯ ಹೊರೆ

ಈ ಆಳಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟು ಜನರ ಜೀವನೋಪಾಯಗಳ ಮೇಲೆ ಹೆಚ್ಚೆಚ್ಚು ಸಂಕಟಗಳನ್ನು ಹೇರುತ್ತಿದೆ. ಹಬ್ಬದ ಋತುವಿನಲ್ಲಿಯೂ ನಿರುದ್ಯೋಗ ದರವು ಶೇಕಡಾ 7.8 ಕ್ಕೆ ಏರಿದೆ. ಇದರ ಹೊರತಾಗಿಯೂ, ಮೋದಿ ಸರ್ಕಾರವು ಮನರೇಗ ಯೋಜನೆಗೆ ಹಣವನ್ನು ಬಿಡುಗಡೆ ಮಾಡಲು ನಿರಾಕರಿಸಿದೆ ಮತ್ತು ಏಪ್ರಿಲ್ 1 ಮತ್ತು ಅಕ್ಟೋಬರ್ 21 ರ ನಡುವೆ ಸುಮಾರು 1.5 ಕೋಟಿ ಅರ್ಜಿದಾರರಿಗೆ ಕೆಲಸಗಳನ್ನು ನಿರಾಕರಿಸಿದೆ. ಹಣಕಾಸು ವರ್ಷ 2022ರಲ್ಲಿ 1.73 ಕೋಟಿ ಜನಗಳಿಗೆ ಕೆಲಸ ನಿರಾಕರಿಸಲಾಗಿದೆ. ಮತ್ತು ಹಣಕಾಸು ವರ್ಷ 2021ರಲ್ಲಿ 2.1 ಕೋಟಿ ಜನಗಳಿಗೆ ನಿರಾಕರಿಸಲಾಯಿತು. ಬಡತನವು ಬೆಳೆಯುತ್ತಿದೆ ಮತ್ತು ಜಾಗತಿಕ ಹಸಿವು ಸೂಚ್ಯಂಕವು ಭಾರತವನ್ನು 107/121 ಸ್ಥಾನದಲ್ಲಿದೆ, ಪರಿಸ್ಥಿತಿಯನ್ನು 'ಗಂಭೀರ' ಎಂದು ವರ್ಗೀಕರಿಸಲಾಗಿದೆ.

ಈ ಸಂಕಟಗಳ ಮೇಲೆ ಬೆನ್ನು ಮುರಿಯುವ ಬೆಲೆಯೇರಿಕೆ ಬರುತ್ತಿದೆ, ಗ್ರಾಹಕ ಬೆಲೆ ಸೂಚ್ಯಂಕ ಹಣದುಬ್ಬರವು ಸತತ 9 ತಿಂಗಳ ಕಾಲ ರಿಝರ್ವ್ ಬ್ಯಾಂಕ್ ನಿಗದಿಪಡಿಸಿಕೊಂಡಿರುವ ಮೇಲಿನ ಮಿತಿ ಅಂದರೆ 6%ವನ್ನು ದಾಟಿ ಹೋಗಿದೆ. ಆಹಾರ ಹಣದುಬ್ಬರ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿದೆ. ಬದುಕುಳಿಯಲು ಅತ್ಯವಶ್ಯವಾದ ಬೆಳೆ/ಹಿಟ್ಟು/ಅಕ್ಕಿಯ ಆಹಾರವು ಬಹುಪಾಲು ಜನರ ಕೈಗೆಟುಕದೆ ಹೋಗುತ್ತಿದ್ದರೆ, ಕೇಂದ್ರ ಗೋದಾಮುಗಳಲ್ಲಿ ಆಹಾರ ದಾಸ್ತಾನುಗಳು 5 ವರ್ಷಗಳ ಕನಿಷ್ಠ ಮಟ್ಟದಲ್ಲಿವೆ. ಆಹಾರದ ಕೊರತೆಯ ಅಪಾಯಗಳು ತೀವ್ರವಾಗಿ ಹೆಚ್ಚಾಗುತ್ತಿವೆ

ಕೋಮು ಧ್ರುವೀಕರಣ ತೀಕ್ಷ್ಣಗೊಳ್ಳುತ್ತಿದೆ

ಈ ಆರ್ಥಿಕ ವಿನಾಶದಿಂದಾಗಿ ಜನರ ಈ ಗೋಳುಗಳನ್ನು ಮತ್ತು ಅವರ ಸಂಕಷ್ಟಗಳನ್ನು ನಿರ್ಲಕ್ಷಿಸಿ, ಮೋದಿ ವೈಯಕ್ತಿಕವಾಗಿ ಜನರ ನಡುವೆ ಕೋಮು ವಿಭಜನೆಯನ್ನು ತೀಕ್ಷ್ಣಗೊಳಿಸುವ ಅಭಿಯಾನಗಳನ್ನು ನಡೆಸುತ್ತಿದ್ದಾರೆ. ಮಾಧ್ಯಮಗಳ ತುಂಬಾ ಬದರಿನಾಥ್ ಮತ್ತು ಅಯೋಧ್ಯೆಯಲ್ಲಿ ಮೋದಿಯವರ ಧಾರ್ಮಿಕ ಸಮಾರಂಭಗಳೇ ತುಂಬಿ ಹೋಗಿವೆ. ಒಂದಿಲ್ಲೊಂದು ನೆಪದಲ್ಲಿ ಮುಸ್ಲಿಮರ ಮೇಲೆ ಗುರಿಯಿಡುವುದು ಸಾಮಾನ್ಯ ಸಂಗತಿಯಾಗುತ್ತಿದೆ. ಮುಸ್ಲಿಮರು ಹೆಚ್ಚೆಚ್ಚು ಘೋರ ದೈಹಿಕ ಹಲ್ಲೆಗೆ ಒಳಗಾಗುತ್ತಿದ್ದಾರೆ. ವಿಷಪೂರಿತ ದ್ವೇಷ ಮತ್ತು ಹಿಂಸಾಚಾರದ ಪ್ರಚಾರ ಹೆಚ್ಚೆಚ್ಚು ಹರಡುತ್ತಿದೆ. ಗುಜರಾತಿನ ಖೇಡಾ ಎಂಬಲ್ಲಿ ಮುಸ್ಲಿಂ ಯುವಕರನ್ನು ಸಮವಸ್ತ್ರದಲ್ಲಿಲ್ಲದ ಪೊಲೀಸರು ಸಾರ್ವಜನಿಕವಾಗಿ ಥಳಿಸಿರುವುದು ಆಘಾತಕಾರಿಯಾಗಿದೆ.

ಕೋಮು ಧ್ರುವೀಕರಣ ಈ ರೀತಿ ತೀಕ್ಷ್ಣಗೊಳ್ಳುತ್ತಿರುವುದರ ವಿರುದ್ಧ ಜಾತ್ಯತೀತ ಶಕ್ತಿಗಳನ್ನು ಸಾಧ್ಯವಾದಷ್ಟು ವಿಶಾಲ ರೀತಿಯಲ್ಲಿ ಸಜ್ಜುಗೊಳಿಸಬೇಕೆಂಬ ಪಕ್ಷದ ಕರೆಯನ್ನು ಕೇಂದ್ರ ಸಮಿತಿಯು ಪುನರುಚ್ಚರಿಸಿತು.

ಜಮ್ಮು ಮತ್ತು ಕಾಶ್ಮೀರ

ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ

ಪುಟ 14 ಕ್ಕೆ

ಕೇರಳದಲ್ಲಿ 'ಇಷ್ಟ'ದಾಟ ರಾಜ್ಯಪಾಲರದ್ದೋ ಅಥವಾ...

ಕೇರಳದ ರಾಜ್ಯಪಾಲರು ಈಗ ಬಹಳಷ್ಟು ಸುದ್ದಿ ಮಾಡುತ್ತಿದ್ದಾರೆ, ಅದು ಅವರಿಗೆ 'ಇಷ್ಟ'ದ ಸಂಗತಿಯೋ ಅಥವ ಯಾರದ್ದೋ ಇಷ್ಟಕ್ಕಾಗಿ ಅದನ್ನು ಮಾಡುತ್ತಿದ್ದಾರೆಯೋ ಎಂಬ ಸಂದೇಹ ಹಲವರಿಗೆ ಉಂಟಾಗಿದೆ. ಕೇರಳ ವಿಧಾನಸಭೆ ಅಂಗೀಕರಿಸಿದ; ಕೇರಳ ವಿಶ್ವವಿದ್ಯಾಲಯ ಕಾಯ್ದೆ(ತಿದ್ದುಪಡಿ) ಮಸೂದೆಗೆ ಸಹಿಯನ್ನೂ ಹಾಕದೆ, ಅದನ್ನು ವಾಪಾಸು ಕೂಡ ಕಳಿಸದೆ ಅನಿರ್ದಿಷ್ಟಕಾಲದ ವರೆಗೆ ಇಟ್ಟುಕೊಳ್ಳಲು ಸಾಧ್ಯವಿಲ ಎಂದು ರಾಜ್ಯದ ಉನ್ನತ ಶಿಕ್ಷಣ ಸಚಿವೆ ಆರ್. ಬಿಂದುರವರು ಟಿಪ್ಪಣಿ ಮಾಡಿದಾಗ, ಅದು ತನ್ನ ಘನತೆಗೆ ಕುಂದು ತರುವ ಹೇಳಿಕೆ, ಇಂತಹ ಹೇಳಿಕೆಗಳನ್ನು ಸಚಿವರುಗಳು ನೀಡುತ್ತಿದ್ದರೆ ಅವರ ನೇಮಕದ ಬಗ್ಗೆ ತಮ್ಮ 'ಇಷ್ಟ'(ಪ್ಲೆಶರ್)ವನ್ನು ಹಿಂತೆದುಕೊಳ್ಳಬೇಕಾಗುತ್ತದೆ, ಅಂದರೆ ಅವರು ರಾಜೀನಾಮೆ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದ್ದರು. ಆದರೆ ರಾಜ್ಯಪಾಲರಿಗೆ ಈ ಅಧಿಕಾರ ಇಲ್ಲ, ಸಚಿವರುಗಳನ್ನು ಅವರು ನೇಮಿಸುವುದು ತಮ್ಮ 'ಇಷ್ಟ'ದಿಂದಲ್ಲ, ಮುಖ್ಯಮಂತ್ರಿಗಳ ಸಲಹೆಯಂತೆ, ಆದ್ದರಿಂದ ಅದೇ ಮುಖ್ಯ ಮಂತ್ರಿಗಳು ಸಲಹೆ ಮಾಡಿದರೆ ಮಾತ್ರವೇ ಅವರನ್ನು ವಜಾಮಾಡಲು ಅಥವ ರಾಜೀನಾಮೆ ನೀಡುವಂತೆ ಹೇಳಲು ಸಾಧ್ಯ ಎಂದು ಸಂವಿಧಾನ ಪರಿಣತರು ಮತ್ತು ಹಿರಿಯ ಸಂಪಾದಕರುಗಳೂ ಅವರಿಗೆ ನೆನಪಿಸಬೇಕಾಗಿ ಬಂತು.

ಇದನ್ನು ನೆನಪಿಸಿದ 'ದಿ ಹಿಂದು' ಸಂಪಾದಕೀಯ(ಅಕ್ಟೋಬರ್19) ರಾಜ್ಯಪಾಲರುಗಳ ಮೇಲೆ ರಾಜ್ಯ ವಿಧಾನಸಭೆ ರಚಿಸುವ ವಿಶ್ವವಿದ್ಯಾಲಯಗಳ ಕುಲಪತಿ ಸ್ಥಾನದ ಹೊರೆಯನ್ನು ಹಾಕಬಾರದು ಎಂದು ಕೇಂದ್ರ –ರಾಜ್ಯ ಸಂಬಂಧಗಳ ಪರಾಮರ್ಶೆಗೆ ನೇಮಿಸಿದ್ದ ಎಂ ಎಂ ಪೂಂಚಿ ಆಯೋಗ ಕೂಡ ಶಿಫಾರಸು ಮಾಡಿದ್ದನ್ನು ನೆನಪಿಸಿದೆ. ಆದ್ದರಿಂದ 'ಇಷ್ಟ'ದ ಮಾತಾಡಿ ಮಂತ್ರಿಗಳನ್ನು ತಾನು ವಜಾ ಮಾಡಬಹುದು ಎಂದು ಬೆದರಿಸುವುದು ರಾಜ್ಯಪಾಲರ ಹುದ್ದೆಯ ಘನತೆಗೂ ತಕ್ಕುದಲ್ಲ, ಮತ್ತು ಅದು ಸಂವಿಧಾನದ ಆಶಯದಲ್ಲೂ ಇಲ್ಲ ಎಂದೂ ಹೇಳಿದೆ.

'ದೇಶದ್ರೋಹ'ದ ಆಟ

ಆದರೂ ಅವರ ಇಷ್ಟದಾಟ ನಂತಿಲ್ಲ. ನಿಜ, ತಾನೇ ವಜಾಮಾಡುವಂತಿಲ್ಲ ಎಂಬ ಅರಿವು ಮೂಡಿದಂತೆ ಕಾಣುತ್ತದೆ. ಎಲ್‌ಡಿಎಫ್ ಸರಕಾರದ ಹಣಕಾಸು ಸಚಿವ ಕೆ.ಎನ್.ಬಾಲಗೋಪಾಲ್ ಅಕ್ಟೋಬರ್ 19ರಂದು ಕೇರಳ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಭೆಯಲ್ಲಿ ಮಾಡಿದ ಭಾಷಣ 'ದೇಶದ್ರೋಹಿ'ಯಾಗಿದೆ, ಆದ್ದರಿಂದ ಅವರು ತಮ್ಮ 'ಇಷ್ಟ'ವನ್ನು ಕಳಕೊಂಡಿದ್ದಾರೆ, ಅವರನ್ನು ಸಚಿವ ಸ್ಥಾನದಿಂದ ಕಿತ್ತುಹಾಕಿ ಎಂದು ರಾಜ್ಯಪಾಲರು ಮುಖ್ಯಮಂತ್ರಿಗಳಿಗೆ ಹೇಳಿದ್ದಾರೆ. ಆ ಭಾಷಣದ ಭಾಗಗಳನ್ನು 'ದಿ ಹಿಂದು' (ಅಕ್ಟೋಬರ್ 27) ಪ್ರಕಟಿಸಿದೆ. ಅದು ಹೀಗಿದೆ:

"ಶಿಕ್ಷಣದ ಪ್ರಜಾಪ್ರಭುತ್ವೀಕರಣದಿಂದ ಕೇರಳವು ಬಹಳಷ್ಟು ಪ್ರಯೋಜನ ಪಡೆದುಕೊಂಡಿದೆ. ಒಬ್ಬ ವಿದ್ಯಾರ್ಥಿಯಾಗಿ ನಾನು ಪಡೆದ ಅನುಭವವು ಬಹುತೇಕ ಕೇರಳ ವಿಶ್ವವಿದ್ಯಾಲಯದಿಂದ ಗಳಿಸಿದ್ದು. ನಾನು ರಾಜ್ಯಸಭಾ ಸದಸ್ಯನಾಗಿದ್ದಾಗ ಜವಾಹರ್ ಲಾಲ್ ನೆಹರೂ ವಿಶ್ವವಿದ್ಯಾಲಯ ಹಾಗೂ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯಗಳ ಸೆನೆಟ್ ಸದಸ್ಯನಾಗಿ ಕಾರ್ಯನಿರ್ವಹಿಸುವ ಅವಕಾಶ ಸಿಕ್ಕಿತ್ತು. ಮತ್ತು ಒಬ್ಬ ವಿದ್ಯಾರ್ಥಿ ಕಾರ್ಯಕರ್ತನಾಗಿ ಈ ನಮ್ಮ ದೇಶದ ಬಹುತೇಕ ಎಲ್ಲಾ ವಿಶ್ವವಿದಾಲಯಗಳನ್ನು ಭೇಟಿ ಮಾಡಿದ್ದೇನೆ.

"ನನಗೆ ಒಂದು ನಿರ್ದಿಷ್ಟ ಘಟನೆ ನೆನಪಾಗುತ್ತಿದೆ. ಮಿಡ್ನಾಪುರದಲ್ಲಿ ನಡೆದ ಎಸ್.ಎಫ್.ಐ.ನ ರಾಷ್ಟ್ರೀಯ ಸಮ್ಮೇಳನದಲ್ಲಿ ನಾನು ಅಖಿಲ ಭಾರತ ಅಧ್ಯಕ್ಷನಾಗಿ ಚುನಾಯಿತನಾಗಿದ್ದೆ. ಸಮ್ಮೇಳನ ಮುಗಿದ ಕೆಲವೇ ದಿನಗಳಲ್ಲಿ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಐದು ವಿದ್ಯಾರ್ಥಿಗಳು ಗೋಲಿಬಾರಿನಿಂದ ಹತ್ಯೆಗೊಳಗಾಗಿದ್ದರಿಂದ ಅಲ್ಲಿಗೆ ಹೋಗಬೇಕಾಗಿ ಬಂತು. ಅಲ್ಲಿ ಪರಿಸ್ಥಿತಿ ಬಿಗುವಿನಿಂದ ಕೂಡಿತ್ತು. ಅಲ್ಲಿ ವಿದ್ಯಾರ್ಥಿಗಳನ್ನು ಕೊಂದವರಾರು ಎಂದು ನಿಮಗೆ ಗೊತ್ತಾ? ಉಪಕುಲಪತಿಗಳ ಭದ್ರತಾ ಪಡೆಯವರು ಗೋಲಿಬಾರ್ ಮಾಡಿದ್ದರು. ಉತ್ತರ ಪ್ರದೇಶದಲ್ಲಿರುವ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ 50–60 ಭದ್ರತಾ ಪಡೆಯವರಿದ್ದರು. ಇದೇ ಪರಿಸ್ಥಿತಿ ಹಲವಾರು ಇತರ ವಿಶ್ವವಿದ್ಯಾಲಯಗಳಲ್ಲಿಯೂ ಇದೆ.

"ಆದ್ದರಿಂದ, ಅಂತಹ ರಾಜ್ಯಗಳಿಂದ ಬಂದಂಥವರಿಗೆ ಕೇರಳ ವಿಶ್ವವಿದ್ಯಾಲಯಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇ ಸರಿ! ಕೇರಳದ ವಿಶ್ವವಿದ್ಯಾಲಯಗಳು ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಿಸುವ ಸಂಸ್ಥೆಗಳಾಗಿದ್ದು ಶಿಕ್ಷಣಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಿಷಯಗಳನ್ನು ಎಲ್ಲಾ ವಿಭಾಗಗಳ ಜನರನ್ನೂ ಒಳಗೊಂಡು ಚರ್ಚಿಸಲಾಗುತ್ತದೆ. ಈ ವಿಶ್ವವಿದ್ಯಾಲಯಗಳು ಕೇರಳ ಸಮಾಜದಲ್ಲಿ ಭಾರಿ ಬದಲಾವಣೆಗಳಿಗೆ ಕಾರಣವಾಗಿವೆ. ಈ ಜನಸಮುದಾಯದ ಸಂಸ್ಥೆಗಳ ಪ್ರಜಾಪ್ರಭುತ್ವವನ್ನು ಮೈಗೂಡಿಸಿಕೊಳ್ಳಲು ಮತ್ತು ಶಿಕ್ಷಣವನ್ನು, ಶೈಕ್ಷಣಿಕ ಸಂರಚನೆಯನ್ನು ಬಲಪಡಿಸಲು, ಮತ್ತು ಕೇರಳದ ಶಿಕ್ಷಣದಲ್ಲಿ ಜನರನ್ನು ಒಳಗೊಳ್ಳುವ ಪ್ರಯತ್ನಗಳು ಆಗಬೇಕಿದೆ. ಕೇರಳದ ಶಿಕ್ಷಣವು ದೇಶದ ಬೇರೆಲ್ಲಾ ಪ್ರದೇಶಗಳಿಗಿಂತ ಹೆಚ್ಚು ಸಾರ್ವಜನಿಕ ರಂಗದಲ್ಲಿ ಅಭಿವೃದ್ಧಿಗೊಂಡಿದೆ ಮತ್ತು ಹಲವಾರು ಪ್ರಶಸ್ತಿಗಳನ್ನು ಗಳಿಸಿದೆ ಕೂಡ. ಇದಕ್ಕಾಗಿ, ನಮ್ಮ ಸೆನೆಟ್‌ಗಳನ್ನು ಹಾಗೂ ಅಕಾಡೆಮಿಕ್ ಕೌನ್ಸಿಲ್‌ಗಳನ್ನು ಬಲಪಡಿಸಬೇಕಿದೆ. ದೇಶದ ಜನರು ಕೂಡ ಈ ಬೆಳವಣಿಗೆಯನ್ನು ಗಂಭೀರವಾಗಿ ಗಮನಿಸುತ್ತಿದ್ದಾರೆ."

ಇದರಲ್ಲಿ ಕೇರಳದ ರಾಜ್ಯಪಾಲರಿಗೆ ಕಂಡ 'ದೇಶದ್ರೋಹ' ಏನು ಎಂದು ತಿಳಿದಿಲ್ಲ. ಸಹಜವಾಗಿಯೇ ಕೇರಳ ಮುಖ್ಯಮಂತ್ರಿಗಳು ಅವರ 'ಇಷ್ಟ'ವನ್ನು ಈಡೇರಿಸಿಲ್ಲ, ತಿರಸ್ಕರಿಸಿದ್ದಾರೆ.

ಇದು ಅಮೃತ ಕಾಲ

"ಹಸ್ತಕ್ಷೇಪದ ಆಧಾರ'ದ ಆಟ

ಬಹುಶಃ ಇದರಿಂದ ಕುಪಿತರಾದ ರಾಜ್ಯಪಾಲರು ನವಂಬರ್ 4ರಂದು ದಿಲ್ಲಿಯಲ್ಲಿ ಪತ್ರಕರ್ತರೊಂದಿಗೆ ಮಾತಾಡುತ್ತ ಮತ್ತೊಂದು ಹೇಳಿಕೆ ನೀಡಿದ್ದಾರೆ. ವಿವಿ ಕಾಯ್ದೆ ತಿದ್ದುಪಡಿ ಮಸೂದೆಗೆ ಸಹಿಯನ್ನು ಹಾಕದೆ, ಅದನ್ನು ಹಿಂದಕ್ಕೂ ಕಳಿಸದೆ ಇಟ್ಟುಕೊಂಡಿರುವ ಒಬ್ಬ ರಾಜ್ಯಪಾಲರು ತಾನು ಆಡಳಿತದಲ್ಲಿ ಹಸ್ತಕ್ಷೇಪ ಮಾಡಿಲ್ಲ ಎನ್ನುತ್ತಲೇ, ಎಲ್ಲ ಕಳ್ಳಸಾಗಾಣಿಕೆ ಚಟುವಟಿಕೆಗಳಿಗೆ ಮುಖ್ಯಮಂತ್ರಿಗಳು ಮತ್ತು ಅವರಿಗೆ ಆಪ್ತರಾಗಿರುವವರ ಕೃಪಾಪೋಷಣೆ ಇದೆ, ಆದ್ದರಿಂದ ಹಸ್ತಕ್ಷೇಪ ಮಾಡಲು ತನಗೆ ಆಧಾರಗಳಿವೆ ಎಂದಿದ್ದಾರೆ! ಜತೆಗೆ ತಾನು ಆರೆಸ್ಸೆಸ್‌ನ ಇಷ್ಟದಂತೆ ನಡೆಯುತ್ತಿಲ್ಲ ಎಂದೂ ಹೇಳಿದ್ದಾರೆ! ಅಂದರೆ 'ಇಷ್ಟವನ್ನು ಹಿಂತೆಗೆದುಕೊಳ್ಳುವ' ಅಧಿಕಾರದ ಬೆದರಿಕೆ ನಡೆಯಲಿಲ್ಲ, ಈಗ 'ಹಸ್ತಕ್ಷೇಪದ ಆಧಾರ'ದ ಬೆದರಿಕೆ ಹಾಕಿದ್ದಾರೆ, ಇದೂ ನಡೆಯುವುದಿಲ್ಲ ಎಂದು ಈ ಕುರಿತು ಟಿಪ್ಪಣಿ ಮಾಡುತ್ತ ರಾಜ್ಯದ ಮಾಜಿ ಹಣಕಾಸು ಮಂತ್ರಿ ಡಾ.ಟಿ ಎಂ ಥಾಮಸ್ ಐಸಾಕ್ ಹೇಳಿದ್ದಾರೆ.

ಒಬ್ಬ ಆರ್ಥಿಕ ಅಪರಾಧಿಯ ಸುಳ್ಳುಗಳನ್ನು ಆಧರಿಸಿದ ರಾಜ್ಯಪಾಲರ ಹೇಳಿಕೆ ಉತ್ತರಕ್ಕೂ ಅರ್ಹವಲ್ಲ ಎಂದು ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಎಂ.ವಿ. ಗೋವಿಂದನ್ ಹೇಳಿದ್ದಾರೆ.

ಅತ್ತ ಸುಪ್ರಿಂ ಕೋರ್ಟ್ ತೀರ್ಪುಗಳೂ ಗೊಂದಲ ಸೃಷ್ಟಿಸಿವೆ. ಕೇರಳ ತಾಂತ್ರಿಕ ವಿಶ್ವವಿದ್ಯಾಲಯದ ಉಪಕುಲಪತಿಗಳ ನೇಮಕವನ್ನು ಕೇರಳ ವಿಶ್ವವಿದ್ಯಾಲಯ ಕಾಯ್ದೆ ಪ್ರಕಾರ ಮಾಡಿದ್ದು, ಅದು ಯುಜಿಸಿ ನಿಯಮಾವಳಿಗಳನ್ನು ಉಲ್ಲಂಘಿಸಿದೆ ಎಂಬ ಅರ್ಜಿಯನ್ನು ರಾಜ್ಯದ ಹೈಕೋರ್ಟ್ ವಜಾ ಮಾಡಿದ್ದರೂ, ಸುಪ್ರಿಂ ಕೋರ್ಟಿನ ಒಂದು ಪೀಠ ನೇಮಕವನ್ನು ರದ್ದುಮಾಡುವ ತೀರ್ಪು ನೀಡಿತು. ಇದರ ಆಧಾರದ ಮೇಲೆ ರಾಜ್ಯಪಾಲರು ಕೇರಳದ ಎಂಟು ವಿಶ್ವವಿದ್ಯಾಲಯಗಳ ಉಪಕುಲಪತಿಗಳಿಗೆ ರಾಜೀನಾಮೆ ನೀಡುವಂತೆ ಸೂಚಿಸಿದರು. ಹಾಗೆ ಮಾಡುವಂತಿಲ್ಲ ಎಂದು ಹೈಕೋರ್ಟ್ ಹೇಳಿದ ಮೇಲೆ ವಿವರಣೆ ಕೇಳುವ ನೋಟೀಸು ಕಳಿಸಲಾಗಿದೆ.

ಆದರೆ ಈ ತೀರ್ಪಿನ ನಂತರ ಪ್ರಾಧ್ಯಾಪಕರ ನಿವೃತ್ತಿ ವಯಸ್ಸು ಕುರಿತಾದ ಅರ್ಜಿಯ ತೀರ್ಪಿನಲ್ಲಿ ಸುಪ್ರಿಂ ಕೋರ್ಟಿನ ಪೀಠ ರಾಜ್ಯದ ಒಳಗೆ ಶಿಕ್ಷಣ ಕುರಿತಂತೆ ಸರಕಾರ ತನ್ನದೇ ಕಾಯ್ದೆಗಳನ್ನು ರೂಪಿಸಬಹುದು, ಯುಜಿಸಿಯ ನಿಬಂಧನೆಗಳನ್ನು ಒಪ್ಪಬೇಕಾಗಿಲ್ಲ ಎಂದಿದೆ. ಇದರ ಆಧಾರದಲ್ಲಿ ರಾಜ್ಯ ಸರಕಾರ ಸುಪ್ರಿಂ ಕೋರ್ಟಿನ ಮೊದಲ ತೀರ್ಪಿನ ವಿರುದ್ಧ ಪರಾಮರ್ಶೆ ಅರ್ಜಿಯನ್ನು ಹಾಕಿದೆ. ರಾಜ್ಯಪಾಲರ ದೊಂಬರಾಟದ ವಿರುದ್ಧ ಈ ರಿತಿಯ ಕಾನೂನು ಕ್ರಮಗಳಲ್ಲದೆ, ಜನರನ್ನು ಅಣಿನೆರೆಸುವ ಕ್ರಿಯೆಗಳನ್ನೂ ನಡೆಸಲಾಗುತ್ತಿದೆ ಎಂದು ಡಾ.ಥಾಮಸ್ ಐಸಾಕ್ ಹೇಳಿದ್ದಾರೆ. ಜೆಎನ್‌ಯು, ಹೈದರಾಬಾದ್ ಇತ್ಯಾದಿ ವಿಶ್ವದ್ಯಾಲಯಗಳಲ್ಲಿ, ಪುಣೆ ಫಿಲಂ ಸಂಸ್ಥೆಯಲ್ಲಿ ಮಾಡಿದ್ದನ್ನು ಕೇರಳದ ವಿಶ್ವವಿದ್ಯಾಲಯಗಳಲ್ಲಿ ಮಾಡಲು ಬಿಡುವುದಿಲ್ಲ ಎಂದು ಅವರು ಹೇಳಿದ್ದಾರೆ.

ಈ ನಡುವೆ ತಮಿಳುನಾಡಿನಲ್ಲಿಯೂ ರಾಜ್ಯಪಾಲರು ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ಕೂಗುಗಳು ಎದ್ದಿವೆ. ಅವರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂಬ ಅಲ್ಲಿಯ ಜಾತ್ಯತೀತ ರಂಗದ ಎಲ್ಲ 50 ಸಂಸದರು ಸಹಿ ಹಾಕಿದ ಮನವಿಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಲಾಗುತ್ತಿದೆ.

ಅಮೃತ ಕಾಲದಲ್ಲೊಂದು ದುರಂತ

ಅಕ್ಟೋಬರ್ 30 ರಂದು ಗುಜರಾತಿನ ಮೊರ್ಬಿಯ ತೂಗು ಸೇತುವೆಯ ದುರಂತ ಕಂಡು ದೇಶ ತಲ್ಲಣಗೊಂಡಿದೆ. 140 ಮಂದಿ ಪ್ರಾಣ ಕಳಕೊಂಡಿದ್ದಾರೆ, 180ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಈ ಬಗ್ಗೆ ಹೊರಬರುತ್ತಿರುವ ಮಾಹಿತಿಗಳು ಈ ಅಮೃತ ಕಾಲದ ಎಲ್ಲ ಗುಣಲಕ್ಷಗಳನ್ನು ಪ್ರತಿನಿಧಿಸುತ್ತಿರುವಂತೆ ಕಾಣುತ್ತಿದೆ.




ವ್ಯಂಗ್ಯಚಿತ್ರ: ನಳ ಪೊನ್ನಪ್ಪ, ದಿ ಫೆಡರಲ್.ಕಾಂ

ಒಂದೂವರೆ ಶತಮಾನದಷ್ಟು ಹಳೆಯ ಸೇತುವೆಯ ನವೀಕರಣ ಮತ್ತು ಉಸ್ತುವಾರಿಯ ಕಾಂಟ್ರಾಕ್ಟನ್ನು ಖಾಸಗಿಯವರಿಗೆ, ಅದೂ ಈ ಕ್ಷೇತ್ರದಲ್ಲಿ ಅನುಭವವಿಲ್ಲದ ಗೋಡೆ ಗಡಿಯಾರ ತಯಾರಿಸುವ ಕಂಪನಿಗೆ ಕೊಡಲಾಯಿತು. ನವೀಕರಣ ಎಂದು ಆರು ತಿಂಗಳ ಕಾಲ ಸಾರ್ವಜನಿಕರಿಗೆ ಮುಚ್ಚಿದ್ದ ಸೇತುವೆಯನ್ನು ಗಮನಾರ್ಹವಾದುದೇನನ್ನೂ ಮಾಡದೆ ಸಂಬಂಧಪಟ್ಟ ಪ್ರಾಧಿಕಾರಗಳನ್ನು ಕೇಳದೆ ತೆರೆಯಲಾಗಿದೆ. ನಾಲ್ಕುದಿನದ ವರೆಗೂ ಸಂಬಂಧಪಟ್ಟವರೂ ಇದನ್ನು ಪ್ರಶ್ನಿಸಿಲ್ಲ. 10ವರ್ಷ ಈ ಸೇತುವೆಗೆ ತೊಂದರೆಯಿಲ್ಲ ಎಂದ ಗುತ್ತಿಗೆ ಕಂಪನಿ ಮಾಲಕನ ಪ್ರತಿಕ್ರಿಯೆ ಏನೆಂದು ವರದಿಯಾಗಿಲ್ಲ. ಎಫ್‌ಐಆರ್‌ನಲ್ಲಿ ಈ ಕಂಪನಿ ಮಾಲಕರ ಪ್ರಸ್ತಾಪವಿಲ್ಲ, ಅದರ 9 ಸಂಬಳದಾರರ ಹೆಸರಿದೆಯಷ್ಟೇ. ಇವೆಲ್ಲದರ ಜೊತೆಗೆ ದುರಂತ ನಡೆದ ಮೇಲೂ ಗುತ್ತಿಗೆ ಪಡೆದ ಕಂಪನಿಯ ಒಬ್ಬ ಅಧಿಕಾರಿ ಇದು ದೇವರ ಇಚ್ಛೆ ಎಂದಿದ್ದಾನೆ.



ಆದರೂ 2016ರಲ್ಲಿ ಕೊಲ್ಕತ ಫ್ಲೈಓವರ್ ಕುಸಿದಾಗ ಅದು ದೇವರ ಕೃತ್ಯ ಅಲ್ಲ, ವಂಚನೆಯ ಕೃತ್ಯ ಎಂದಿದ್ದ ಪ್ರಧಾನಿಗಳಿಂದ ಈ ದುರುಂತಕ್ಕೆ ಕಾರಣರಾಗಿರಬಹುದಾದವರ ಬಗ್ಗೆ ಒಂದೂ ಮಾತಿಲ್ಲ.

ಅಲ್ಲದೆ ಎಂದಿನಂತೆ ಪರಿಹಾರಕ್ಕಿಂತ ಪ್ರಧಾನಿಗಳ ಭೇಟಿಗೆ ಆದ್ಯತೆ, ಸರಕಾರವನ್ನು ಬಚಾವ್ ಮಾಡಲು ಮಡಿಲ ಮಾಧ್ಯಮಗಳು ತೋರುತ್ತಿರುವ ಆತುರ ಎಲ್ಲವೂ ಹೇಗೆ ಅಮೃತ ಕಾಲದ 'ಸಂಸ್ಕೃತಿ'ಗೆ ತಕ್ಕಂತೆಯೇ ಇವೆ ಎಂಬುದನ್ನು ನಮ್ಮ ವ್ಯಂಗ್ಯ ಚಿತ್ರಕಾರರು ಬಿಂಬಿಸಿದ್ದಾರೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ವ್ಯಂಗ್ಯಚಿತ್ರ: ಸತೀಶ ಆಚಾರ್ಯ

1 ಕೋಟಿ ರೂ. ಮೌಲ್ಯದ 10 ಸಾವಿರ ಚುನಾವಣಾ ಬಾಂಡುಗಳ ಮುದ್ರಣ


ಆಗಸ್ಟ್ 1 ರಿಂದ ಅಕ್ಟೋಬರ್ 29ರ ನಡುವೆ ಭಾರತ ಸರಕಾರ 1 ಕೋಟಿ ರೂ. ಮೌಲ್ಯದ 10 ಸಾವಿರ ಚುನಾವಣಾ ಬಾಂಡುಗಳನ್ನು ಮುದ್ರಿಸಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮಾಹಿತಿ ಹಕ್ಕಿನ ಅಡಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರವಾಗಿ ಮಾಹಿತಿ ನೀಡಿದೆ. ಇದನ್ನು ಹಿಮಾಚಲ ಪ್ರದೇಶ ಮತ್ತು ಗುಜರಾತಿನಲ್ಲಿ ಸದ್ಯದಲ್ಲೇ ನಡೆಯಲಿರುವ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಮಾಡಲಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಅಕ್ಟೋಬರ್ 1ರಿಂದ 10ರ ನಡುವೆ ಇದರ ಇತ್ತೀಚಿನ ಮಾರಾಟ ನಡೆದಿದೆ.

ಈ ಮೊದಲು 2019ರಲ್ಲಿ 11400 ಕೋಟಿ ರೂ. ಮೌಲ್ಯದ ಬಾಂಡ್‌ಗಳನ್ನು ಮುದ್ರಿಸಲಾಗಿತ್ತು. ಚುನಾವಣಾ ಬಾಂಡುಗಳನ್ನು 1 ಕೋಟಿ ರೂ. ಮುಖಬೆಲೆಯಲ್ಲದೆ, 1000, 10,000, 1ಲಕ್ಷ ಮತ್ತು 10 ಲಕ್ಷ ರೂ. ಮುಖಬೆಲೆಯಲ್ಲೂ ಮುದ್ರಿಸಲಾಗುತ್ತಿದೆ. ಆದರೆ ಇದುವರೆಗೆ ಮಾರಾಟವಾದ ಬಾಂಡುಗಳಲ್ಲಿ 94 ಶೇ. 1ಕೋಟಿ ರೂ. ಮೌಲ್ಯದ್ದು ಎಂದು ಬ್ಯಾಂಕ್ ಮಾಹಿತಿಗಳು ಹೇಳುತ್ತವೆ. ಅಂದರೆ ಈ ಬಾಂಡುಗಳ ಮೂಲಕ ರಾಜಕೀಯ ಪಕ್ಷಗಳಿಗೆ, ಅದರಲ್ಲೂ ಆಳುವ ಪಕ್ಷಕ್ಕೆ ನಿಧಿ ನೀಡುವವರು ಯಾರು ಎಂಬುದು ಸ್ಪಷ್ಟವಾಗುತ್ತದೆ

ಇಂತಹ ಯೋಜನೆಯ ಬಗ್ಗೆ ವಿರುದ್ಧ ಹಾಕಿರುವ ಅರ್ಜಿಯ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಇದರ ಇನ್ನೂ ತೀರ್ಪು ನೀಡಿಲ್ಲ. ಈ ವಿಳಂಬ ಇದನ್ನು ಊರ್ಜಿತಗೊಳಿಸಿರುವಂತೆ ಕಾಣುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟಿಪ್ಪಣಿ ಮಾಡಿದ್ದಾರೆ.

ಲಿಜ್ ಟ್ರಸ್‌ಗೆ ತಿರುಗುಬಾಣವಾದ ತೆರಿಗೆ-ರಿಯಾಯತಿ

"ಶ್ರೀಮಂತರಿಗೆ ತೆರಿಗೆ ರಿಯಾಯ್ತಿ ಓಕೆ-ಅದನ್ನು ಸರಿದೂಗಿಸಲು ಬಡವರ ಮೇಲೆ ತೆರಿಗೆ ಹೆಚ್ಚಿಸಲಿಲ್ಲ ಏಕೆ?"!



44 ದಿನಗಳ ಕಾಲ ಬ್ರಿಟಿಶ್ ಪ್ರಧಾನ ಮಂತ್ರಿಯಾಗಿದ್ದ ಟ್ರಸ್ ಅವರ ಅವರ ನಿಜವಾದ ಉದ್ದೇಶ, ಸಾಮಾನ್ಯವಾಗಿ ತಾನು ಮತ್ತು ಟೋರಿ ಪಕ್ಷವು ಸೇವೆ ಸಲ್ಲಿಸುವ ವರ್ಗದೊಳಗೆ ತನ್ನ ಬೆಂಬಲವನ್ನು ಬಲಪಡಿಸಿಕೊಳ್ಳುವುದೇ ಆಗಿತ್ತು. ವಿಪರ್ಯಾಸವೆಂದರೆ, ಈ ವರ್ಗಕ್ಕೆ ಅನುಕೂಲವಾಗಲೆಂದು ಅವರು ರೂಪಿಸಿದ ಕ್ರಮವೇ ಅವರಿಗೆ ತಿರುಗುಬಾಣವಾಯಿತು ಮತ್ತು ಅವರನ್ನು ಎಷ್ಟು ಬಲವಾಗಿ ಅದು ನಾಟಿತು ಎಂದರೆ, ಅಧಿಕಾರವನ್ನೇ ತ್ಯಜಿಸಬೇಕಾಯಿತು! ಏಕೆ? ಏಕೆಂದರೆ ಹಣಕಾಸು ಬಂಡವಾಳ ಮತ್ತು ಇಡೀ ಬಂಡವಾಳಶಾಹಿ ವರ್ಗ, ತೆರಿಗೆ ಕಡಿತದ ಮೂಲಕ ಶ್ರೀಮಂತರಿಗೆ ಲಾಭ ಮಾಡಿಕೊಡುವ ಕ್ರಮವನ್ನು ಮಾತ್ರವಲ್ಲ, ಅದೇ ಸಮಯದಲ್ಲಿ, ವಿತ್ತೀಯ ಕ್ರಮಗಳ ಮೂಲಕ ನಿರುದ್ಯೋಗವನ್ನು ಉತ್ತೇಜಿಸುವ ಕ್ರಮವನ್ನೂ ಸಹ ನಿರೀಕ್ಷಿಸುತ್ತದೆ. ಬಂಡವಾಳಶಾಹಿ ಗ್ರಹಿಕೆಯ ಪ್ರಕಾರ, ಹಣದುಬ್ಬರದ ವಿರುದ್ಧ ಹೋರಾಡುವ ಏಕೈಕ ಸಾಧನವೆಂದರೆ, ನಿರುದ್ಯೋಗ ಸೃಷ್ಟಿಯೇ. ಇದನ್ನು ಈಡೇರಿಸದಿದ್ದುದೇ ಲಿಜ್ ಟ್ರಸ್ ಅವರ ಅಕ್ಷಮ್ಯ ಅಪರಾಧ!

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಲಿಜ್ ಟ್ರಸ್ ಅಧಿಕಾರದಲ್ಲಿದ್ದ ಕೇವಲ 44 ದಿನಗಳ ನಂತರ ಬ್ರಿಟನ್ನಿನ ಪ್ರಧಾನ ಮಂತ್ರಿ ಹುದ್ದೆಗೆ ನೀಡಿದ ರಾಜೀನಾಮೆಗೆ ಸಂಬಂಧಿಸಿದಂತೆ ಕುತೂಹಲ ಕೆರಳಿಸುವ ಪ್ರಶ್ನೆಯೆಂದರೆ, ಅವರ ಆರ್ಥಿಕ ಕಾರ್ಯಕ್ರಮದಲ್ಲಿ "ಮಾರುಕಟ್ಟೆ"ಗೆ ("ಮಾರುಕಟ್ಟೆ" ಎಂಬುದನ್ನು "ಹಣಕಾಸು ಬಂಡವಾಳ" ಎಂದು ಅರ್ಥೈಸಿಕೊಳ್ಳಿ) ಅಹಿತಕರವಾಗಿದ್ದ ಅಂಶ ಯಾವುದು ಎಂಬುದು. ಶ್ರೀಮಂತರ ತೆರಿಗೆ ಇಳಿಕೆಯನ್ನು ಒಂದು ಮುಖ್ಯ ಉದ್ದೇಶವಾಗಿ ಹೊಂದಿದ್ದ ಅವರ ಆರ್ಥಿಕ ನಿಲುವು "ಮಾರುಕಟ್ಟೆ"ಯು ಆನಂದದಿಂದ ಒಪ್ಪಿಕೊಳ್ಳುವಂತಿತ್ತು. ತೆರಿಗೆ-ಕಡಿತಗಳಿಗೆ ಬೇಕಾಗುವ ಹಣವನ್ನು ವಿತ್ತೀಯ ಕೊರತೆಯ ಮೂಲಕ ಒದಗಿಸಿಕೊಳ್ಳುವ ಕ್ರಮವನ್ನು "ಮಾರುಕಟ್ಟೆ"ಯು ಸಾಮಾನ್ಯವಾಗಿ ಇಷ್ಟಪಡುವುದಿಲ್ಲ, ನಿಜ. ಆದರೆ, ಒಟ್ಟು ಬೇಡಿಕೆಯನ್ನು ಉತ್ತೇಜಿಸುವುದು ಪ್ರಭುತ್ವದ ಉದ್ದೇಶವಾಗಿರದ ಸಂದರ್ಭದಲ್ಲಿ, ಶ್ರೀಮಂತರಿಗೆ ಹಣಕಾಸು ವರ್ಗಾವಣೆ ಮಾಡುವುದನ್ನೇ ಉದ್ದೇಶವಾಗುಳ್ಳ ವಿತ್ತೀಯ ಕೊರತೆಯ ಬಗ್ಗೆ "ಮಾರುಕಟ್ಟೆ"ಯ ಆಕ್ಷೇಪಣೆಗೆ ಅರ್ಥವಿಲ್ಲ. ತೆರಿಗೆ ಕಡಿತದ ಕಾರಣದಿಂದ ಕಡಿಮೆ ಬೀಳುವ ಹಣವನ್ನು ಹೊಂದಿಸಿಕೊಳ್ಳುವ ಏರ್ಪಾಟಿನ ಬಗ್ಗೆ ಯಾವ ಸೂಚನೆಯೂ ದೊರಕದೆ ಇದ್ದುದರಿಂದ, ಈ ಕೊರತೆಯ ಹಣವನ್ನು ಹೊಂದಿಸಿಕೊಳ್ಳಲು ಸರ್ಕಾರವು ಬಾಂಡ್ ಮಾರಾಟಕ್ಕೆ ಇಳಿಯಬೇಕಾಗುತ್ತದೆ ಎಂಬುದಾಗಿ ಕೆಲವರು ಮಾಡಿದ ಸೂಚನೆಗಳು ಬಾಂಡ್ ಮಾರುಕಟ್ಟೆಯನ್ನು ತಲ್ಲಣಗೊಳಿಸಿದವು. ಬಾಂಡ್ ಹೂಡಿಕೆದಾರರು ಆತಂಕಕ್ಕೊಳಗಾದರು. ತಮ್ಮಲ್ಲಿದ್ದ ಬಾಂಡ್‌ಗಳನ್ನೆಲ್ಲಾ ಮಾರಿದರು. ಬಾಂಡ್‌ಗಳ ಬೆಲೆಗಳು ಕುಸಿದವು. ಮಾರುಕಟ್ಟೆಯು ಕಂಗಾಲಾಯಿತು. ಕೊರತೆ ಬೀಳುವ ಹಣವನ್ನು ಹೊಂದಿಸಿಕೊಳ್ಳಲು ಸರ್ಕಾರವು ಬಾಂಡ್‌ಗಳನ್ನು ಬಿಡುಗಡೆ ಮಾಡುವ ಮತ್ತು ಅವುಗಳ ಮಾರಾಟವು ಸಂಭವಿಸುವ ಮೊದಲೇ, "ಮಾರುಕಟ್ಟೆ"ಯು ಕಂಗಾಲಾಯಿತು, ಏಕೆ? "ಮಾರುಕಟ್ಟೆ"ಯು ಒಂದು ವೇಳೆ ಬಾಂಡ್‌ಗಳಿಂದ ಬರುವ ಬಡ್ಡಿ ದರಗಳ ಏರಿಕೆಯನ್ನು ನಿರೀಕ್ಷಿಸಿದ್ದರೆ, ಅದು ಪೌಂಡ್-ಸ್ಟರ್ಲಿಂಗ್‌ನ ಬಲವರ್ಧನೆಗೆ ಕಾರಣವಾಗುತ್ತಿತ್ತು ಮತ್ತು ಅದರಿಂದಾಗಿ ಬ್ರಿಟನ್‌ಗೆ ಬಂಡವಾಳವು ಒಳಹರಿಯುತ್ತಿತ್ತು. ಅದರ ಬದಲಿಗೆ ನಾವು ನಿಜಕ್ಕೂ ನೋಡಿದ್ದು, ಪೌಂಡ್-ಸ್ಟರ್ಲಿಂಗ್‌ನ ತೀವ್ರ ಕುಸಿತವನ್ನು.

ಶ್ರೀಮಂತರಿಗೆ ತೆರಿಗೆ-ರಿಯಾಯತಿ ನೀಡುವ ಒಂದು ಸ್ಪಷ್ಟ ಬಲಪಂಥೀಯ ಕಾರ್ಯಸೂಚಿಯನ್ನು ತಾನು ಅನುಸರಿಸಿದರೆ, ಬ್ರಿಟಿಷ್ ಹಣಕಾಸು ಬಂಡವಾಳದ ತವರೂರಾದ ಲಂಡನ್ ನಗರದ ಪ್ರೀತಿಗೆ ಪಾತ್ರಳಾಗಬಹುದು ಎಂಬ ಆಕಾಂಕ್ಷೆಯನ್ನು ಲಿಜ್ ಟ್ರಸ್ ಇಟ್ಟುಕೊಂಡಿದ್ದರು. ಬ್ರೆಕ್ಸಿಟ್ ನಂತರದ ಬ್ರಿಟನ್‌ನ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಬಗ್ಗೆಯೂ ಅವರು ಮಾತನಾಡುತ್ತಿದ್ದರು. ಆದರೆ, ಇಂತಹ ತೆರಿಗೆ-ರಿಯಾಯಿತಿಗಳು ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಸಾಧ್ಯತೆಗಳು ಇಲ್ಲವೇ ಇಲ್ಲ ಎನ್ನಬಹುದು. ಪುನಶ್ಚೇತನಗೊಳಿಸುವುದು ಟ್ರಸ್ ಅವರ ಇರಾದೆಯಾಗಿದ್ದರೆ, ಅವರು ಹೆಚ್ಚು ಹೆಚ್ಚು ಸಾರ್ವಜನಿಕ ವೆಚ್ಚಗಳನ್ನು ಕೈಗೊಳ್ಳಬೇಕಾಗಿತ್ತು. ಅದು ಖಂಡಿತವಾಗಿಯೂ ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುತ್ತಿತ್ತು. ಆದರೆ, ಅವರ ನಿಜವಾದ ಉದ್ದೇಶ, ಸಾಮಾನ್ಯವಾಗಿ ತಾನು ಮತ್ತು ಟೋರಿ ಪಕ್ಷವು ಸೇವೆ ಸಲ್ಲಿಸುವ ವರ್ಗದೊಳಗೆ ತನ್ನ ಬೆಂಬಲವನ್ನು ಬಲಪಡಿಸಿಕೊಳ್ಳುವುದೇ ಆಗಿತ್ತು. ವಿಪರ್ಯಾಸವೆಂದರೆ, ಈ ವರ್ಗಕ್ಕೆ ಅನುಕೂಲವಾಗಲೆಂದು ಅವರು ರೂಪಿಸಿದ ಕ್ರಮವೇ ಅವರಿಗೆ ತಿರುಗುಬಾಣವಾಯಿತು ಮತ್ತು ಅವರನ್ನು ಎಷ್ಟು ಬಲವಾಗಿ ಅದು ನಾಟಿತು ಎಂದರೆ, ಅವರು 44 ದಿನಗಳ ನಂತರ ಅಧಿಕಾರವನ್ನು ತ್ಯಜಿಸಬೇಕಾಯಿತು! ಏಕೆ? ಶ್ರೀಮಂತರಿಗೆ ತೆರಿಗೆ ಕಡಿತ ಮಾಡಿದ್ದರೂ, ಖಂಡಿತವಾಗಿಯೂ ಲಿಜ್ ಟ್ರಸ್ ಅವರ ಅಕ್ಷಮ್ಯ ಅಪರಾಧವೆಂದರೆ, ಈ ತೆರಿಗೆ-ಕಡಿತಗಳಿಗೆ ಸಮನಾದ ಮೊತ್ತವನ್ನು ಸಾರ್ವಜನಿಕ ವೆಚ್ಚಗಳ ಕಡಿತದ ಮೂಲಕ ಅಥವಾ ದುಡಿಯುವ ಜನರ ಮೇಲೆ ತೆರಿಗೆ-ಹೆಚ್ಚಿಸುವ ಮೂಲಕ ಸರಿದೂಗಿಸಿಕೊಳ್ಳಲಿಲ್ಲ ಎಂಬುದು.

ಪ್ರಶ್ನೆಯೆಂದರೆ: ಏಕೆ?

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವಿದೆ. ಶ್ರೀಮಂತರ ತೆರಿಗೆಗಳನ್ನು ಕಡಿತ ಮಾಡುವ ಲಿಜ್ ಟ್ರಸ್ ಅವರ ಕಾರ್ಯಕ್ರಮವು ಎಲ್ಲರಿಗೂ ಮೊದಲೇ ಗೊತ್ತಿತ್ತು. ಪ್ರಧಾನ ಮಂತ್ರಿ ಹುದ್ದೆಯ ತಮ್ಮ ಪ್ರತಿಸ್ಪರ್ಧಿ ರಿಷಿ ಸುನಕ್ ವಿರುದ್ಧದ ಚುನಾವಣಾ ಪ್ರಚಾರದಲ್ಲಿ ಇದು ಅವರ ಮುಖ್ಯ ವಿಷಯವಾಗಿತ್ತೂ ಕೂಡ. ಆದಾಗ್ಯೂ, ಪ್ರಧಾನ ಮಂತ್ರಿಯಾದ ನಂತರ ಅವರು ಇದೇ ಪ್ರಸ್ತಾಪಗಳನ್ನು ಘೋಷಿಸಿದ ಕೂಡಲೇ, ಪ್ರಚಾರದ ಸಮಯದಲ್ಲಿ ಅವರನ್ನು ಬಿರುಸಾಗಿ ಬೆಂಬಲಿಸಿದ್ದ "ಪರಿಣಿತರು" ಮತ್ತು ಬಲಪಂಥೀಯ ಮಾಧ್ಯಮಗಳು ಅವರ ಮೇಲೆ ತಿರುಗಿಬಿದ್ದರು. ಎಲ್ಲಕ್ಕಿಂತ ಮೊದಲಿಗೆ ಅವರು ಚುನಾಯಿತರಾದದ್ದೇ ಈ ವಿಷಯವನ್ನು ಮುಂದಿಟ್ಟುಕೊಂಡು. ಪ್ರಚಾರದ ಸಮಯದಲ್ಲಿ ಅವರು ಏನು ಭರವಸೆ ನೀಡಿದ್ದರು ಮತ್ತು ಪ್ರಧಾನ ಮಂತ್ರಿಯಾಗಿ ಆಯ್ಕೆಯಾದ ನಂತರ ಅವರು ಏನು ಪ್ರಸ್ತಾಪಿಸಿದರು ಮತ್ತು ಅವುಗಳ ನಡುವೆ ಇರುವ ವ್ಯತ್ಯಾಸವಾದರೂ ಏನು? ಶ್ರೀಮಂತರಿಗೆ ತೆರಿಗೆ ಕಡಿತ ಮಾಡಿದ್ದು ಖಂಡಿತವಾಗಿಯೂ ಇಲ್ಲಿ ವಿಷಯವಲ್ಲ. ಲಿಜ್ ಟ್ರಸ್ ಅವರ ಅಕ್ಷಮ್ಯ ಅಪರಾಧವೆಂದರೆ, ಈ ತೆರಿಗೆ-ಕಡಿತಗಳಿಗೆ ಸಮನಾದ ಮೊತ್ತವನ್ನು ಸಾರ್ವಜನಿಕ ವೆಚ್ಚಗಳ ಕಡಿತದ ಮೂಲಕ ಅಥವಾ ದುಡಿಯುವ ಜನರ ಮೇಲೆ ತೆರಿಗೆ-ಹೆಚ್ಚಿಸುವ ಮೂಲಕ ಸರಿದೂಗಿಸಿಕೊಳ್ಳಲಿಲ್ಲ ಎಂಬುದು. ಈಗಾಗಲೇ ಧೀರೋಧಾತ್ತ ಮುಷ್ಕರ-ಹೋರಾಟಗಳನ್ನು ನಡೆಸಿರುವ ಬ್ರಿಟನ್‌ನ ಕಾರ್ಮಿಕ ವರ್ಗವು ತೆರಿಗೆ ಹೆಚ್ಚಳವನ್ನು ತೀವ್ರವಾಗಿ ಪ್ರತಿರೋಧಿಸುತ್ತಿತ್ತು ಎಂಬುದರಲ್ಲಿ ಅನುಮಾನವಿಲ್ಲ.



ವ್ಯಂಗ್ಯಚಿತ್ರ: ಕ್ರಿಸ್ತೊ ಕೊಮರ್‌ನಿಟ್ಸ್ಕಿ

ಆದರೆ, ಸಾರ್ವಜನಿಕ ವೆಚ್ಚಗಳ ಕಡಿತವು, ಕಾರ್ಮಿಕ ವರ್ಗದ ಮೇಲೆ ನಿಜಕ್ಕೂ ಒಂದು ಪರೋಕ್ಷ ದಾಳಿಯೇ ಆಗುವುದರಿಂದ, ಲಿಜ್ ಟ್ರಸ್ ಬೆಂಬಲಿಗರು ನಿರೀಕ್ಷಿಸಿದ್ದುದು ಈ ಕ್ರಮವನ್ನೇ. ಟ್ರಸ್ ಅದನ್ನು ಮಾಡದಿದ್ದುದೇ ಅವರ ವಿರೋಧಿಗಳ ದೃಷ್ಟಿಯಲ್ಲಿ ಅಪರಾಧವಾಗಿತ್ತು.

ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹಣಕಾಸು ಬಂಡವಾಳದ ಮತ್ತು ಇಡೀ ಬಂಡವಾಳಶಾಹಿ ವರ್ಗದ ನಿರೀಕ್ಷೆ ಏನೆಂದರೆ, ಅದು ತೆರಿಗೆ ಕಡಿತದ (ವರ್ಗಾವಣೆ) ಮೂಲಕ ಶ್ರೀಮಂತರಿಗೆ ಲಾಭ ಮಾಡಿಕೊಡುವ ಕ್ರಮವನ್ನು ಮಾತ್ರವಲ್ಲ, ಅದೇ ಸಮಯದಲ್ಲಿ, ವಿತ್ತೀಯ ಕ್ರಮಗಳ ಮೂಲಕ ನಿರುದ್ಯೋಗವನ್ನು ಉತ್ತೇಜಿಸುವ ಕ್ರಮವನ್ನೂ ಸಹ ನಿರೀಕ್ಷಿಸುತ್ತದೆ. ಬಂಡವಾಳಶಾಹಿ ಗ್ರಹಿಕೆಯ ಪ್ರಕಾರ, ಹಣದುಬ್ಬರದ ವಿರುದ್ಧ ಹೋರಾಡುವ ಏಕೈಕ ಸಾಧನವೆಂದರೆ, ನಿರುದ್ಯೋಗ ಸೃಷ್ಟಿಯೇ. ತೆರಿಗೆ-ಕಡಿತದಿಂದಾಗಿ ಕೊರತೆ ಬೀಳುವ ಹಣವನ್ನು ಹೊಂದಿಸಿಕೊಳ್ಳುವ ಏರ್ಪಾಟು ಮಾಡಿಲ್ಲ ("unfunded") ಎಂಬ ಆಪಾದನೆಯ ನಿಜವಾದ ಅರ್ಥವೆಂದರೆ, ಸರ್ಕಾರದ ವೆಚ್ಚಗಳ ಕಡಿತದ ಮೂಲಕ ಒಟ್ಟಾರೆ ಬೇಡಿಕೆಯನ್ನು ಮೊಟಕುಗೊಳಿಸುವಂತಹ ಕ್ರಮಗಳ ಮೂಲಕ ಸಮತೋಲಿಸಿಕೊಳ್ಳುವುದರ ಬದಲಾಗಿ, ಒಟ್ಟಾರೆ ಬೇಡಿಕೆಯನ್ನು ಮೊಟಕುಗೊಳಿಸಲು ಏನನ್ನೂ ಮಾಡದ ವಿತ್ತೀಯ ಕೊರತೆಯ ಮೂಲಕ ಹಣಕಾಸು ಒದಗಿಸಿಕೊಳ್ಳಲಾಗುತ್ತದೆ ಎಂಬುದು. ಹಣಕಾಸು ಬಂಡವಾಳದ ದೃಷ್ಟಿಯಲ್ಲಿ ಲಿಜ್ ಟ್ರಸ್ ಅವರ ವೈಫಲ್ಯವೆಂದರೆ, ತೆರಿಗೆ-ಕಡಿತದಿಂದಾಗಿ ಕೊರತೆ ಬೀಳುವ ಹಣವನ್ನು ವಿತ್ತೀಯ ಕೊರತೆಯ ಮೂಲಕ ಹೊಂದಿಸಿಕೊಳ್ಳಬೇಕಾಗುತ್ತದೆ ಎಂಬುದಷ್ಟೇ ಅಲ್ಲ, ಅವರ ಪ್ರಸ್ತಾಪಗಳಲ್ಲಿ ಹಣದುಬ್ಬರದ ವಿರುದ್ಧ ಹೋರಾಡಲು ಬಂಡವಾಳಶಾಹಿಗೆ ತಿಳಿದಿರುವ ನಿರುದ್ಯೋಗವನ್ನು ಸೃಷ್ಟಿಸುವ ಏಕೈಕ ವಿಧಾನದ ಬಗ್ಗೆ ಏನೂ ಇರಲಿಲ್ಲ ಎಂಬುದು. ಬಡ್ಡಿ ದರದ ಏರಿಕೆಯು ಇದನ್ನು "ಸಾಧಿಸುತ್ತದೆ" ಎಂದು ಭಾವಿಸಲಾಗಿದೆ, ನಿಜ. ಆದರೆ, ಈ ತಿಳುವಳಿಕೆಗೆ ವಿರುದ್ಧವಾದ ವಿತ್ತೀಯ ನೀತಿಯನ್ನು ಹೊಂದುವುದು "ಅಕ್ಷಮ್ಯವೇ".

ಇದು, ಇಡೀ ಘಟನಾವಳಿಯ ಕ್ರಮವನ್ನೂ ವಿವರಿಸುತ್ತದೆ. ಬ್ರಿಟನ್‌ನಲ್ಲಿ ಪ್ರಸ್ತುತ ಹಣದುಬ್ಬರವು ಶೇ.10ಕ್ಕಿಂತ ಮೇಲಿದೆ. ವಿತ್ತೀಯ ಕೊರತೆಯ ಹೆಚ್ಚಳವು ಹಣದುಬ್ಬರದ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ. ಪರಿಣಾಮವಾಗಿ, ಡಾಲರ್ ಕರೆನ್ಸಿಗೆ ಹೋಲಿಸಿದರೆ ಪೌಂಡ್ ಸ್ಟರ್ಲಿಂಗ್ ಹೆಚ್ಚು ಅಪಮೌಲ್ಯಕ್ಕೆ ಒಳಗಾಗುತ್ತದೆ (ಏಕೆಂದರೆ, ಯುಎಸ್‌ನಲ್ಲಿ ಹಣದುಬ್ಬರವು ಕೆಳಮಟ್ಟದಲ್ಲಿದೆ). ಪೌಂಡ್ ಸ್ಟರ್ಲಿಂಗ್ ಅಪಮೌಲ್ಯಗೊಳ್ಳುತ್ತದೆ ಎಂಬ ನಿರೀಕ್ಷೆಯೇ ಅದರ ಮತ್ತಷ್ಟು ಕುಸಿತಕ್ಕೆ ಕಾರಣವಾಗುತ್ತದೆ (ಈಗಾಗಲೇ ಸಂಭವಿಸಿದೆ). ಪೌಂಡ್ ಸ್ಟರ್ಲಿಂಗ್‌ನ ಕುಸಿತವು ಬ್ರಿಟನ್‌ಗೆ ಬಂಡವಾಳದ ಹರಿವನ್ನು ಆಕರ್ಷಿಸುವ ಬದಲು, ಬ್ರಿಟನ್‌ನಿಂದ ಬಂಡವಾಳದ ಹೊರಹರಿವನ್ನು ಉತ್ತೇಜಿಸುತ್ತದೆ. ಪೌಂಡ್ ಸ್ಟರ್ಲಿಂಗ್‌ನ ಅಪಮೌಲ್ಯ ಮತ್ತು ಬೃಹತ್ ಗಾತ್ರದ ವಿತ್ತೀಯ ಕೊರತೆಯ ಕಾರಣದಿಂದಾಗಿ ಮತ್ತು ಈ ಬಗ್ಗೆ ಬ್ಯಾಂಕ್ ಆಫ್ ಇಂಗ್ಲೆಂಡ್‌ನ ಕಡೆಯಿಂದ ಯಾವುದೇ ಪ್ರತಿವರ್ತನಾ ಕ್ರಮ ಇಲ್ಲದಿರುವುದರಿಂದಾಗಿ, ಬ್ರಿಟಿಷ್ ಸರ್ಕಾರದ ಬಾಂಡ್‌ಗಳ ಮೌಲ್ಯ ಕುಸಿಯುತ್ತದೆ ಎಂದು ಮೊದಲೇ ನಿರೀಕ್ಷಿಸಲಾಗಿತ್ತು. ಲಿಜ್ ಟ್ರಸ್ ಅವರ ಪ್ರಸ್ತಾಪಗಳ ಘೋಷಣೆಯ ಮುಂದುವರಿದ ಭಾಗವಾಗಿ ಬಾಂಡ್‌ಗಳ ಮೌಲ್ಯವು ತೀಕ್ಷ್ಣ ಕುಸಿತವನ್ನು ಕಂಡಿತು.

ಬೇರೆ ರೀತಿಯಲ್ಲಿ ಹೇಳುವುದಾದರೆ, ಲಿಜ್ ಟ್ರಸ್ ಅವರ ಪ್ರಸ್ತಾಪಗಳು ಶ್ರೀಮಂತರಿಗೆ ವರ್ಗಾವಣೆಗಳನ್ನು ಒಳಗೊಂಡಿದ್ದರೂ ಸಹ, "ಮಾರುಕಟ್ಟೆ"ಯು ತೀಕ್ಷ್ಣವಾಗಿ ಪ್ರತಿಕ್ರಿಯಿಸಿತು. ಬೃಹತ್ ವಿತ್ತೀಯ ಕೊರತೆಯ ಪರಿಸ್ಥಿತಿಯಲ್ಲೂ ಸಮರ್ಥಿಸಲ್ಪಡುವ ಈ ವರ್ಗಾವಣೆಗಳನ್ನು ಅಗತ್ಯವೆಂದು ಭಾವಿಸುವ "ಮಾರುಕಟ್ಟೆಯ" ದೃಷ್ಟಿಯಲ್ಲಿ, ಹಣದುಬ್ಬರವನ್ನು ಎದುರಿಸಲು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬೃಹತ್ ನಿರುದ್ಯೋಗವನ್ನು ಸೃಷ್ಟಿಸುವುದನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲದುದರಿಂದ, ಈ ಪ್ರಸ್ತಾಪಗಳಲ್ಲಿ ನಿರುದ್ಯೋಗವನ್ನು ಸೃಷ್ಟಿಸುವ ಯಾವ ಅಂಶವೂ ಇರಲಿಲ್ಲ. ಮೇಲಾಗಿ, ಹಣದುಬ್ಬರದ ಪರಿಸ್ಥಿತಿ ಮುಂದುವರಿಯುವುದನ್ನು ಅಥವಾ ಉಲ್ಬಣಗೊಳ್ಳುವುದನ್ನು ಹಣಕಾಸು ಬಂಡವಾಳವು ಬಯಸುವುದಿಲ್ಲ. ಏಕೆಂದರೆ, ಅದು ಎಲ್ಲ ಹಣಕಾಸು ಸ್ವತ್ತುಗಳ ನಿಜ ಮೌಲ್ಯವನ್ನು ಇಳಿಕೆ ಮಾಡುತ್ತದೆ ಮತ್ತು ಬ್ಯಾಂಕುಗಳು, ಪಿಂಚಣಿ ನಿಧಿಗಳು ಮತ್ತು ಇತರ ಹಣಕಾಸು ಸಂಸ್ಥೆಗಳ ಬ್ಯಾಲೆನ್ಸ್ ಶೀಟ್‌ಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.

ಹಣದುಬ್ಬರವನ್ನು ಎದುರಿಸುವ ವಿಷಯದಲ್ಲಿ

ಪುಟ 14 ಕ್ಕೆ

ರಾಜ್ಯಪಾಲರುಗಳ ಅಸಂವಿಧಾನಿಕ ನಡೆಗಳ ವಿರುದ್ಧ ಬಿಜೆಪಿಯೇತರ ಜಾತ್ಯತೀತ ಪಕ್ಷಗಳ ಅಣಿನೆರಿಕೆ

ಪುಟ 11 ರಿಂದ

ಮತ್ತು ರಾಜ್ಯದ ದರ್ಜೆಯನ್ನು ವಿಸರ್ಜಿಸಿ ಮೂರು ವರ್ಷಗಳಿಗಿಂತ ಹೆಚ್ಚಾಗಿದೆ. ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಜೀವನೋಪಾಯದ ಮೇಲೆ ನಿರ್ಬಂಧಗಳನ್ನು ಹೇರುವ ಸನ್ನಿವೇಶ ಮುಂದುವರೆಸಿದೆ.

ಎಡ ಪಕ್ಷಗಳೊಂದಿಗೆ ಸಿಪಿಐ(ಎಂ) ಜಮ್ಮು ಮತ್ತು ಕಾಶ್ಮೀರ ಪರಿಸ್ಥಿತಿಯ ಮೇಲೆ ಇತರ ಜಾತ್ಯತೀತ ಪಕ್ಷಗಳೊಂದಿಗೆ ಸಮಾಲೋಚನಾ ಪ್ರಕ್ರಿಯೆಯನ್ನು ಪ್ರಾರಂಭಿಸಲು ಮುತುವರ್ಜಿ ವಹಿಸುತ್ತದೆ

ಮುಂಬರುವ ವಿಧಾನಸಭೆ ಚುನಾವಣೆಗಳು

ಚುನಾವಣಾ ಆಯೋಗವು ಹಿಮಾಚಲ ಪ್ರದೇಶ ಮತ್ತು ಗುಜರಾತ್‌ನ ಚುನಾವಣಾ ವೇಳಾಪಟ್ಟಿಗಳನ್ನು ಪ್ರತ್ಯೇಕಿಸಿರುವುದರಿಂದ, ಗುಜರಾತಿನಲ್ಲಿ ಮಾದರಿ ನೀತಿ ಸಂಹಿತೆ ಜಾರಿಗೆ ಬರುವ ಮೊದಲು **ಬಿಜೆಪಿಗೆ ಹೆಚ್ಚು ಸಮಯಾವಕಾಶದ ಪ್ರಯೋಜನ ಸಿಕ್ಕಿದೆ. ಮೋದಿಯವರು ವೈಯಕ್ತಿಕವಾಗಿ ಬಿಜೆಪಿಯ ಚುನಾವಣಾ ಪ್ರಚಾರಗಳನ್ನು ಮುನ್ನಡೆಸುತ್ತಿದ್ದಾರೆ, ಮುಖ್ಯವಾಗಿ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದರ ಮೇಲೆ ಕೇಂದ್ರೀಕರಿಸುತ್ತಿದ್ದಾರೆ ಮತ್ತು ಕೇಂದ್ರದ ಖಜಾನೆಯಿಂದ ರಾಜ್ಯದ ಜನರಿಗೆ ಹೊಸ ಯೋಜನೆಗಳು ಮತ್ತು ಪ್ರಯೋಜನಗಳನ್ನು ಘೋಷಿಸುತ್ತಿದ್ದಾರೆ. ಇವುಗಳಲ್ಲಿ ಕೆಲವು ಸರ್ಕಾರಿ ಯೋಜನೆಗಳನ್ನು ಜನರಿಗೆ ಅವರ "ವೈಯಕ್ತಿಕ ದೀಪಾವಳಿ ಉಡುಗೊರೆಗಳು" ಎಂದು ವರ್ಣಿಸಲಾಗಿದೆ. ಗುಜರಾತ್ ಬಿಜೆಪಿ ರಾಜ್ಯ ಸರ್ಕಾರ ಏಕರೂಪ ನಾಗರಿಕ ಸಂಹಿತೆಯ ಉದ್ದೇಶವನ್ನು ಘೋಷಿಸಿದೆ.**

ಹಿಮಾಚಲ ಪ್ರದೇಶದಲ್ಲಿ ಸಿಪಿಐ(ಎಂ) 11 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಸಿಪಿಐ ಸ್ಪರ್ಧಿಸುತ್ತಿರುವ ಒಂದು ಸ್ಥಾನದಲ್ಲಿ ಅದಕ್ಕೆ ಬೆಂಬಲ ನೀಡುತ್ತದೆ. ಉಳಿದ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಸೋಲಿಗೆ ಸಿಪಿಐ(ಎಂ) ಕರೆ ನೀಡಿದೆ.

ಗುಜರಾತ್ ನಲ್ಲಿ ಇನ್ನೂ ವೇಳಾಪಟ್ಟಿ ಪ್ರಕಟವಾಗದ ಕಾರಣ, ಬಿಜೆಪಿಯ ಸೋಲನ್ನು ಖಚಿತಪಡಿಸಿಕೊಳ್ಳಲು ಸಿಪಿಐ(ಎಂ) ಇತರ ಜಾತ್ಯತೀತ ಶಕ್ತಿಗಳೊಂದಿಗೆ ಮಾತುಕತೆ ನಡೆಸುತ್ತಿದೆ.

ಬ್ರೆಜಿಲ್‌ನಲ್ಲಿ ಎಡಶಕ್ತಿಗಳ ವಿಜಯ

ತೀವ್ರ ಸ್ಪರ್ಧೆಯಿದ್ದ ಚುನಾವಣೆಯಲ್ಲಿ ಬ್ರೆಜಿಲ್ ಅಧ್ಯಕ್ಷರಾಗಿ ಲೂಯಿಜ್ ಇನಾಸಿಯೊ ಲುಲಾ ದಾ ಸಿಲ್ವಾ ಅವರ ವಿಜಯವನ್ನು ಕೇಂದ್ರ ಸಮಿತಿಯು ಶ್ಲಾಘಿಸಿದೆ. ಸ್ವಯಂ ಘೋಷಿತ ಫ್ಯಾಸಿಸ್ಟ್ ತೆರನ ಬಲಪಂಥೀಯ ಜೈರ್ ಬೋಲ್ಸನಾರೊ ಸೋಲು ಲ್ಯಾಟಿನ್ ಅಮೆರಿಕಾದಲ್ಲಿ ಎಡಪಂಥಕ್ಕೆ ಮತ್ತಷ್ಟು ಮುನ್ನಡೆಯನ್ನು ಸೂಚಿಸುತ್ತದೆ. ಸಮಾಜವಾದಿ ಕ್ಯೂಬಾವನ್ನು ಹೊರತುಪಡಿಸಿ, ಚಿಲಿ, ಬೊಲಿವಿಯಾ, ಕೊಲಂಬಿಯಾ, ಪೆರು, ಹೊಂಡುರಾಸ್ ಇತ್ಯಾದಿಗಳಲ್ಲಿ ಎಡ-ಒಲವಿನ ಅಧ್ಯಕ್ಷರುಗಳನ್ನು ಚುನಾಯಿಸಲಾಗಿದೆ.

ಎಂ.ವಿ. ಗೋವಿಂದನ್ ಮಾಸ್ಟರ್ ಪೊಲಿಟ್ ಬ್ಯೂರೋಗೆ ಆಯ್ಕೆ

ಕೇಂದ್ರ ಸಮಿತಿಯು ಸರ್ವಾನುಮತದಿಂದ ಕಾಂ. ಎಂ.ವಿ.ಗೋವಿಂದನ್, ಸಿಪಿಐ(ಎಂ)ನ ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿಯವರನ್ನು ಪೊಲಿಟ್‌ಬ್ಯೂರೊಗೆ ಚುನಾಯಿಸಿದೆ

ಕೇಂದ್ರ ಸಮಿತಿ ಕರೆಗಳು

ಕೇಂದ್ರ ಸಮಿತಿಯು ಜನರ ಮೇಲೆ ಹೇರುತ್ತಿರುವ ಸಂಕಷ್ಟಗಳು ಮತ್ತು ತಮ್ಮ ನಿರ್ದಿಷ್ಟ 14 ಅಂಶಗಳ ಹಕ್ಕೊತ್ತಾಯಗಳ ಮೇಲೆ ಕಾರ್ಮಿಕ ಸಂಘಗಳು, ಕಿಸಾನ್ ಸಭಾ ಮತ್ತು ಕೃಷಿ ಕಾರ್ಮಿಕ ಸಂಘಗಳು ಕರೆ ಕೊಟ್ಟಿರುವ ದೇಶವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಮತ್ತು ಇವುಗಳ ಅಂತಿಮ ಘಟ್ಟವಾಗಿ ಏಪ್ರಿಲ್ 2023ರಲ್ಲಿ 'ಸಂಸದ್ ಚಲೋ'ಗೆ ಪಕ್ಷದ ಬೆಂಬಲವನ್ನು ವ್ಯಕ್ತಪಡಿಸಿತು.

ಕೇಂದ್ರ ಸಮಿತಿಯು ಜನರ ಜೀವನೋಪಾಯಗಳ ಮೇಲೆ ಹೆಚ್ಚುತ್ತಿರುವ ಹೊರೆಗಳು, ದಲಿತರು, ಮಹಿಳೆಯರು ಮತ್ತು ಅಂಚಿನಲ್ಲಿರುವ ಜನರ ಮೇಲೆ ಹೆಚ್ಚುತ್ತಿರುವ ದಾಳಿಗಳ ವಿರುದ್ಧ, ಪ್ರಜಾಪ್ರಭುತ್ವದ ರಕ್ಷಣೆಗಾಗಿ ಮತ್ತು ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲಿನ ದಾಳಿಗಳ ವಿರುದ್ಧ ಸ್ಥಳೀಯ ಹೋರಾಟಗಳು ಮತ್ತು ಪ್ರತಿಭಟನಾ ಕಾರ್ಯಾಚರಣೆಗಳನ್ನು ಬಲಪಡಿಸಲು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ಈ ಸ್ಥಳೀಯ ಹೋರಾಟಗಳು ಮನರೇಗದ ಸರಿಯಾದ ಜಾರಿ, ಮತ್ತು ಸಕಾಲದಲ್ಲಿ ಕೂಲಿಗಳ ಪಾವತಿಯಾಗುವಂತೆ ಹಾಗೂ ಬೇಡಿಕೆಗೆ ಅನುಗುಣವಾಗಿ ಕೆಲಸಗಳನ್ನು ನೀಡುವಂತೆ ಅಧಿಕಾರಿಗಳಿಗೆ ಒತ್ತಾಯಿಸುವುದರ ಮೇಲೆ ಗಮನ ಕೇಂದ್ರೀಕರಿಸಬೇಕು.

ಲಿಜ್ ಟ್ರಸ್‌ಗೆ ತಿರುಗುಬಾಣವಾದ ತೆರಿಗೆ-ರಿಯಾಯತಿ.....

ಪುಟ 13 ರಿಂದ

ಲಿಜ್ ಟ್ರಸ್ ಮಾರ್ಗರೆಟ್ ಥ್ಯಾಚರ್‌ಗಿಂತ ಭಿನ್ನವಾಗಿ ಕಾಣುತ್ತಾರೆ. ಕಾರ್ಮಿಕ ಸಂಘಗಳನ್ನು ದುರ್ಬಲಗೊಳಿಸಿ, ಉದ್ದೇಶಪೂರ್ವಕವಾಗಿ ಲಕ್ಷಾಂತರ ಕಾರ್ಮಿಕರನ್ನು ಕೆಲಸದಿಂದ ಕಿತ್ತು ಹಾಕಿ ಸಾಮೂಹಿಕ ನಿರುದ್ಯೋಗವನ್ನು ಸೃಷ್ಟಿಸುವ ಮೂಲಕ ಹಣದುಬ್ಬರವನ್ನು ಸೋಲಿಸುವ ಯೋಜನೆಯನ್ನು ಮಾರ್ಗರೆಟ್ ಥ್ಯಾಚರ್ ರೂಪಿಸಿದ್ದರು. ಅದನ್ನು ಮಾಡಿದ್ದಕ್ಕಾಗಿ ಲಂಡನ್ ನಗರವು ಅವರನ್ನು ಪ್ರೀತಿಸಿತು (ನಂತರ, ಅವರ ಪ್ರತ್ಯೇಕತಾ ನಿಲುವಿನಿಂದಾಗಿ ಲಂಡನ್ ಬದಲಿಗೆ ಫ್ರಾಂಕ್ ಫರ್ಟ್(ಜರ್ಮನಿ) ಯುರೋಪಿನ ಪ್ರಮುಖ ಹಣಕಾಸು ಕೇಂದ್ರವಾಗಿ ಉದಯವಾಗುವ ಅಪಾಯ ಎದುರಾದಾಗ, ಲಂಡನ್ ಅವರ ವಿರುದ್ಧ ತಿರುಗಿಬಿದ್ದಿತು ಮತ್ತು ಅವರನ್ನು ಪ್ರಧಾನ ಮಂತ್ರಿ ಹುದ್ದೆಯಿಂದ ಹೊರಹಾಕಿತು). ಶ್ರೀಮಂತರಿಗೆ ದೊಡ್ಡ ಪ್ರಮಾಣದ ತೆರಿಗೆ-ಕಡಿತಗಳ ಪ್ರಸ್ತಾಪ ಮಾಡಿದರೂ ಸಹ ಅತಿ ಹೆಚ್ಚಿನ ಸಂಖ್ಯೆಯ ಶ್ರೀಮಂತರು ವಾಸಿಸುವ ಲಂಡನ್ ನಗರದ ಪ್ರೀತಿಪಾತ್ರರಾಗುವಲ್ಲಿ ಟ್ರಸ್ ವಿಫಲರಾದದ್ದು ಆಶ್ಚರ್ಯವಲ್ಲ.

ಕಾರ್ಮಿಕರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹೇರುವ ಮೂಲಕ ಹೊಂದಿಸಿಕೊಂಡ ಮಾರ್ಗವಾಗಿ ಪಡೆದ ತೆರಿಗೆ-ಕಡಿತಗಳಿಗಿಂತ ಅಥವಾ ಸರ್ಕಾರದ ಬೇರೆ ಬೇರೆ ವೆಚ್ಚಗಳನ್ನು ಕಡಿಮೆ ಮಾಡುವ ಮೂಲಕ ಹೊಂದಿಸಿಕೊಂಡ ಮಾರ್ಗವಾಗಿ ಪಡೆದ ತೆರಿಗೆ-ಕಡಿತಗಳಿಗಿಂತ ವಿತ್ತೀಯ ಕೊರತೆಯ ಮೂಲಕ ಹೊಂದಿಸಿಕೊಂಡ ಮಾರ್ಗದಲ್ಲಿ ಶ್ರೀಮಂತರು ಪಡೆಯುವ ತೆರಿಗೆ-ಕಡಿತಗಳು ಬಂಡವಾಳಗಾರರಿಗೆ ಹೆಚ್ಚಿನ ಲಾಭವನ್ನು ತರುವ ಪರಿಸ್ಥಿತಿಯು ಒಂದು ವಿಪರ್ಯಾಸವೇ ಸರಿ. ಹೀಗಾಗುತ್ತದೆ ಏಕೆ ಎಂಬುದನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು: ಮಿಶ್ರವಲ್ಲದ ಒಂದು ಉತ್ಪಾದನಾ ವಿಧಾನದ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಕಾರ್ಮಿಕರು ತಮ್ಮ ವೇತನ ಆದಾಯವನ್ನು ಪೂರ್ಣವಾಗಿ ಬಳಕೆ ಮಾಡುತ್ತಾರೆ ಎಂದು (ಸರಳತೆಗಾಗಿ) ಊಹಿಸಿಕೊಂಡರೆ, ಆಗ, ಈ ಅರ್ಥವ್ಯವಸ್ಥೆಯಲ್ಲಿ ತೆರಿಗೆ-ನಂತರದ ಒಟ್ಟು ಲಾಭಗಳು, ಹೂಡಿಕೆಯ ಮೊತ್ತ+ಬಂಡವಾಳಗಾರರ ಬಳಕೆ+ಪಾವತಿ ಶೇಷದ ಚಾಲ್ತಿ ಖಾತೆಯ ಹೆಚ್ಚುವರಿ+ವಿತ್ತೀಯ ಕೊರತೆ ಇವುಗಳ ಮೊತ್ತಕ್ಕೆ ಸಮನಾಗಿರುತ್ತದೆ. ಬಂಡವಾಳಗಾರರಿಗೆ $100 ವರ್ಗಾವಣೆ ಮಾಡಲಾಗಿದೆ ಮತ್ತು ಈ ಹಣವನ್ನು ಸರ್ಕಾರಿ ವೆಚ್ಚಗಳ ಕಡಿತದ ಮೂಲಕ ಒದಗಿಸಿಕೊಳ್ಳಲಾಗಿದೆ ಎಂದು ಭಾವಿಸೋಣ. ಅಂದರೆ, ವಿತ್ತೀಯ ಕೊರತೆಗೆ ಕಾರಣವಾಗದ ಮತ್ತು ಹೂಡಿಕೆಯು ತಕ್ಷಣವೇ ಬದಲಾಗಲು ಕಾರಣವಿಲ್ಲದಿರುವುದರಿಂದ ಮತ್ತು ಪ್ರಸ್ತುತ ವಿದೇಶ ವ್ಯಾಪಾರವೂ ಸಮತೋಲದಲ್ಲಿದೆ ಎಂದು ಭಾವಿಸಿಕೊಂಡರೆ, $100 ವರ್ಗಾವಣೆಯು ಬಂಡವಾಳಶಾಹಿಗಳ ಬಳಕೆಯನ್ನು $50ರಷ್ಟನ್ನು ಹೆಚ್ಚಿಸಿದರೆ, ತೆರಿಗೆಯ ನಂತರದ ಅವರ ಲಾಭಗಳು $50 ಹೆಚ್ಚುತ್ತವೆ. ಆದರೆ, ವರ್ಗಾವಣೆಗಾಗಿ ಇಷ್ಟೇ ಹಣವನ್ನು ವಿತ್ತೀಯ ಕೊರತೆಯ ಮೂಲಕ ಹೊಂದಿಸಿಕೊಂಡರೆ, ತೆರಿಗೆ ನಂತರದ ಲಾಭವು $150 ಆಗಿರುತ್ತದೆ. ಆದಾಗ್ಯೂ, ಶ್ರೀಮಂತರಿಗಾಗಿ ಲಿಜ್ ಟ್ರಸ್ ಮಾಡಿದ ತೆರಿಗೆ-ಕಡಿತದ ಪ್ರಸ್ತಾಪಗಳಿಗೆ ಹಣಕಾಸು ಬಂಡವಾಳವು ವ್ಯಕ್ತಪಡಿಸಿರುವ ಆಕ್ಷೇಪವು, ಪ್ರಸ್ತುತ ಹಣದುಬ್ಬರದ ಬಗ್ಗೆ ಅವರಿಗೆ ಹೇವರಿಕೆಯಾಗಿದೆ ಎಂಬುದನ್ನು ತೋರಿಸುತ್ತದೆ.

ಇಲ್ಲಿಯವರೆಗೆ ನಾವು ಚರ್ಚಿಸಿದ ವಿಷಯವು ವಿತ್ತೀಯ ಕೊರತೆಯನ್ನು ಹೆಚ್ಚಿಸುವ ಮೂಲಕ ಬಂಡವಾಳಗಾರರಿಗೆ ವರ್ಗಾವಣೆಗಳನ್ನು ಒದಗಿಸುವ ಎರಡು ಪರ್ಯಾಯ ಬಂಡವಾಳಶಾಹಿ ಕಾರ್ಯತಂತ್ರಗಳಿಗೆ ಸಂಬಂಧಿಸಿದೆ. ವಿತ್ತೀಯ ಕೊರತೆಯನ್ನು ಹೆಚ್ಚಿಸುವ ಮೂಲಕ ಬಂಡವಾಳಗಾರರಿಗೆ ವರ್ಗಾವಣೆಗಳನ್ನು ಒದಗಿಸುವ ಒಂದು ಕಾರ್ಯತಂತ್ರವನ್ನು ಲಿಜ್ ಟ್ರಸ್ ಅನುಸರಿಸಿದರೆ, ವಿತ್ತೀಯ ಕೊರತೆಯನ್ನು ಹೆಚ್ಚಿಸದೆ ಬಂಡವಾಳಗಾರರಿಗೆ ವರ್ಗಾವಣೆಗಳನ್ನು ಒದಗಿಸುವ ಮತ್ತೊಂದು ಕಾರ್ಯತಂತ್ರವನ್ನು (ಅಂದರೆ, ತೆರಿಗೆ-ಕಡಿತದಿಂದಾಗಿ ಕೊರತೆ ಬೀಳುವ ಹಣವನ್ನು ಹೊಂದಿಸಿಕೊಳ್ಳುವ ಏರ್ಪಾಟಿಲ್ಲದ ("unfunded" ಎಂದು ಹೇಳಲಾಗುವ) ಅನುಸರಣೆಯನ್ನು ಅವರ ಟೀಕಾಕಾರರು ಬಯಸಿದ್ದರು. ಇವೆರಡೂ ಬಲಪಂಥೀಯ ಕಾರ್ಯತಂತ್ರಗಳೂ ದೊಡ್ಡ ದೊಡ್ಡ ವ್ಯಾಪಾರೋದ್ದಿಮೆ-ಪರವೇ. ಅವು ಬೇರೆ ಬೇರೆ ರೀತಿಯಲ್ಲಿ ದುಡಿಯುವ ವರ್ಗವನ್ನು ಹಾನಿಗೊಳಪಡಿಸುತ್ತವೆ ಮತ್ತು ಅದರಿಂದಾಗಿ ಪ್ರಜಾಪ್ರಭುತ್ವ ವಿರೋಧಿಯೂ ಹೌದು. ಸಿರಿವಂತರ ಸಂಪತ್ತಿನ ಮೇಲೆ ಅಥವಾ ಬಂಡವಾಳಗಾರರ ಲಾಭದ ಮೇಲೆ ಹೆಚ್ಚಿನ ತೆರಿಗೆ ವಿಧಿಸುವ ಮೂಲಕ ಒದಗಿಸಿಕೊಳ್ಳುವ ಹಣವನ್ನು ಹೆಚ್ಚು ಹೆಚ್ಚು ಸಾರ್ವಜನಿಕ ವೆಚ್ಚಗಳಿಗೆ ಬಳಸಿಕೊಳ್ಳುವ ಮೂಲಕ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಮತ್ತು ನಿರುದ್ಯೋಗ ಸೃಷ್ಟಿಯಾಗದಂತೆ ನೋಡಿಕೊಳ್ಳುವ ಮತ್ತು ನೇರ ಬೆಲೆ ನಿಯಂತ್ರಣ (ಉಕ್ರೇನ್ ಸಂಘರ್ಷದ ಶಾಂತಿಯುತ ಪರಿಹಾರಕ್ಕಾಗಿ ಒತ್ತಾಯಿಸುತ್ತಲೇ) ಕ್ರಮಗಳ ಮೂಲಕ ಹಣದುಬ್ಬರವನ್ನು ನಿಯಂತ್ರಿಸುವ, ಒಂದು ಪ್ರಾಮಾಣಿಕ ಪ್ರಜಾಸತ್ತಾತ್ಮಕ ಕಾರ್ಯತಂತ್ರವು ಈ ಹೊತ್ತಿನ ನಿಜವಾದ ಅಗತ್ಯವಾಗಿದೆ.

ನಿಜಾಂಶಗಳು ಮತ್ತು ಸುಳ್ಳುಪುರಾಣಗಳ ನಡುವಿನ ವ್ಯತ್ಯಾಸಗಳನ್ನು ಅರಿತುಕೊಳ್ಳಲು.. ..

ಪುಟ 2 ರಿಂದ

ಎಷ್ಟು ಸಾಧ್ಯವೋ ಅಷ್ಟು ಜನರನ್ನು ಸೇರಿಸಬೇಕು ಮತ್ತು ಫಿರಂಗಿ, ಮದ್ದುಗುಂಡು ಹಾಗೂ ಯುದ್ಧ ತಂತ್ರಗಳ ಕಾರ್ಖಾನೆಗಳಿಗೆ ಪ್ರವೇಶಪಡೆಯಬೇಕು . . .

ಮತ್ತು ನಾವು ಗಮನಿಸಬೇಕಾದ್ದೇನೆಂದರೆ ಯುದ್ಧಕ್ಕೆ ಜಪಾನ್ ಪ್ರವೇಶ ಮಾಡಿರುವುದರಿಂದ ಅದು ಬ್ರಿಟಿಷರ ಶತೃಗಳಿಂದ ನೇರವಾದ ಹಾಗೂ ಹಠಾತ್ತಾದ ದಾಳಿಗೆ ನಮ್ಮನ್ನು ಈಡುಮಾಡಿದೆ. ಅದರ ಪರಿಣಾಮವಾಗಿ, ನಾವು ಇಷ್ಟಪಡುತ್ತೇವೋ ಬಿಡುತ್ತೇವೋ, ಯುದ್ಧದ ವಿನಾಶಕಾರಿ ದಾಳಿಗಳಿಂದ ನಾವು ನಮ್ಮದೇ ಆದ ಮನೆ ಮಾರುಗಳನ್ನು ರಕ್ಷಿಸಿಕೊಳ್ಳಬೇಕಾಗುತ್ತದೆ ಮತ್ತು ಭಾರತವನ್ನು ರಕ್ಷಿಸುವ ಸರ್ಕಾರದ ಯುದ್ಧ ಸನ್ನಾಹವನ್ನು ತೀವ್ರಗೊಳಿಸುವುದರಿಂದ ಮಾತ್ರವೇ ಇದು ಸಾಧ್ಯವಾಗುತ್ತದೆ. ಆದ್ದರಿಂದ ಹಿಂದೂ ಮಹಾಸಭಾದವರೆಲ್ಲರೂ ಒಂದು ನಿಮಿಷವನ್ನೂ ವ್ಯರ್ಥಮಾಡದೇ ಹಿಂದೂಗಳನ್ನು ವಿಶೇಷವಾಗಿ ಬಂಗಾಳ ಹಾಗೂ ಅಸ್ಸಾಮ್ ಪ್ರಾಂತಗಳಲ್ಲಿ ಎಷ್ಟು ಪರಿಣಾಮಕಾರಿಯಾಗಿ ಸಾಧ್ಯವೋ ಅಷ್ಟು ಎಚ್ಚರಿಸಿ ಎಲ್ಲಾ ಸಶಸ್ತ್ರ ಸೇನಾ ದಳಗಳನ್ನು ಪ್ರವೇಶಿಸಲು ಹುರಿದುಂಬಿಸಬೇಕು.

ಸಾವರ್ಕರ್ ಜಾತಿವಾದ ಹಾಗೂ ಜನಾಂಗವಾದದ ನಿಷ್ಠಾವಂತ ಹಠಮಾರಿಯಾಗಿ ಮತ್ತು ಜೀವನದುದ್ದಕ್ಕೂ ಸಾಮ್ರಾಜ್ಯವಾದದ ಬೆಂಬಲಿಗನಾಗಿ ಉಳಿದಿದ್ದರು. ಇಲ್ಲಿ ಮರೆಯಲೇ ಬಾರದ ಸತ್ಯ ಸಂಗತಿಯೇನೆಂದರೆ ಸಾವರ್ಕರ್ ಅವರಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಾವರ್ಕರ್ ಬಂಟರು ಅಡಗಿಸಿಟ್ಟಿದ್ದಾರೆ, ಏಕೆಂದರೆ ದೇಶದ ಜನರಿಗೆ ನಿಜವಾದ ಸಾವರ್ಕರ್ ಗೊತ್ತಾದರೆ ಹಿಂದುತ್ವ ಬಂಟರಿಗೆ ದೊಡ್ಡ ಕೇಡಾಗುತ್ತದೆ ಮತ್ತು ಜನರು ಇದನ್ನು ಇತಿಹಾಸದ ಕಸದ ಬುಟ್ಟಿಗೆ ಎಸೆದಾರು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಸ್ವಾಭಿಮಾನ ಇರುವ ಹಾಗೂ ವಸಾಹತುವಿರೋಧಿ ಪರಂಪರೆಯಲ್ಲಿ ಸ್ವಲ್ಪವಾದರೂ ನಂಬಿಕೆ ಇರುವ ಯಾವ ಭಾರತೀಯನೂ 'ವೀರ' ಸಾವರ್ಕರರ ವೈಭವೀಕರಣವನ್ನು ಸಹಿಸುವುದಿಲ್ಲ. ಹಿಂದುತ್ವ ಬಂಟರು ಈ ಕುಲಗೆಟ್ಟ ಪರಂಪರೆಯನ್ನು ಏಕೆ ಅಡಗಿಸಿಡುತ್ತಾರೆ ಎನ್ನುವುದು ಅರ್ಥವಾಗುವಂಥದೆ. ಆದರೆ ಪ್ರಜಾಸತ್ತಾತ್ಮಕ-ಜಾತ್ಯತೀತ ಭಾರತೀಯ ಸಮಾಜದ ಪರವಾಗಿ ಇರುತ್ತೇವೆ ಎನ್ನುವವರು ಏಕೆ ಸ್ವಾತಂತ್ರ್ಯಾನಂತರದ ಸರಿಸುಮಾರು ಒಂದು ಶತಮಾನದ ಕಾಲ ಈ ದಾಖಲೆಗಳನ್ನು ಬಹಿರಂಗಪಡಿಸದೆ ಇಟ್ಟರು ಎನ್ನುವುದು ಅಚ್ಚರಿಯ ಸಂಗತಿಯಾಗಿದೆ.

ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡುವ ಹಾಗೂ ವಂಚನೆಯಲ್ಲಿ ತೊಡಗಿರುವ ಹಿಂದುತ್ವ ಬಂಟರನ್ನು ಈ ದಾಖಲೆಗಳು ನಿಜಕ್ಕೂ ಧೈರ್ಯಗೆಡಿಸುತ್ತವೆ. ಮಾಹಿತಿ ಇಲ್ಲದ ಮುಖಂಡರು ಮತ್ತು ಈ 'ವೀರ' ಸಾವರ್ಕರರನ್ನು ವೈಭವೀಕರಿಸುವ ಜನರು ಈ ನಿಜಾಂಶಗಳು ಮತ್ತು ಸುಳ್ಳುಪುರಾಣಗಳ ನಡುವಿನ ವ್ಯತ್ಯಾಸಗಳನ್ನು ಅರಿತುಕೊಳ್ಳುತ್ತಾರೆ ಎಂಬ ಭರವಸೆ ಇದೆ.

(ಮುಂದುವರೆಯುವುದು)

ಬಿಜೆಪಿ ಐಟಿ ಸೆಲ್ ಮುಖ್ಯಸ್ಥರ ದೂರಿನ ಮೇಲೆ 'ದಿ ವೈರ್' ಸುದ್ದಿ ಸಂಸ್ಥೆಯ ಮೇಲೆ ದೆಹಲಿ ಪೊಲೀಸ್ ದಾಳಿ–ಪತ್ರಕಾರಿತೆಯನ್ನು ಅಪರಾಧೀಕರಿಸುವ ಹುನ್ನಾರ: 'ಡಿಜಿಪಬ್' ಖಂಡನೆ

ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವಿಯಾ ಅವರು ಸ್ವತಂತ್ರ ಡಿಜಿಟಲ್ ಸುದ್ದಿ ಸಂಸ್ಥೆ 'ದಿ ವೈರ್' ಈಗಾಗಲೇ ಹಿಂಪಡೆದಿರುವ ಸುದ್ದಿ ಮಾಲೆಯ ವಿರುದ್ಧ ದೂರು ದಾಖಲಿಸಿದ ಎರಡು ದಿನಗಳ ನಂತರ ದಿಲ್ಲಿ ಪೊಲೀಸರು ಅಕ್ಟೋಬರ್ 31 ರಂದು ಈ ಸುದ್ದಿ ಮಾಧ್ಯಮದ ಸಂಸ್ಥಾಪಕ ಸಂಪಾದಕರಾದ ಸಿದ್ಧಾರ್ಥ್ ವರದರಾಜನ್, ಎಂ.ಕೆ. ವೇಣು ಮತ್ತು ಉಪಸಂಪಾದಕರಾದ ಜಾಹ್ನವಿ ಸೇನ್ ಅವರ ನಿವಾಸಗಳ ಮೇಲೆ ದಾಳಿ ನಡೆಸಿದ್ದಾರೆ ಎಂದು ವರದಿಯಾಗಿದೆ.

ದೆಹಲಿ ಪೊಲೀಸರು ದಾಖಲಿಸಿದ ಪ್ರಥಮ ಮಾಹಿತಿ ವರದಿಯ ನಂತರ ಮಾಳವಿಯಾ ಸಲ್ಲಿಸಿದ ದೂರಿನಲ್ಲಿ, ದಿ ವೈರ್ ಮೇಲೆ ವಂಚನೆ, ಫೋರ್ಜರಿ, ಮಾನನಷ್ಟ ಮತ್ತು ಕ್ರಿಮಿನಲ್ ಪಿತೂರಿಯ ಆರೋಪ ಹೊರಿಸಲಾಗಿದ. ಈ ಮಾಲೆಯ ಸತ್ಯಾಸತ್ಯತೆಯನ್ನು ಮೆಟಾ ನಿರಾಕರಿಸಿದೆ, ಇದರಲ್ಲಿ ಬಳಸಿದ ದಾಖಲೆಗಳು ಮತ್ತು ಇಮೇಲ್‌ಗಳನ್ನು "ಸೃಷ್ಟಿಸಲಾಗಿದೆ" ಎಂದು ಆರೋಪಿಸಿದಾಗ, ಅಕ್ಟೋಬರ್ 23 ರಂದು 'ದಿ ವೈರ್' ಈ ಲೇಖನ ಮಾಲೆಯನ್ನು ಪ್ರಕಟಿಸುವ ಮೊದಲು ಸೂಕ್ತ ಪರಿಶೀಲನೆ ಮತ್ತು ಶ್ರಮವಹಿಸುವಲ್ಲಿ ಲೋಪಗಳಾಗಿವೆ ಎಂದು ಒಪ್ಪಿಕೊಳ್ಳುತ್ತ ಅದನ್ನು ಹಿಂತೆಗೆದುಕೊಂಡು ತನ್ನ ವಿಶಾಲ ಓದುಗ ಬಳಗದ ಕ್ಷಮೆ ಕೋರಿತ್ತು. ಅಲ್ಲದೆ, ಇದರಲ್ಲಿ ತಮ್ಮ ಪ್ರಮುಖ ತಂತ್ರಜ್ಞಾನ ತಜ್ಞ ದೇವೇಶ್ ಕುಮಾರ್ ತಮ್ಮನ್ನು "ವಂಚಿಸಿದ್ದಾರೆ" ಎಂದು ಆರೋಪಿಸಿ ಅವರ ವಿರುದ್ಧ ದೂರು ದಾಖಲಿಸಿತ್ತು. ಈ ವ್ಯಕ್ತಿ ಯಾರ ಕುಮ್ಮಕ್ಕಿನ ಮೇಲೆ ಈ ಸುದ್ದಿಗಳನ್ನು ತಮಗೆ ಒದಗಿಸಿದರು ಎಂಬುದು ಮುಂದೆ ನ್ಯಾಯಾಂಗ ಪ್ರಕ್ರಿಯೆಗೆ ಒಳಪಡುತ್ತದೆ, ಆದರೆ ಇಲ್ಲಿ ವೈರ್‌ನ ಹೆಸರುಗೆಡಿಸುವ ದುರುದ್ದೇಶ ಸ್ವಯಂವೇದ್ಯ ಎಂದೂ ಅದು ಹೇಳಿದೆ.

ಗಮನಾರ್ಹ ಸಂಗತಿಯೆಂದರೆ ಎಫ್‌ಐಆರ್‌ನಲ್ಲಿ ವರದರಾಜನ್, ವೇಣು ಮತ್ತು ಸೇನ್ ಮತ್ತು ಇನ್ನೊಬ್ಬ ಸಂಪಾದಕರಾದ ಸಿದ್ದಾರ್ಥ ಭಾಟಿಯ ಹೆಸರುಗಳನ್ನು ನಮೂದಿಸಲಾಗಿದೆ, ಆದರೆ ಈ ಸರಣಿಯ ಒಂದು ಲೇಖನದಲ್ಲಿ ದೇವೇಶ್ ಕುಮಾರ್ ಅವರ ಹೆಸರಿದ್ದರೂ ಎಫ್‌ಐಆರ್ ನಲ್ಲಿ ಅದನ್ನು ದಾಖಲಿಸಿಲ್ಲ ಎಂದೂ ಹೇಳಲಾಗಿದೆ.

ಈ ನಾಲ್ಕು ಪತ್ರಕರ್ತರ ಫೋನುಗಳು, ಕಂಪ್ಯೂಟರುಗಳು ಮತ್ತು ಐಪ್ಯಾಡುಗಳನ್ನು ಕಿತ್ತುಕೊಳ್ಳಲಾಗಿದ್ದು, ಅವುಗಳ ಹ್ಯಾಶ್ ವ್ಯಾಲ್ಯು ಮತ್ತು ಕ್ಲೋನ್ ಮಾಡಿದ ಪ್ರತಿಗಳನ್ನು ಕೊಡಬೇಕು ಮತ್ತು ಈ ಸಾಧನಗಳನ್ನು ತಟಸ್ಥ ಸ್ಥಳದಲ್ಲಿಡಬೇಕು ಎಂದು ಆಗ್ರಹಿಸಿರುವುದಾಗಿ 'ದಿ ವೈರ್' ಹೇಳಿಕೆಯೊಂದರಲ್ಲಿ ತಿಳಿಸಿದೆ.

ಈ ನಾಲ್ಕು ಮಂದಿ ಪೋಲೀಸ್ ತನಿಖೆಯೊಂದಿಗೆ ಸಹಕರಿಸಿದರೂ, ವೈರ್ ಕಚೇರಿಯಲ್ಲೂ ಶೋಧನೆ ನಡೆಸಲಾಯಿತು, ಈ ವೇಳೆಯಲ್ಲಿ ಸಂಸ್ಥೆಯ ವಕೀಲರನ್ನು ತಳ್ಳಾಡಲಾಯಿತು, ಮತ್ತು ಕಚೇರಿಯಲ್ಲಿದ್ದ ಎರಡು ಕಂಪ್ಯೂಟರುಗಳ ಹಾರ್ಡ್ ಡಿಸ್ಕ್ ಗಳನ್ನು ಅವುಗಳನ್ನು ಕೆಡಿಸದಂತೆ ತಡೆಯಲು ಕೊಡಬೇಕಾಗಿದ್ದ ಹ್ಯಾಷ್ ನಂಬರುಗಳನ್ನಾಗಲೀ ಕ್ಲೋನ್ ಪ್ರತಿಗಳನ್ನಾಗಲೀ ಕೊಡದೆ ದಿಲ್ಲಿ ಪೋಲೀಸರು ಕೊಂಡೊಯ್ದಿದ್ದಾರೆ ಎಂದೂ ವೈರ್ ಹೇಳಿದೆ.

ಡಿಜಿಪಬ್ ಇಂಡಿಯಾ ಖಂಡನೆ

ದಿ ವೈರ್ ಪತ್ರಕರ್ತರ ಮನೆಗಳ ಮೇಲೆ ದಿಲ್ಲಿ ಪೊಲೀಸರು ದಾಳಿ ನಡೆಸಿರುವುದನ್ನು ಸ್ವತಂತ್ರ ಡಿಜಿಟಲ್ ಸುದ್ದಿ ಪೋರ್ಟಲ್‌ಗಳ ಸಮೂಹವಾದ 'ಡಿಜಿಪಬ್ ಇಂಡಿಯಾ' ಸಾರಾಸಗಟಾಗಿ ಖಂಡಿಸಿದೆ.

"ಸುಳ್ಳು ವರದಿಯನ್ನು ಪ್ರಕಟಿಸುವ ಪತ್ರಕರ್ತ ಅಥವಾ ಮಾಧ್ಯಮ ಸಂಸ್ಥೆ ಸಹಪತ್ರಕರ್ತರು ಮತ್ತು ನಾಗರಿಕ ಸಮಾಜಕ್ಕೆ ಜವಾಬುದಾರರಾಗಿರಬೇಕು. ಆದರೆ ಪೊಲೀಸರು ಕೇವಲ ಆಡಳಿತ ಪಕ್ಷದ ಒಬ್ಬ ವಕ್ತಾರ ಸಲ್ಲಿಸಿದ ಮಾನನಷ್ಟದ ಖಾಸಗಿ ದೂರಿನ ಮೇಲಷ್ಟೇ ಸಂಪೂರ್ಣವಾಗಿ ಆಧರಿಸಿ ತಕ್ಷಣವೆ ಮತ್ತು ಲಂಗುಲಗಾಮಿಲ್ಲದೆ ಸಂಪಾದಕರ ಮನೆಗಳ ಶೋಧನೆಯನ್ನು ನಡೆಸುವುದರಲ್ಲಿ ದುರುದ್ದೇಶದ ವಾಸನೆ ಬರುತ್ತದೆ" ಎಂದು ಡಿಜಿಪಬ್ ಹೇಳಿದೆ.

ಈ ಪೋಲಿಸ್ ಶೋಧಗಳನ್ನು "ದಿ ವೈರ್ ಹೊಂದಿರುವ ಗೌಪ್ಯ ಮತ್ತು ಸೂಕ್ಷ್ಮ ಮಾಹಿತಿಯನ್ನು ವಶಪಡಿಸಿಕೊಳ್ಳಲು ಮತ್ತು ನಕಲು ಮಾಡಲು ನೆಪವಾಗಿ ಬಳಸುವ" ಅಪಾಯವಿದೆ ಎಂದೂ ಡಿಜಿಪಬ್ ಗಂಭೀರ ಕಳವಳವನ್ನು ವ್ಯಕ್ತಪಡಿಸಿದೆ. ಈ ಪೊಬ್ಲಿಸ್ ತನಿಖೆಯು "ಭಾರತದಲ್ಲಿ ಈಗಾಗಲೇ ಅಪಾಯಕ್ಕೀಡಾಗಿರುವ ಪತ್ರಿಕೋದ್ಯಮ ಸ್ಥಿತಿಯನ್ನು ಇನ್ನಷ್ಟು ಹದಗೆಡಿಸುವ ಸಾಧನ" ಆಗಬಹುದು ಎಂದು ಅದು ಆತಂಕ ವ್ಯಕ್ತಪಡಿಸಿದೆ.

ತಮ್ಮ ಪ್ರಮುಖ ತಂತ್ರಜ್ಞಾನ ತಜ್ಞ ದೇವೇಶ್ ಕುಮಾರ್ ತಮ್ಮನ್ನು "ವಂಚಿಸಿದ್ದಾರೆ" ಎಂದಿರುವ ದಿ ವೈರ್, ಈ ಸರಣಿಯನ್ನು ಹಿಂತೆಗೆದುಕೊಳ್ಳುವುದರ ಜೊತೆಗೆ ತನ್ನ ಅಪಾರ ಓದುಗರ ಕ್ಷಮೆ ಯಾಚಿಸುವುದಲ್ಲದೆ, ಇಡೀ ವ್ಯವಹಾರದ ಬಗ್ಗೆ ಸರಿಯಾದ ಶ್ರದ್ಧೆಯಿಂದ ಆಂತರಿಕ ವಿಚಾರಣೆಯನ್ನು ನಡೆಸುವುದಾಗಿಯೂ ಹೇಳಿದೆ.

ಯಾವುದೇ ನ್ಯಾಯಪೂರ್ಣ ತನಿಖೆ ಕಾನೂನಿನ ನಿಯಮಗಳನ್ನು ಪಾಲಿಸಬೇಕು, ಅದನ್ನು ಪತ್ರಕಾರಿತೆಯನ್ನು ಅಪರಾಧೀಕರಿಸುವ ಉದ್ದೇಶಕ್ಕೆ ಬಳಿಸಿಕೊಳ್ಳಬಾರದು ಎಂದು ಡಿಜಿಪಬ್ ಹೇಳಿದೆ.

ಸಮಾಜವಾದಿ ಆಧುನಿಕರಣಕ್ಕೆ ಕರೆ

ಪುಟ 6 ರಿಂದ

ದೇಶಗಳೊಂದಿಗೆ ಅದು ಅತ್ಯಧಿಕ ವಹಿವಾಟು ಇರುವ ದೇಶವೆಂಬ ಹಗ್ಗಳಿಕೆ ಸಾಧಿಸಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೂಡಿಕೆಯನ್ನು 2.8 ರಷ್ಟಕ್ಕೆ ಹೆಚ್ಚಿಸಿ 5ಜಿ, ಕೃತಕ ಬುದ್ಧಿಮತ್ತೆ ಇತ್ಯಾದಿ ಮುಂಚೂಣಿ ಕ್ಷೇತ್ರಗಳಲ್ಲಿ ಯು.ಎಸ್ ನ್ನು ಹಿಂದಕ್ಕೆ ಹಾಕಿದೆ. 2013–2021 ಅವಧಿಯಲ್ಲಿ ವಾರ್ಷಿಕವಾಗಿ ಸರಾಸರಿ ಶೇ.6.6ರ ದರದಲ್ಲಿ ಬೆಳವಣಿಗೆ ಸಾಧಿಸಿ, ಎಲ್ಲ ಅಭಿವೃದ್ಧ ದೇಶಗಳಿಗಿಂತ ಮತ್ತು ಜಾಗತಿಕ ಸರಾಸರಿ ಬೆಳವಣಿಗೆಯ ಶೇ.2.6 ಕ್ಕಿಂತ ಎಷ್ಟೋ ಹೆಚ್ಚು ಬೆಳವಣಿಗೆ ಸಾಧಿಸಿದೆ. ಇದೇ ಅವಧಿಯಲ್ಲಿ ಜಾಗತಿಕ ಬೆಳವಣಿಗೆಯಲ್ಲಿ ಅತಿ ದೊಡ್ಡ ಪಾಲು (ಶೇ.38.6) ಚೀನಾದ್ದು ಮತ್ತು ಇದು ಜಿ–7 ದೇಶಗಳ ಒಟ್ಟು ಪಾಲಿಗಿಂತ ಹೆಚ್ಚು.

ಈ ಅವಧಿಯ ಆರ್ಥಿಕ ಸಾಧನೆ ಮಾತ್ರವಲ್ಲ, ಸಾಮಾಜಿಕ ಸಾಧನೆಗಳು ಸಹ ಗಮನಾರ್ಹವಾಗಿದೆ. ಈ ಅವಧಿಯಲ್ಲಿ ಚೀನಾದ ಕಡುಬಡತನವನ್ನು ಆಮೂಲಾಗ್ರವಾಗಿ ನಿರ್ಮೂಲನ ಮಾಡಲಾಯಿತು. ಚೀನೀಯರ ತಲಾ ಸರಾಸರಿ ಆದಾಯ 11,890 ಡಾಲರು ಆಗಿದ್ದು ಕಳೆದ ಹತ್ತು ವರ್ಷಗಳಲ್ಲಿ ಇಮ್ಮಡಿಯಾಗಿದೆ. ಚೀನೀಯರ ಜೀವಿತಾವಧಿ 78.2 ವರ್ಷ ಆಗಿದೆ. ಇದು ಜಾಗತಿಕ ಸರಾಸರಿಗಿಂತ 5.2 ವರ್ಷ ಹೆಚ್ಚು. ಚೀನಾ ಜಗತ್ತಿನ ಅತಿ ದೊಡ್ಡ ಶೈಕ್ಷಣಿಕ, ಸಾಮಾಜಿಕ ಭದ್ರತೆ, ಆರೈಕೆ ವ್ಯವಸ್ಥೆಯನ್ನು ಹೊಂದಿದೆ. ಈ ಅವಧಿಯಲ್ಲಿ ಪ್ರತಿ ವರ್ಷ ಸರಾಸರಿ 1.3 ಕೋಟಿ ನಗರ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. 10.4 ಕೋಟಿ ಜನ ವೃದ್ಧ ಪಿಂಚಣಿ ಪಡೆಯುತ್ತಿದ್ದಾರೆ. ಜನಸಂಖ್ಯೆ ಯ ಶೇ. 95 ಪಾಲು ಜನ ಆರೋಗ್ಯ ಸೇವೆ ಪಡೆಯುತ್ತಿದ್ದಾರೆ.

ಇವೆಲ್ಲ ಪಕ್ಷದ ದೇಶದ ಸಾಮೂಹಿಕ ಸಾಧನೆಯಾದರೂ ಷಿ ಜಿಂಪಿಂಗ್ ಅವರ ಪರಿಣಾಮಕಾರಿ ನಾಯಕತ್ವದ ಪಾತ್ರ ಇದರಲ್ಲಿ ಖಂಡಿತವಾಗಿಯೂ ಇದೆ. ಚೀನಾ ಇಂದು ಜಾಗತಿಕವಾಗಿ ಎದುರಿಸುತ್ತಿರುವ ಸವಾಲುಗಳ ಹಿನ್ನೆಲೆಯಲ್ಲಿ ಇಂತಹ ನಾಯಕನನ್ನು ಪಕ್ಷ, ದೇಶ ಮುಂದುವರೆಸಲು ಬಯಸಿದರೆ ಅದು ಅವರ ಆಯ್ಕೆಯಲ್ಲವೇ?

ಜಿಂಪಿಂಗ್ ತಮ್ಮ ವಿರೋಧಿಗಳನ್ನು "ಭ್ರಷ್ಟಾಚಾರ ವಿರುದ್ಧ ಕ್ರಮ'ಗಳ ನೆಪದಲ್ಲಿ ಹಣಿದು ಇದನ್ನು ಸಾಧಿಸಿದ್ದಾರೆ ಎಂಬ ಆಪಾದನೆಯನ್ನು ಪರಿಶೀಲಿಸಲು ಮಹಾಧಿವೇಶ ಅಂಗೀಕರಿಸಿದ ಎರಡೂ ವರದಿಗಳನ್ನು ಪರಿಶೀಲಿಸಬಹುದು. ಕೇಂದ್ರ ಸಮಿತಿಯ ವರದಿಯಲ್ಲಿ "ಭ್ರಷ್ಟಾಚಾರ ಪಕ್ಷದ ಸಾಮರ್ಥ್ಯ ಮತ್ತು ಸತ್ವವನ್ನು ನಾಶ ಮಾಡಬಲ್ಲ ಕ್ಯಾನ್ಸರ್ ಮತ್ತು ಅದರ ವಿರುದ್ಧ ಹೋರಾಟ ಅತ್ಯಂತ ಸಮಗ್ರವಾದ ಸ್ವ–ಸುಧಾರಣೆಯ ವಿಧಾನ" ಎಂದು ಹೇಳಲಾಗಿದೆ. ಶಿಸ್ತು ಪರಿಶೀಲನೆಯ ಕೇಂದ್ರೀಯ ಕಮಿಶನ್ ನ ವರದಿಯಲ್ಲಿ ಭ್ರಷ್ಟಾಚಾರದ ವಿರುದ್ಧ ಕೈಗೊಳ್ಳಲಾದ ಕ್ರಮಗಳನ್ನು ನಿರೂಪಿಸಲಾಗಿದೆ. 19ನೆಯ ಮಹಾಧಿವೇಶನದ ನಂತರದ ಅವಧಿಯಲ್ಲಿ 74 ಸಾವಿರ ಭ್ರಷ್ಟಾಚಾರದ ಪ್ರಕರಣಗಳ ತನಿಖೆ ನಡೆಸಿ ಶಿಕ್ಷೆ ನೀಡಲಾಗಿದೆ. ಈ ಪ್ರಕರಣಗಳಲ್ಲಿ ಶೇ.48 ಪ್ರಕರಣಗಳು 18ನೆಯ ಮಹಾಧಿವೇಶನ ಮೊದಲಿನವು, ಶೇ.40 ಪ್ರಕರಣಗಳು 18 ಮತ್ತು 19ನೆಯ ಮಹಾಧಿವೇಶನಗಳ ನಡುವಿನವು, ಶೇ.11 19ನೆಯ ಮಹಾಧಿವೇಶನ ನಂತರದವು. ಅಂದರೆ ಭ್ರಷ್ಟಾಚಾರದ ಪ್ರಕರಣಗಳು ದೊಡ್ಡ ಪ್ರಮಾಣದಲ್ಲಿ ಕಡಿಮೆಯಾಗುತ್ತಿವೆ ಎಂದು ಇದರರ್ಥ. ಷಿ ಜಿಂಪಿಂಗ್ ಪ್ರಧಾನ ಕಾರ್ಯದರ್ಶಿಯಾಗುತ್ತಿದ್ದಂತೆ ಭ್ರಷ್ಟಾಚಾರದ ವಿರುದ್ಧ ಯುದ್ಧ ಸಾರಿದ್ದರು. ಈ ಅಂಕೆಸಂಖ್ಯೆಗಳ ಹಿನ್ನೆಲೆಯಲ್ಲಿ "ಭ್ರಷ್ಟಾಚಾರ ವಿರುದ್ಧ ಕ್ರಮ'ಗಳು ನೆಪವಲ್ಲ, ಅವು ಪರಿಣಾಮಕಾರಿಯಾಗಿವೆ ಎಂದು ತಿಳಿಯುತ್ತದೆ. ಈ ಪ್ರಕರಣಗಳಲ್ಲಿ ಕೆಲವು ಉನ್ನತ ಹಂತಗಳ ಪಕ್ಷದ ನಾಯಕರು ಸೇರಿದ್ದರಿಂದ ಇವನ್ನು ವಿರೋಧಿಗಳನ್ನು ಹಣಿಯುವ ಪ್ರಯತ್ನ ಎಂದು ನಿರೂಪಿಸಲಾಗಿದೆ ಅಷ್ಟೇ.

ಹಾಗಿದ್ದರೆ ಈ ಮಾಧ್ಯಮ ವರದಿಗಳಲ್ಲಿ ಬರದ ಮಹಾಧಿವೇಶನದ ಕುರಿತ ಪ್ರಮುಖ ಅಂಶಗಳು ಯಾವುವು?

ಎರಡನೆಯ ಅಂದರೆ 2049ರ ಚೀನಾ ಕ್ರಾಂತಿಯ ಶತಾಬ್ದಿಯ (ಕಳೆದ ವರ್ಷ ಆಚರಿಸಲಾದ ಮೊದಲನೆಯ ಶತಾಬ್ದಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಶತಾಬ್ದಿ) ಹೊತ್ತಿಗೆ 'ಮಹಾನ್ ಆಧುನಿಕ ಸಮಾಜವಾದಿ ದೇಶ'ವನ್ನು ಎರಡು ಹಂತಗಳಲ್ಲಿ ಕಟ್ಟಲು ಕರೆಯು ಮಹಾಧಿವೇಶನದ ಮುಖ್ಯ ಕರೆಯಾಗಿತ್ತು. ಅದು ಪ್ರಮುಖವಾಗಿ ವರದಿಯಾಗಬೇಕಿತ್ತು. ಆದರೆ ಅದನ್ನು ಎಲ್ಲಾ ಮಾಧ್ಯಮಗಳು ಪೂರ್ಣವಾಗಿ ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದವು. ಅದೇ ರೀತಿ ಮೇಲೆ ಹೇಳಲಾದ ಚೀನಾದ (ಅದರಲ್ಲೂ ಸಾಮಾಜಿಕ) ಸಾಧನೆಗಳ ಕುರಿತು ಮೌನವಾಗಿದ್ದವು. 'ಮಹಾನ್ ಆಧುನಿಕ ಸಮಾಜವಾದಿ ದೇಶ'ವನ್ನು



ಕಟ್ಟುವ ಮೊದಲ ಹಂತ 2020–2035ರ ಅವಧಿಯಲ್ಲಿ ಸಮಾಜವಾದಿ ಆಧುನಿಕೀಕರಣವನ್ನು ಸಾಧಿಸುವಂತಹದ್ದು. ಎರಡನೆಯ ಹಂತದ ಅಂದರೆ 2035–2049 ಅವಧಿಯ ಗುರಿ "ಸಮೃದ್ಧವಾದ, ಬಲಶಾಲಿಯಾದ, ಪ್ರಜಾಸತ್ತಾತ್ಮಕ, ಸಾಂಸ್ಕೃತಿಕವಾಗಿ ಮುಂದುವರೆದ, ಸಾಮರಸ್ಯದ ಮತ್ತು ಸುಂದರ ಮಹಾನ್ ಆಧುನಿಕ ಸಮಾಜವಾದಿ ದೇಶ" ವನ್ನು ಕಟ್ಟುವುದು. ಮುಂದಿನ 15 ವರ್ಷಗಳ ಮೊದಲ ಹಂತದ ಅಂದರೆ 'ಸಮಾಜವಾದಿ ಆಧುನಿಕೀಕರಣ'ದ ನಿರ್ದಿಷ್ಟ ಗುರಿಗಳನ್ನು ಗುರುತಿಸಲಾಗಿದೆ.

"ಚೀನಾದ ಕಮ್ಯುನಿಸ್ಟ್ ಪಕ್ಷದ ನಾಯಕತ್ವ ಮತ್ತು ಚೀನೀ ಲಕ್ಷಣಗಳುಳ್ಳ ಸಮಾಜವಾದವನ್ನು ಎತ್ತಿ ಹಿಡಿಯುವುದು; ಅತ್ಯುತ್ತಮ ಗುಣಮಟ್ಟದ ಅಭಿವೃದ್ಧಿ ಪಥ ಅನುಸರಿಸುವುದು; ಪೂರ್ಣ–ಪ್ರಕ್ರಿಯೆಯ ಜನತಾ ಪ್ರಜಾಪ್ರಭುತ್ವವನ್ನು ಬೆಳೆಸುವುದು; ಜನರ ಸಾಂಸ್ಕೃತಿಕ ಜೀವನವನ್ನು ಶ್ರೀಮಂತಗೊಳಿಸುವುದು; ಮನುಕುಲ ಮತ್ತು ಪ್ರಕೃತಿಗಳ ನಡುವೆ ಸಾಮರಸ್ಯವನ್ನು ಪ್ರೋತ್ಸಾಹಿಸುವುದು; ಉತ್ತಮ ಸಮಾನ ಭವಿಷ್ಯವಿರುವ ಜಾಗತಿಕ ಮಾನವ ಸಮುದಾಯವನ್ನು ಕಟ್ಟುವುದು; ಮತ್ತು ಮಾನವ ಮುನ್ನಡೆಯ ಹೊಸ ರೂಪವನ್ನು ಸೃಷ್ಟಿಸುವುದು" ಚೀನಾದ 'ಸಮಾಜವಾದಿ ಆಧುನಿಕೀಕರಣ'ವನ್ನು ಸಾಧಿಸಲು ಅತ್ಯವಶ್ಯವಾದದ್ದು ಎಂದು ಮಹಾಧಿವೇಶನ ಅಂಗೀಕರಿಸಿದ ವರದಿ ಹೇಳುತ್ತದೆ.

"ಭೌತಿಕ ಸಮೃದ್ಧಿ ಮತ್ತು ಸಾಂಸ್ಕೃತಿಕ–ನೈತಿಕ ಶ್ರೀಮಂತಿಕೆ ಸಮಾಜವಾದಿ ಆಧುನಿಕೀಕರಣದ ಮೂಲಭೂತ ಗುರಿಗಳು. ಭೌತಿಕ ಬೇಕುಗಳು ಅಥವಾ ಸಾಂಸ್ಕೃತಿಕ ಬಡತನ ಸಮಾಜವಾದವಲ್ಲ. ಆಧುನಿಕೀಕರಣಕ್ಕೆ ಬೇಕಾದ ಭೌತಿಕ ಅಡಿಪಾಯಗಳನ್ನು ಹಾಕುತ್ತಲೇ, ಜನತೆಯ ಸುಖೀಜೀವನಕ್ಕೆ ಬೇಕಾದ ಭೌತಿಕ ಪರಿಸ್ಥಿತಿಗಳನ್ನು ಉತ್ತಮ ಪಡಿಸುತ್ತಲೇ, ಅತ್ಯುನ್ನತ ಸಮಾಜವಾದಿ ಸಂಸ್ಕೃತಿಯನ್ನು ಬೆಳೆಸಲು ಶ್ರಮಿಸುತ್ತೇವೆ. ಪ್ರಬಲ ಆದರ್ಶಗಳು ಮತ್ತು ಬದ್ಧತೆಗಳನ್ನು ಪೋಷಿಸುತ್ತೇವೆ. ಚೀನಾದ ಸಾಂಸ್ಕೃತಿಕ ಪರಂಪರೆಯನ್ನು ಮುಂದೊಯ್ಯುತ್ತೇವೆ."

"ಉತ್ತಮ ಜೀವನಕ್ಕೆ ಜನತೆಯ ಆಕಾಂಕ್ಷೆಯನ್ನು ಪೂರೈಸುವುದೇ ನಮ್ಮ ಆಧುನಿಕೀಕರಣದ ನಿರಂತರ ಗುರಿ. ನಾವು ಸಾಮಾಜಿಕ ನ್ಯಾಯ ಮತ್ತು ನಿಷ್ಪಕ್ಷಪಾತತೆಯನ್ನು ಕಾಪಾಡಿಕೊಂಡು ಪ್ರೋತ್ಸಾಹಿಸುತ್ತೇವೆ. ಧ್ರುವೀಕರಣವನ್ನು ತಡೆಯುತ್ತಾ ಎಲ್ಲರಿಗೂ ಸಮೃದ್ಧಿಗೆ ಶ್ರಮಿಸುತ್ತೇವೆ"

ಇವು 'ಸಮಾಜವಾದಿ ಆಧುನಿಕೀಕರಣ'ವನ್ನು ಪಕ್ಷ ನಿರ್ವಚಿಸಿದ ಪರಿ. 140 ಕೋಟಿ ಜನ (ಅಭಿವೃದ್ಧ ದೇಶಗಳ ಒಟ್ಟು ಜನಸಂಖ್ಯೆಯಷ್ಟು) ಇರುವ ದೇಶದಲ್ಲಿ ಇಂತಹ ಆಧುನಿಕೀರಣವನ್ನು ಸಾಧಿಸುವ ಕೆಲಸ ಅಗಾಧವಾಗಿ ಸಂಕೀರ್ಣವಾದದ್ದು ಕಷ್ಟಕರವಾದದ್ದು, ತರಾತುರಿಯಲ್ಲಿ ಆಗುವಂಥದ್ದಲ್ಲ, ಅದಕ್ಕೆ ಯಾವುದೇ ಸಿದ್ಧ ಮಾದರಿಗಳಿಲ್ಲ. ಇದನ್ನು ತಾಳ್ಮೆಯಿಂದ ಹಂತ ಹಂತವಾಗಿ ದೀರ್ಘ ಕಾಲದ ಕೆಲಸಗಳೊಂದಿಗೆ ಸಾಧಿಸಬೇಕಾಗಿದೆ ಎಂಬ ಅರಿವು ಚೀನಾ ಕಮ್ಯುನಿಸ್ಟ್ ಪಕ್ಷಕ್ಕಿದೆ.

ಇದಕ್ಕೆ ಇಡೀ ಪಕ್ಷವನ್ನು ಅಣಿ ನೆರೆಸಲು ಪಕ್ಷದ ಸದಸ್ಯರ ಬದ್ಧತೆ, ಸಾಮರ್ಥ್ಯವನ್ನು ಹೆಚ್ಚಿಸಲು ಸಂವಿಧಾನದಲ್ಲಿ ಹಲವು ತಿದ್ದುಪಡಿಗಳನ್ನು ಅಂಗೀಕರಿಸಲಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE November 7-13, 2022 Price: Rs. 10/- Date of Publication: 4 November 2022 RNI No. KARKAN /2006/17926 Posted on 08-11-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2





ರಾಜ್ಯದೆಲ್ಲೆಡೆ 'ಸೌಹಾರ್ದ ದೀಪಾವಳಿ'





"ಒಡೆದ ಮನಸುಗಳ ಒಂದುಗೂಡಿಸುವ, ಕಂಡ ಕನಸುಗಳ ನನಸಾಗಿಸುವ" ಎಂಬ ಆಶಯದೊಂದಿಗೆ 'ಸೌಹಾರ್ದ ದೀಪಾವಳಿ' ಯನ್ನು ರಾಜ್ಯಾದ್ಯಂತ ಆಚರಿಸಲಾಯಿತು.

ಸರ್ವ ಜನತೆಯ ಮನೆ ಮನ ಬೆಳಗಿಸುವ ಹಬ್ಬವಾದ ದೀಪಾವಳಿಯು ಅಜ್ಞಾನ, ಅಂಧಶ್ರದ್ಧೆ, ದ್ವೇಷ ತುಂಬಿದ ಕತ್ತಲೆಯನ್ನು ಹೋಗಲಾಡಿಸಿ, ವಿಜ್ಞಾನ, ವೈಜ್ಞಾನಿಕ ಮನೋಭಾವ ಮತ್ತು ಪ್ರೀತಿ ತುಂಬಿದ ಬೆಳಕನು ಮೂಡಿಸುವ ಆ ಮೂಲಕ ಮಾನವೀಯತೆ ಬೆಳಗಿಸುವ ಆಶಯದೊಂದಿಗೆ ಸೌಹಾರ್ದ ದೀಪಾವಳಿ ಆಚರಿಸಲಾಯ್ತು.

ಇಂದು ದೇಶದ ಆಡಳಿತ ಹಿಂದೂ ಧಾರ್ಮಿಕ ಮೂಲಭೂತವಾದಿಗಳ ಹಿಡಿತಕ್ಕೆ ಸಿಲುಕಿದೆ. ಇವರು ಭಾಷೆ, ಜಾತಿ, ಧರ್ಮ, ದೇವರುಗಳ ಹೆಸರಿನಲ್ಲಿ ದುಡಿಯುವ ಜನರನ್ನು ಒಡೆಯುವ ಪ್ರಯತ್ನಗಳನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳನ್ನು ವೇಗವಾಗಿ ಜಾರಿಗೊಳಿಸಲಾಗುತ್ತಿದೆ. ಇದರಿಂದಾಗಿ ಜನತೆಯ ಸಂಕಷ್ಟಗಳು ಹೆಚ್ಚಾಗಿವೆ. ಹಸಿವು, ಬಡತನ, ನಿರುದ್ಯೋಗ, ಅಗತ್ಯ ವಸ್ತುಗಳ ಬೆಲೆಯೇರಿಕೆ, ಕೃಷಿ ಬಿಕ್ಕಟ್ಟು ಇವುಗಳು ಜನರನ್ನು ಇಂದೆಂದೂ ಇಲ್ಲದಷ್ಟು ಭಾಧಿಸುತ್ತಿವೆ. ಸರ್ಕಾರದ ಇಂತಹ ಜನವಿರೋಧಿ ನೀತಿಗಳ ವಿರುದ್ದ ಜನತೆ ಒಟ್ಟಾಗಿ ಹೋರಾಟ ಮಾಡದಂತೆ ತಡೆಯುವ ಪ್ರಯತ್ನದ ಭಾಗವಾಗಿಯೂ, ಜನತೆ ತಮ್ಮ ನೈಜ ಸಮಸ್ಯೆಗಳ ಬಗ್ಗೆ ಚರ್ಚಿಸದಂತೆ ಮಾಡುವ ಕುತಂತ್ರವನ್ನು ಕೋಮುವಾದಿಗಳು ಈ ಮೂಲಕ ಮಾಡತೊಡಗಿದ್ದಾರೆ.

ಜನವಾದಿ ಮಹಿಳಾ ಸಂಘಟನೆ, ಸಿಐಟಿಯು, ಆಟೋರಿಕ್ಷಾ ಚಾಲಕರ ಸಂಘಟನೆ, ಕಟ್ಟಡ ಕಾರ್ಮಿಕರ ಸಂಘಟನೆ, ರೈತ ಮತ್ತು ಕೃಷಿಕೂಲಿಕಾರರ ಸಂಘಟನೆ ಸೇರಿದಂತೆ ಹಲವು ಸಾಮೂಹಿಕ ಸಂಘಟನೆಗಳ ಮತ್ತು ಸಮಾನ ಮನಸ್ಕರ ನೇತೃತ್ವದಲ್ಲಿ ರಾಜ್ಯದ ಹಲವು ಪ್ರದೇಶಗಳಲ್ಲಿ ದೀಪಗಳನ್ನು ಹಚ್ಚಿ ಸೌಹಾರ್ದ ದೀಪಾವಳಿ ಆಚರಣೆ ಮಾಡಿದ ವರದಿಗಳು ಇಲ್ಲಿವೆ.

ಬೆಂಗಳೂರು; ದಾಸರಹಳ್ಳಿ ಸಮೀಪದ ರವೀಂದ್ರ ನಗರದಲ್ಲಿ ನಡೆದ ಆಚರಣೆಯಲ್ಲಿ ಜಿ ಎನ್ ನಾಗರಾಜ್ ಮತ್ತು ಅವರ ಬಾಳ ಸಂಗಾತಿ ಭಾಗಿಯಾಗಿದ್ದರು. ಹುಳ್ಳಿ ಉಮೇಶ್, ವಿಜಯಲಕ್ಷ್ಮಿ, ಸಿ ಎನ್ ಶ್ರೀನಿವಾಸ್, ಸುಶೀಲಮ್ಮ ಸೇರಿದಂತೆ ಹಲವರು ಭಾಗಿಯಾಗಿದ್ದರು.



ಬನಶಂಕರಿ: ಇಲ್ಲಿನ ಯಾರಬ್ ನಗರದಲ್ಲಿ ನಡೆದ ಆಚರಣೆಯಲ್ಲಿ ಕೆ ಎಸ್ ವಿಮಲಾ, ಟಿ ಸುರೇಂದ್ರರಾವ್, ಆಟೋಚಾಲಕರ ಸಂಘದ ಬಸವರಾಜು, ಜೆಎಂಎಸ್ ನ ಸಂಗಾತಿಗಳು, ಮನೆಕೆಲಸ ಮಾಡುವ ಮಹಿಳೆಯರು, ಆಟೋಚಾಲಕರು, ಕಟ್ಟಡ ಕಾರ್ಮಿಕರು ಮತ್ತವರ ಕುಟುಂಬದವರು ಹಿಂದು ಮತ್ತು ಮುಸಲ್ಮಾನರು ಭಾಗಿಯಾಗಿದ್ದರು.

ಲಗ್ಗೆರೆ: ಇಲ್ಲಿನ ಇಂದಿರಾ ಪ್ರಿಯದರ್ಶಿನಿ ಕಾಲೋನಿಯಲ್ಲಿ ನಡೆದ ಆಚರಣೆಯಲ್ಲಿ ಎಸ್ ವೈ ಗುರುಶಾಂತ್, ಟಿ ಲೀಲಾವತಿ, ಶಾರದಾ ಟೀಚರ್, ರೇಣುಕಾ, ವಿನೋದ್ ಸೇರಿದಂತೆ ಸಿಐಟಿಯು, ಜೆಎಂಎಸ್, ಕಟ್ಟಡ ಕಾರ್ಮಿಕರ ಸಂಘಟನೆಯ ಕಾರ್ಯಕರ್ತರು ಮತ್ತು ಸ್ಥಳೀಯರು ಭಾಗಿಯಾಗಿದ್ದರು.

ಆರ್.ಟಿ. ನಗರ: ಇಲ್ಲಿ ನಡೆದ ಆಚರಣೆಯಲ್ಲಿ ಕಟ್ಟಡ ಕಾರ್ಮಿಕರ ಸಂಘದ ಸದಸ್ಯರು ಭಾಗಿಯಾಗಿದ್ದರು. ಸಂಘದ ಮುಖಂಡರಾದ ಹನುಮಂತರಾವ್ ಅವಲ್ದಾರ್ ಮತ್ತು ಪುಷ್ಪಲತಾ ಕೆ ಹವಲ್ದಾರ್, ಖಾಸೀಮ್ ಸಾಬ್ ಮತ್ತಿತರು ಭಾಗಿಯಾಗಿದ್ದರು.

ಬಸವನಗುಡಿಯ ತ್ಯಾಗರಾಜನಗರ ಘಟಕ–1 ಮತ್ತು 2ರಲ್ಲಿ, ಕೆಂಗೇರಿ ಮತ್ತು ಶಾಂತಿನಗರ ಈ ಪ್ರದೇಶಗಳಲ್ಲಿ ಜನವಾದಿ ಮಹಿಳಾ ಸಂಘಟನೆಯ ಸದಸ್ಯರು ಸೌಹಾರ್ದ ದೀಪಾವಳಿ ಆಚರಿಸಿದರು. ತ್ಯಾಗರಾಜನಗರದಲ್ಲಿ ಆಕರ್ಷಕ ರಂಗೋಲಿ ಬಿಡಿಸಿ, ಅದರ ಮೇಲೆ ದೀಪಗಳ ಸಾಲನ್ನಿಟ್ಟು ದೀಪ ಹಚ್ಚುವ ಮೂಲಕ ಆಚರಣೆ ಮಾಡಿದರು. ಸಂಘದ ಮುಖಂಡರಾದ ಬಸಮ್ಮ, ಮಾದೇವಿ, ಪಾರ್ವತಿ, ಉಮಾ, ವಾಣಿ, ಶುಭ, ಚಂದ್ರ, ಗಾಯಿತ್ರಿ, ಶಶಿಕಲಾ, ಶಿವಮ್ಮ, ಲತಾ, ಚೌಡಮ್ಮ ಇನ್ನಿತರರು ಭಾಗಿಯಾಗಿದ್ದರು.

ಕೆಂಗೇರಿ: ನಾಯಂಡಹಳ್ಳಿಯಲ್ಲಿ ಡಿವೈಎಫ್ ಐ ಮತ್ತು ಜೆಎಂಎಸ್ ಸಂಘಟನೆಗಳ ನೇತೃತ್ವದಲ್ಲಿ ನಡೆದ ಆಚರಣೆಯಲ್ಲಿ ರವಿಕುಮಾರ್, ಗೀತಾ ಮತ್ತಿತರರು ಭಾಗಿಯಾಗಿದ್ದರು.

ಮಂಗಳೂರು: ಹ್ಯಾಮಿಲ್ಟನ್ ವೃತ್ತದಲ್ಲಿ ಸಮಾನ ಮನಸ್ಕರು ಜೊತೆ ಸೇರಿ ಸೌಹಾರ್ದ ದೀಪಾವಳಿ ಆಚರಿಸಿದರು. ಡಿವೈಎಫ್ ಐ ಮುಖಂಡರಾದ ಮುನೀರ್ ಕಾಟಿಪಳ್ಳ, ಮಾಜಿ ಉಪ ಮೇಯರ್ ಮಹಮ್ಮದ್ ಕುಂಜತ್ತಬೈಲ್, ಕಾರ್ಪೊರೇಟರ್ ಅಬ್ದುಲ್ ಲತೀಫ್, ಸುನಿಲ್ ಕುಮಾರ್ ಬಜಾಲ್, ನವೀನ್ ಕೊಂಚಾಡಿ, ಮನೋಜ್ ವಾಮಂಜೂರು, ತಯ್ಯೂಬ್ ಬೆಂಗರೆ, ಅಸುಂತ ಡಿಸೋಜ, ಕ್ವೀನಿ ಪರ್ಸಿ, ಆನಂದ್, ಶಾಹಿರಾ ಮರಿಯಂ, ಶಹನಾಬ್, ಸೀಮಾ ಸೇರಿದಂತೆ ಹಲವರು ಭಾಗಿಯಾಗಿದ್ದರು.

ಮಂಗಳೂರಿನ ಪಕ್ಕಲಡ್ಕ ಯುನಕ ಮಂಡಳಿ ಆಶ್ರಯದಲ್ಲಿ ನಡೆದ ಆಚರಣೆಯಲ್ಲಿ ಪಕ್ಕಲಡ್ಕ ಮಸೀದಿ ಕಾರ್ಯದರ್ಶಿ ಹಬೀಬುಲ್ಲ, ಕಾರ್ಪೊರೇಟರ್ ಪ್ರವೀಣ್ ಚಂದ್ರ ಅಳ್ವ, ಲಾರೆನ್ಸ್ ಡಿಸೋಜ, ನಾದ ಮಣಿ ನಾಲ್ಕೂರು, ಲೋಕೇಶ್ ಎಂ, ಡಿವೈಎಫ್ ಐ ಮುಖಂಡ ಜಗದೀಶ್ ಕುಮಾರ್ ಇನ್ನಿತರರು ಭಾಗಿಯಾಗಿದ್ದರು.



ಉಡುಪಿ; ಉದ್ಯಾವರ ಸಂತ ಫ್ರಾನ್ಸಿಸ್ ಝೇವಿಯರ್ ದೇವಾಲಯದ ಮುಂಭಾಗದಲ್ಲಿ ಸೌಹಾರ್ದ ಸಮಿತಿ ಉದ್ಯಾವರ ಇದರ ವತಿಯಿಂದ ಸೌಹಾರ್ದ ದೀಪಾವಳಿ ಆಚರಿಸಲಾಯಿತು. ದೇವಾಲಯದ ಮುಂಭಾಗದಲ್ಲಿ ದೀಪಗಳನ್ನು ಹಚ್ಚಲಾಗಿತ್ತು. ದೇವಾಲಯದ ಸಹಾಯಕ ಧರ್ಮಗುರು ವಂ.ಫಾ. ಲಿಯೊ ಪ್ರವೀಣ್ ಡಿಸೋಜ ಸೌಹಾರ್ದತೆಯ ಸಂದೇಶ ನೀಡಿದರು. ಸೌಹಾರ್ದ ಸಮಿತಿಯ ಅಧ್ಯಕ್ಷ ವಿಲ್ಫ್ರೇಡ್ ಡಿಸೋಜ, ಸ್ಟೀವನ್ ಕುಲಾಸೊ, ಪ್ರತಾಪ್ ಕುಮಾರ್ ಉದ್ಯಾವರ, ರೊನಾಲ್ಡ್ ಮನೋಃರ್ ಕರ್ಕಡ, ರಿಯಾಜ್ ಪಳ್ಳಿ, ಜೆರಾಲ್ಡ ಪಿರೇರಾ, ಇನ್ನಿತರರು ಭಾಗಿಯಾಗಿದ್ದರು.

ಕಾರವಾರ: ಕವಿ ಮಾಧವಿ ಭಂಡಾರಿಯವರಿಂದ ಹಾಡು 'ಬಾನೊಂದು ಭುವಿಯೊಂದು ನೆಲವೊಂದು ಜಲವೊಂದು ಹಾಡಿನೊಂದಿಗೆ ಸಹಯಾನದ ಅಂಗಳದಲ್ಲಿ ಆರ್ ವಿ ನೆನಪಿನಲ್ಲಿ ಸೌಹಾರ್ದ ದೀಪಾವಳಿ ಆಚರಿಸಲಾಯ್ತು. ಗಣೇಶ್ ಭಂಡಾರಿಯವರ ಅಧ್ಯಕ್ಷತೆಯಲ್ಲಿ, ಮಂಜುನಾಥ್ ಶೆಟ್ಟಿ, ಯಮುನಾ ಗಾಂವ್ಕರ್ ಸಾಂದರ್ಭಿಕ ಮಾತನಾಡಿದರು. ನಿತಿನ್, ಅದಿತಿ, ಭಾಸ್ಕರ್, ಅಭಯ್, ಮೇಘಾ, ಶಂಕರ್ ಗೌಡ, ಸ್ರುಜಲ, ಶ್ಯಾಮಲಾ ಇತರರು ಭಾಗಿಯಾಗಿದ್ದರು.

ಗುಲ್ಬರ್ಗ: ನಗರದ ಶಾಜಿಲಾನಿ ಮೊಹೊಲ್ಲಾದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ವತಿಯಿಂದ ಸೌಹಾರ್ದ ದೀಪಾವಳಿ ಆಚರಿಸಿದರು. ಸಂಘಟನೆಯ ರಾಜ್ಯಾಧ್ಯಕ್ಷೆ ಡಾ. ಮೀನಾಕ್ಷಿ ಬಾಳಿ, ಉಪಾಧ್ಯಕ್ಷೆ ಕೆ. ನೀಲಾ, ಜಿಲ್ಲಾ ಮುಖಂಡರಾದ ಪದ್ಮಿನಿ ಕಿರಣಗಿ, ಜಗದೇವಿ ನೂಲಕರ್ ಇವರೊಂದಿಗೆ ಅಮೀನಾ ಬೇಗಂ, ಸಬಿಹಾ ಮೇಡಂ, ಖೈರುನ್ನೀಸಾ, ನಸಿಮಾ ಬೇಗಂ, ಬದರ್ ಮತ್ತು ಮೊಹಲ್ಲಾದ ಮಹಿಳೆಯರು ಮಕ್ಕಳು ಭಾಗಿಯಾಗಿದ್ದರು.

ಮತ್ತೊಂದು ಆಚರಣೆಯಲ್ಲಿ ಆದ್ ಶಂಕರಯ್ಯ, ಘಂಟಿ, ಕೆ ನೀಲಾ, ದಿಲೀಪ್ ನಾಗೋರ್, ರಾಯಪ್ಪ ಮತ್ತಿತರು ಹಾಡುಗಳನ್ನು ಹಾಡಿದರು. ಸಿಹಿ ಹಂಚಿ ಸಂಭ್ರಮಿಸಿದರು. ಪ್ರತಾಪ್ ಸಿಂಗ್, ತಿವಾರಿ ದಂಪತಿಗಳು, ಆರ್ ಕೆ ಹುಡುಗಿ, ಇಕ್ಕಳಕೀ, ಅಲ್ತಾಫ್ ಹುಸೈನ್, ಜಾವೇದ್ ಹುಸೈನ್, ಶಹನಾಜ್ ಅಖ್ತರ್, ಬಸವ ಪ್ರಭು, ಮುಂತಾದವರು ಭಾಗಿಯಾಗಿದ್ದರು.

ಮಂಡ್ಯ: ಜಿಲ್ಲೆಯ ಮಳವಳ್ಳಿಯಲ್ಲಿ ಜೆಎಂಎಸ್, ಡಿವೈಎಫ್ ಐ, ಬೀದಿಬದಿ ವ್ಯಾಪಾರಿಗಳ ಸಂಘಟನೆಗಳು ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಕೆ ಶೆಟ್ಟಿಹಳ್ಳಿಯಲ್ಲಿ ಜನವಾದಿ ಮಹಿಳಾ ಸಂಘಟನೆ ಏರ್ಪಡಿಸಿದ್ದ ಆಚರಣೆಯಲ್ಲಿ ಮುಸ್ಲೀಂ ಮಹಿಳೆಯರೂ ಸೇರಿದಂತೆ ಹಲವರು ಭಾಗಿಯಾಗಿದ್ದರು., ದೇವಿ, ಸುಶೀಲಾ, ಹೇಮಂತ್, ಮಂಜುಳ ಮುಂತಾದವರು ಭಾಗಿಯಾಗಿದ್ದರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**